ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 18 ಬುಧವಾರ 2022

ಸಂಪುಟ: 43 | ಸಂಚಿಕೆ: 32 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆ ಜಾರಿ

ಬೆಂಗಳೂರು, ಮೇ 17– ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆ ಅಧಿಕೃತವಾಗಿ ಜಾರಿಯಾಗಿದೆ. ಕಳೆದ ವಾರ ನಡೆದ ಕ್ಯಾಬಿನೆಟ್‌ನಲ್ಲಿ ರಾಜ್ಯ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿದ್ದು, ಇದೀಗ ರಾಜ್ಯಪಾಲರು ಅದಕ್ಕೆ ಅಂಕಿತ ಹಾಕಿದ್ದಾರೆ.



ಬೆಳಗಾವಿ ಅಧಿವೇಶನದಲ್ಲಿ ಮತಾಂತರ ನಿಷೇಧ ಕಾಯ್ದೆಗೆ ಅನುಮೋದನೆ ಪಡೆದಿತ್ತು. ಆದರೆ ಪರಿಷತ್‌ನಲ್ಲಿ ಬಹುಮತ ಇಲ್ಲದ್ದಕ್ಕೆ ಕಾಯ್ದೆ ಮಂಡನೆಯನ್ನು ಸರ್ಕಾರ ಮುಂದೂಡಿತ್ತು. ಈ ಬಾರಿ ಬಜೆಟ್ ಅಧಿವೇಶನದಲ್ಲಿ ಕೂಡ ಸರ್ಕಾರ ಮಂಡನೆ ಮಾಡಿರಲಿಲ್ಲ. ಸಚಿವ ಸಂಪುಟ ಸಭೆಯಲ್ಲಿ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಅಧ್ಯಾದೇಶ 2022 ಇದಕ್ಕೆ ಅನುಮೋದನೆ ನೀಡಿತ್ತು. ಸಂಪುಟ ಅನುಮೋದನೆ ಪಡೆದು ರಾಜ್ಯಪಾಲರಿಗೆ ಸುಗ್ರೀವಾಜ್ಞೆ ಹೊರಡಿಸುವಂತೆ ಶಿಫಾರಸು ಮಾಡಲಾಗಿತ್ತು. ಇದೀಗ ರಾಜ್ಯಪಾಲರು ಅಂಕಿತ ಹಾಕಿದ್ದು, ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆ ಅಧಿಕೃತವಾಗಿ ಜಾರಿಗೆ ಬಂದಿದೆ. ಮತಾಂತರ ನಿಷೇಧ ಕಾಯಿದೆ ಯಾವ ಧರ್ಮದ ವಿರುದ್ಧವೂ ರೂಪಿತವಾಗಿಲ್ಲ. ಆದರೆ ಯಾವುದೇ ರೀತಿಯ ಆಮಿಷ ಅಥವಾ ಬಲವಂತದ ಮತಾಂತರಕ್ಕೆ ಅವಕಾಶವಿಲ್ಲ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಬೆಳಗಾವಿ ಅಧಿವೇಶನದಲ್ಲಿ ಮಂಡಿಸಲಾದ ಮತಾಂತರ ನಿಷೇಧ (ತಿದ್ದುಪಡಿ) ವಿಧೇಯಕಕ್ಕೆ ವಿಧಾನಸಭೆಯಿಂದ ▶ 8ನೇ ಪುಟಕ್ಕೆ

ಕಾಯ್ದೆಯಲ್ಲಿ ಏನಿದೆ?: ●ಬಲವಂತದ ಮತಾಂತರ ಜಾಮೀನು ರಹಿತ ಅಪರಾಧ ಮತ್ತು ಅಸಿಂಧು. ●ಉಡುಗೊರೆ, ಕೆಲಸ, ಉಚಿತ ಶಿಕ್ಷಣ, ವಿವಾಹದ ಆಮಿಷ ಒಡ್ಡಿ ಮತಾಂತರ ಮಾಡುವಂತಿಲ್ಲ. ●ಆಮಿಷ ಒಡ್ಡಿ ಮತಾಂತರಗೊಂಡು ವಿವಾಹ ಆಗಿದ್ದರೆ ಆ ಮದುವೆ ಅಸಿಂಧು. ●ಮತಾಂತರದಲ್ಲಿ ಶಿಕ್ಷಣ ಸಂಸ್ಥೆ, ಆಶ್ರಮ, ಧಾರ್ಮಿಕ ಮಿಷನರಿ, ಎನ್‌ಜಿಒಗಳು ಪಾಲ್ಗೊಳ್ಳುವಂತಿಲ್ಲ. ●ಸಾಮೂಹಿಕ ಮತಾಂತರದಲ್ಲಿ ಭಾಗಿಯಾದ ಸಂಸ್ಥೆಗಳಿಗೆ ಸರ್ಕಾರದ ಅನುದಾನ ಸ್ಥಗಿತ. ●ಧರ್ಮ ಬದಲಿಸುವ 60 ದಿನ ಮೊದಲು ಡಿಸಿಗೆ ಅರ್ಜಿ ಸಲ್ಲಿಸಬೇಕು. ●ಮತಾಂತರಗೊಂಡ ಎಸ್‌ಸಿ, ಎಸ್‌ಟಿ ವ್ಯಕ್ತಿಗಳಿಗೆ ಸಿಗುವ ಮೀಸಲಾತಿ, ಇತರೆ ಸೌಲಭ್ಯ ರದ್ದು.

ದಂಡ ಮತ್ತು ಶಿಕ್ಷೆ: ●ಎಸ್‌ಸಿ,ಎಸ್‌ಟಿ ಸಮುದಾಯದವರನ್ನು ಬಲವಂತವಾಗಿ ಮತಾಂತರ ಮಾಡುವಂತಿಲ್ಲ. ●ಅಪ್ರಾಪ್ತರು, ಮಹಿಳೆಯರು, ಬುದ್ಧಿಮಾಂದ್ಯರಿಗೆ ಆಸೆ, ಆಮಿಷ ಒಡ್ಡಿ ಮತಾಂತರ ಮಾಡಬಾರದು. ●ಕಾಯ್ದೆ ಉಲ್ಲಂಘಿಸಿದಲ್ಲಿ ಕನಿಷ್ಠ 3ರಿಂದ 10 ವರ್ಷ ಜೈಲು ಶಿಕ್ಷೆ, 50 ಸಾವಿರ ದಂಡ. ● ಇತರರನ್ನು ಬಲವಂತವಾಗಿ ಮತಾಂತರಿಸಿದ್ದಲ್ಲಿ 3ರಿಂದ 5 ವರ್ಷ ಜೈಲು ಶಿಕ್ಷೆ, 25 ಸಾವಿರ ದಂಡ. ●ಸಾಮೂಹಿಕ ಮತಾಂತರ ಮಾಡಿದವರಿಗೆ 3ರಿಂದ 10 ವರ್ಷ ಜೈಲು ಶಿಕ್ಷೆ, 1 ಲಕ್ಷ ದಂಡ. ●ಬಲವಂತದ ಮತಾಂತರ ಸಾಬೀತಾದಲ್ಲಿ ಮತಾಂತರಕ್ಕೆ ಒಳಗಾದವನಿಗೆ ಗರಿಷ್ಠ 5 ಲಕ್ಷ ಪರಿಹಾರ. ●ಪರಿಹಾರದ ಮೊತ್ತವನ್ನು ಮತಾಂತರ ಮಾಡಿದವನಿಂದಲೇ ವಸೂಲಿ. ●ಈ ಹಿಂದೆಯೂ ಮತಾಂತರ ಮಾಡಿದ್ದು ಸಾಬೀತಾದಲ್ಲಿ ದುಪ್ಪಟ್ಟು ದಂಡ ವಿಧಿಸಲಾಗುವುದು.

ಸ್ಥಳೀಯ ಸಂಸ್ಥೆ ಚುನಾವಣೆ: ಮೇ 23ಕ್ಕೆ ವಿಚಾರಣೆ ಮುಂದೂಡಿಕೆ



ಬೆಂಗಳೂರು: ಜಿಲ್ಲಾ ಪಂಚಾಯ್ತಿ, ತಾಲೂಕು ಪಂಚಾಯ್ತಿ ಸೇರಿ ಸ್ಥಳೀಯ ಸಂಸ್ಥೆಗಳ ಚುನಾವಣೆ ಸಂಬಂಧದ ಅರ್ಜಿಗಳ ವಿಸ್ತೃತ ವಿಚಾರಣೆಗೆ ಹೈಕೋರ್ಟ್ ಒಲವು ತೋರಿದೆ. ಮಧ್ಯಪ್ರದೇಶದ ಪ್ರಕರಣವೊಂದರಲ್ಲಿ ಸುಪ್ರೀಂಕೋರ್ಟ್, ಬಾಕಿ ಇರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಯಾವುದೇ ನೆಪ ಹೇಳದೆ ತಕ್ಷಣ ನಡೆಸಬೇಕೆಂದು ಕಟ್ಟಾಜ್ಞೆ ಹೊರಡಿಸಿರುವ ಹಿನ್ನೆಲೆಯಲ್ಲಿ ತುರ್ತು ವಿಚಾರಣೆ ಕೋರಿ ಚುನಾವಣಾ ಆಯೋಗದ ಮೆಮೋ ಸಲ್ಲಿಸಿತ್ತು. ಆ ಹಿನ್ನೆಲೆಯಲ್ಲಿ ನ್ಯಾ.ಎಸ್.ಜಿ.ಪಂಡಿತ್ ಮತ್ತು ನ್ಯಾ. ಎಂ.ಜಿ.ಉಮಾ ಅವರಿದ್ದ ರಜಾ ಕಾಲದ ಹೈಕೋರ್ಟ್ ವಿಭಾಗೀಯ ಪೀಠದಲ್ಲಿ ವಿಚಾರಣೆ ನಡೆಯಿತು. ಕೆಲ ಕಾಲ ವಾದ ಆಲಿಸಿದ ಬಳಿಕ ನ್ಯಾಯಪೀಠ, ಸುಪ್ರೀಂ ಕೋರ್ಟ್ ಸೂಚಿಸಿದ ಮೇಲೆ ಮತ್ತೇಕೆ ಮೆಮೋ ಎಂದು ಚುನಾವಣಾ ಆಯೋಗವನ್ನು ▶ 8ನೇ ಪುಟಕ್ಕೆ

ಮೈಸೂರಲ್ಲಿ ಭಾರೀ ಮಳೆಗೆ ಕೊಚ್ಚಿ ಹೋದ ಸೇತುವೆ

●ತುಂಬಿ ಹರಿದ ಬೋಗಾದಿ ಕೆರೆ; ಸಿಎಫ್‌ಟಿಆರ್‌ಐ, ಆನಂದನಗರದ ಆಶ್ರಯ ಬಡಾವಣೆಗೆ ನುಗ್ಗಿದ ನೀರು ●ಮೈಸೂರಲ್ಲಿ ಎಲ್ಲಿ ನೋಡಿದರೂ ನೀರೇ ನೀರು; ರಸ್ತೆಗಳೆಲ್ಲಾ ಹೊಂಡಮಯ



ಮೈಸೂರು, ಮೇ 17 (ಆರ್‌ಕೆ)– ಸೋಮವಾರ ರಾತ್ರಿ ಸುರಿದ ಮಳೆಯಿಂದಾಗಿ ಬೋಗಾದಿ ಕೆರೆ ತುಂಬಿ ಹರಿದ ಪರಿಣಾಮ ಆನಂದನಗರದ ಆಶ್ರಯ ಬಡಾವಣೆಗೆ ನೀರು ನುಗ್ಗಿ ಭಾರೀ ಅವಾಂತರವೇ ಸೃಷ್ಟಿಯಾಗಿದೆ.

ಭಾರೀ ಮಳೆ: ಮೈಸೂರಲ್ಲಿ ಶಾಲೆಗಳ ಹಾಜರಾತಿ ಕುಸಿತ

ಕಳೆದ 3 ದಿನಗಳಿಂದ ಮಳೆ ಎಡೆಬಿಡದೇ ಸುರಿಯುತ್ತಿರುವುದರಿಂದ ವಿಜಯನಗರ 3, 4ನೇ ಹಂತ, ಹಿನಕಲ್ ಹಾಗೂ ಸುತ್ತಲಿನ ಪ್ರದೇಶಗಳಿಂದ ಭಾರೀ ನೀರು ಹರಿದು ಬೋಗಾದಿ ಕೆರೆ ತುಂಬಿ ಹೆಚ್ಚುವರಿ ನೀರು ಸಾಗರೋಪಾದಿಯಲ್ಲಿ ಹರಿದಿರುವುದರಿಂದ ಬೋಗಾದಿಯ ಅಮೃತಾನಂದಮಯಿ ಮಠದ ಹಿಂಭಾಗ ಶ್ರೀ ನಾಗಲಿಂಗೇಶ್ವರ ದೇವಸ್ಥಾನದ ಪಕ್ಕದಲ್ಲಿದ್ದ ಸೇತುವೆ ಕೊಚ್ಚಿಹೋಗಿದೆ. ಇದರಿಂದ ರಸ್ತೆ ಸಂಪರ್ಕವೇ ಕಡಿತವಾಗಿದೆ. ಕೆರೆಯಿಂದ ಹೆಚ್ಚುವರಿ ನೀರು ಸಾಗರೋಪಾದಿಯಲ್ಲಿ ಹರಿದು, ಆ ನೀರಿನ ಒತ್ತಡಕ್ಕೆ ಅಲ್ಲಿನ ಪೈಪ್‌ಲೈನ್ ಕಲ್ವರ್ಟ್ ಸಹ ಕೊಚ್ಚಿ ಹೋಗಿದೆ. ಇಂದು ಮುಂಜಾನೆ ವೇಳೆಗೆ ಅಲ್ಲಿನ ಸಿಎಫ್‌ಟಿಆರ್‌ಐ, ಆನಂದನಗರದ ಆಶ್ರಯ ಬಡಾವಣೆ ಹಾಗೂ ಶಾರದಾದೇವಿನಗರದ ▶ 6ನೇ ಪುಟಕ್ಕೆ

ಮಳೆ ನೀರು ಚರಂಡಿ ಸುಧಾರಣೆಯೇ ಶಾಶ್ವತ ಪರಿಹಾರ




ಮೈಸೂರು: ಬೋಗಾದಿ ಕೆರೆಯಿಂದ ಲಿಂಗಾಂಬುದಿ ಕೆರೆಗೆ ಹೆಚ್ಚುವರಿ ನೀರು ಹರಿದು ಹೋಗಲು ಇರುವ ಮಳೆ ನೀರು ಚರಂಡಿಯನ್ನು ವಿಸ್ತರಿಸುವುದೇ ಮಳೆ ಹಾನಿ ತಡೆಗೆ ಶಾಶ್ವತ ಪರಿಹಾರ ಎಂದು ನಗರಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ ತಿಳಿಸಿದ್ದಾರೆ.

ಸೋಮವಾರ ರಾತ್ರಿ ಧಾರಾಕಾರ ಮಳೆಯಿಂದ ಬೋಗಾದಿ ಕೆರೆ ತುಂಬಿ ಹೆಚ್ಚುವರಿ ನೀರು ಉಕ್ಕಿ ಹರಿದಿದ್ದರಿಂದ ಉಂಟಾದ ಹಾನಿ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸಿದ ಅವರು, ಸದ್ಯಕ್ಕೆ ನೀರು ಹರಿದುಹೋಗಲು ವ್ಯವಸ್ಥೆ ಮಾಡಿದ್ದೇವೆ. ಅದು ತಾತ್ಕಾಲಿಕ ಪರಿಹಾರವಾಗಿದ್ದು, ಪ್ರಸ್ತುತ ಇರುವ 6 ಅಡಿ ಅಗಲದ ರಾಜಕಾಲುವೆ (ಮಳೆ ನೀರು ಚರಂಡಿ)ಯನ್ನು 14 ಅಡಿ ಅಗಲಕ್ಕೆ ವಿಸ್ತರಿಸುವುದೊಂದೇ ಶಾಶ್ವತ ಪರಿಹಾರ ಎಂದರು.

ಈ ಹಿಂದೆ ಬಡಾವಣೆಗಳು ಇರಲಿಲ್ಲ, ಜನಸಂಖ್ಯೆಯೂ ಕಡಿಮೆ ಇತ್ತು. ಮಳೆ ಬಂದು ಕೆರೆ ತುಂಬಿ ಹರಿದರೂ ಬಯಲು ಪ್ರದೇಶವಿದ್ದ ಕಾರಣ ಹಾನಿಯಾಗುತ್ತಿರಲಿಲ್ಲ. ಆದರೆ ಈಗ ವಸತಿ ಬಡಾವಣೆಗಳು ನಿರ್ಮಾಣವಾಗಿವೆ. ದಟ್ಟ ಜನವಸತಿ ಪ್ರದೇಶಗಳಿವೆಯಲ್ಲದೇ ರಾಜಕಾಲುವೆಯಲ್ಲಿ ಗಿಡ ಬೆಳೆದು ▶ 6ನೇ ಪುಟಕ್ಕೆ



ಫ್ಯಾಟ್ ಸರ್ಜರಿ ಮೂಲಕ ಸ್ಲಿಮ್ ಆಗಲು ಹೋಗಿ ಜೀವ ಕಳೆದುಕೊಂಡ ಕಿರುತೆರೆ ನಟಿ



ಬೆಂಗಳೂರು: ಉದಯೋನ್ಮುಖ ಕಿರುತೆರೆ ನಟಿಯೊಬ್ಬರು ಫ್ಯಾಟ್ ಸರ್ಜರಿ ಮೂಲಕ ಸ್ಲಿಮ್ ಆಗಲು ಹೋಗಿ ಪ್ರಾಣವನ್ನೇ ಕಳೆದುಕೊಂಡಿದ್ದಾರೆ. ವರದಿ ಪುಟ–8

ಅವಧಿ ಪೂರ್ವ ಚುನಾವಣೆ ಮುನ್ಸೂಚನೆ

ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 25 ಕೋಟಿ ಬಿಡುಗಡೆ



ಬೆಂಗಳೂರು ಮೇ 17 (ಕೆಎಂಶಿ)–ರಾಜ್ಯದ ಎಲ್ಲ ವಿಧಾನಸಭಾ ಕ್ಷೇತ್ರಗಳಿಗೆ ತಲಾ 25 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದ್ದಾರೆ.

ಬಜೆಟ್‌ನಲ್ಲಿ ನೀಡಿದ ಭರವಸೆಗಳ ಪೈಕಿ 167 ಭರವಸೆಗಳ ಕಾರ್ಯಾದೇಶವನ್ನು ಹೊರಡಿಸಲಾಗಿದ್ದು ಅದೇ ಕಾಲಕ್ಕೆ ತಮ್ಮ ವಿವೇಚನೆಯಡಿ ಶಾಸಕರ ಕ್ಷೇತ್ರಗಳಿಗೆ ತಲಾ 25 ಕೋಟಿ ಬಿಡುಗಡೆ ▶ 8ನೇ ಪುಟಕ್ಕೆ

ಬಜೆಟ್‌ನಲ್ಲಿ ನೀಡಿರುವ ಭರವಸೆಗಳಿಗೆ ಸಂಬಂಧಿಸಿದಂತೆ 167 ಕಾರ್ಯಾದೇಶಗಳನ್ನು ಹೊರಡಿಸಿದ್ದು, ಉಳಿದಂತೆ 25 ಭರವಸೆಗಳಿಗೆ ಸಂಬಂಧಿಸಿದ ಕಾರ್ಯಾದೇಶಗಳನ್ನು ಇಷ್ಟೇ ದಿನದ ಗಡುವಿನಲ್ಲಿ ಕಾರ್ಯಾದೇಶ ಹೊರಡಿಸಬೇಕೆಂದು ಅಧಿಕಾರಿಗಳಿಗೆ ಸಭೆಯಲ್ಲಿ ಕಟ್ಟಾದೇಶ ಮಾಡಿದ್ದಾರೆ. ಈ ಹಿಂದೆ ಯಾವ ಸರ್ಕಾರವೂ ತ್ವರಿತಗತಿಯಲ್ಲಿ ಆದೇಶಗಳನ್ನು ಮಾಡಿರಲಿಲ್ಲ. ಆದರೆ ಸಿಎಂ ಬೊಮ್ಮಾಯಿ ಅವರು 3 ತಿಂಗಳ ಅವಧಿಯಲ್ಲಿ ಅನುಷ್ಠಾನಕ್ಕೆ ಸರ್ಕಾರಿ ಆದೇಶ ಹೊರಡಿಸಿದ್ದಾರೆ.

ನಾಳೆ SSLC ಫಲಿತಾಂಶ



ಬೆಂಗಳೂರು, ಮೇ 17– ಎಸ್‌ಎಸ್‌ಎಲ್‌ಸಿ ಫಲಿತಾಂಶ ಮೇ 19ರಂದು ಮಧ್ಯಾಹ್ನ 1 ಗಂಟೆ ವೇಳೆಗೆ ಹೊರ ಬೀಳಲಿದೆ. ಶಿಕ್ಷಣ ಸಚಿವ ಬಿ.ಸಿ.ನಾಗೇಶ್ 2021–22ನೇ ಶೈಕ್ಷಣಿಕ ಸಾಲಿನ ಫಲಿತಾಂಶವನ್ನು ಪ್ರಕಟ ಮಾಡಲಿದ್ದು, ಈಗಾಗಲೇ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಸಕಲ ಸಿದ್ಧತೆ ಮಾಡಿಕೊಂಡಿದೆ. ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳ ಮೊಬೈಲ್ ಸಂಖ್ಯೆಗೆ ಪ್ರತಿ ಸೆಕೆಂಡಿಗೆ ಇಬ್ಬರಿಗೆ ▶ 8ನೇ ಪುಟಕ್ಕೆ

https://sslc.karnataka.gov.in/ https://karresults.nic.in ನಲ್ಲಿ ಫಲಿತಾಂಶ ಪ್ರಕಟವಾಗಲಿದೆ.

ಮೈಸೂರು ಮಿತ್ರ ಬುಧವಾರ 18 ಮೇ 2022

ಅರಮನೆ ಆವರಣದಲ್ಲಿ ನಡೆದ ಶ್ರೀ ಲಕ್ಷ್ಮೀರಮಣಸ್ವಾಮಿ ಬ್ರಹ್ಮರಥೋತ್ಸವ

ಮಳೆ ನಡುವೆಯೂ ನೂರಾರು ಭಕ್ತರು ಭಾಗಿ



ಮೈಸೂರು, ಮೇ 17(ಎಂಟಿವೈ)– ಮೈಸೂರು ಅರಮನೆ ಆವರಣದಲ್ಲಿ ಶ್ರೀ ಲಕ್ಷ್ಮೀರಮಣ ಸ್ವಾಮಿ ಬ್ರಹ್ಮರಥೋತ್ಸವವು ಮಂಗಳವಾರ ನೆರವೇರಿತು.

ಕಾರ್ಯಕ್ರಮದ ಹಿನ್ನೆಲೆಯಲ್ಲಿ ದೇವಾಲಯದಲ್ಲಿ ಮುಂಜಾನೆಯಿಂದಲೇ ವಿವಿಧ ಪೂಜಾಕೈಂಕರ್ಯಗಳು ಜರುಗಿದವು. ಬೆಳಗ್ಗೆ 11.12ರ ಶುಭಲಗ್ನದಲ್ಲಿ ಜಿಟಿಜಿಟಿ ಮಳೆಯ ನಡುವೆಯೂ ರಥೋತ್ಸವ ನಡೆಯಿತು. ನೂರಾರು ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ಭಕ್ತಿ ಮೆರೆದರು. ಈ ಸಂದರ್ಭದಲ್ಲಿ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದ ಆಡಳಿತಾಧಿಕಾರಿ ಡಾ.ಯತಿರಾಜ್ ಸಂಪತ್‌ಕುಮಾರನ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಅರಮನೆ ಆವರಣದಲ್ಲಿ 1499ರಲ್ಲಿ ನಿರ್ಮಾಣವಾದ ಈ ದೇಗುಲವು ಧಾರ್ಮಿಕ ದತ್ತಿ ಇಲಾಖೆಗೆ ಸೇರಿದೆ. ಮೇ 18ರಂದು ರಾತ್ರಿ ನಿತ್ಯೋತ್ಸವ, ಮೇ 19ರಂದು ಬೆಳಗ್ಗೆ ಅವಭೃಥೋತ್ಸವ, ರಾತ್ರಿ ಧ್ವಜಾರೋಹಣ, 20ರಂದು ಬೆಳಗ್ಗೆ ಮಹಾಭಿಷೇಕ, ರಾತ್ರಿ ದ್ವಾದಶರಾಧನ ಕಾರ್ಯಕ್ರಮಗಳು ನಡೆಯಲಿವೆ.



ಗಣಪತಿ ಸಚ್ಚಿದಾನಂದ ಶ್ರೀಗಳ 80ನೇ ಜನ್ಮ ದಿನಾಚರಣೆ ಪೂರ್ವಭಾವಿಯಾಗಿ ಅವಧೂತ ದತ್ತಪೀಠದ ನೇತೃತ್ವದಲ್ಲಿ ಮೇ13ರಿಂದ ಆರಂಭಗೊಂಡಿರುವ ಆರು ದಿನಗಳ 'ವಿಶ್ವಶಾಂತಿ ಪಾದಯಾತ್ರೆ'ಯಲ್ಲಿ ಕಿರಿಯ ಮಠಾಧೀಶರಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಪಾಲ್ಗೊಂಡಿರುವುದು. ಮೇಕೆದಾಟು ವಿನಿಂದ ಆರಂಭಗೊಂಡ ಪಾದಯಾತ್ರೆ ಮಂಗಳವಾರ ಮೈಸೂರು ಜಿಲ್ಲೆಗೆ ಪ್ರವೇಶಿಸಿದೆ. ಇಂದು (ಮೇ 18) ಆಶ್ರಮವನ್ನು ತಲುಪಲಿದ್ದಾರೆ.

ಸಕಾಲದಲ್ಲಿ ಮಾಹಿತಿ ನೀಡದ ಅಧಿಕಾರಿಗೆ 10 ಸಾವಿರ ದಂಡ

ಹುಣಸೂರು, ಮೇ 17–ಅರ್ಜಿದಾರನಿಗೆ ನಿಗದಿತ ಸಮಯದೊಳಗೆ ಮಾಹಿತಿ ನೀಡದ ಹುಣಸೂರು ನಗರಸಭೆಯ ಕಂದಾಯಾಧಿಕಾರಿ ಸಿದ್ದರಾಜು ಅವರಿಗೆ ಕರ್ನಾಟಕ ಮಾಹಿತಿ ಆಯೋಗವು 10 ಸಾವಿರ ರೂ. ದಂಡ ವಿಧಿಸಿದೆ.

ಈ ದಂಡದ ಹಣವನ್ನು ಸಿದ್ದರಾಜು ಅವರ ಮೇ ಮತ್ತು ಜೂನ್ ತಿಂಗಳ ಸಂಬಳದ ಹಣದಲ್ಲಿ 5,000 ರೂ.ಗಳಂತೆ 10 ಸಾವಿರ ರೂ.ವನ್ನು ಕಡಿತಗೊಳಿಸಿ ಅದನ್ನು ಸರ್ಕಾರದ ಆರ್‌ಟಿಐ ಖಾತೆಗೆ ಜಮೆ ಮಾಡುವಂತೆ ಆಯೋಗವು ಆದೇಶಿಸಿದೆ.

ಹುಣಸೂರು ಪಟ್ಟಣದ ಮುಸ್ಲಿಂ ಬ್ಲಾಕ್ ನಿವಾಸಿ ಜೆ.ಬಿ.ಒಬೇದುಲ್ಲಾ ಮಾಹಿತಿ ಹಕ್ಕು ಕಾಯ್ದೆಯಡಿ ಖಾತೆಯೊಂದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕೇಳಿ ಹುಣಸೂರು ನಗರಸಭಾ ಕಚೇರಿಗೆ ಅರ್ಜಿ ಹಾಕಿದ್ದು, ಸಕಾಲದಲ್ಲಿ ಸರಿಯಾಗಿ ಮಾಹಿತಿ ನೀಡದ ಹಿನ್ನೆಲೆಯಲ್ಲಿ ಒಬೇದುಲ್ಲಾ ಅವರು ಕರ್ನಾಟಕ ಮಾಹಿತಿ ಆಯೋಗಕ್ಕೆ ಆನ್‌ಲೈನ್ ಮೂಲಕ ದೂರು ದಾಖಲಿಸಿದ್ದರು. ಈ ದೂರಿನ ಬಗ್ಗೆ ವಿಚಾರಣೆ ನಡೆಸಿದ ಆಯೋಗವು ನಗರಸಭೆಯ ಕಂದಾಯ ಅಧಿಕಾರಿ ಸಿದ್ದರಾಜು ಅವರು ಅರ್ಜಿದಾರರಿಗೆ ಸಕಾಲ ದಲ್ಲಿ ಮಾಹಿತಿ ಒದಗಿಸದ ಕಾರಣ ದಂಡ ವಿಧಿಸಿ, ಆದೇಶ ಹೊರಡಿಸಿದೆ.

ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಮೈಸೂರು,ಮೇ 17–ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ 2021–22ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಅರ್ಜಿಗಳನ್ನು ಸಲ್ಲಿಸಲು ಅವಧಿ ವಿಸ್ತರಣೆಯಾಗಿದ್ದು, ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ಮೈಸೂರು ತಾಲೂಕಿನ ಮೆಟ್ರಿಕ್–ನಂತರದ ಪರಿಶಿಷ್ಟಜಾತಿ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕಾಗಿ ssp.postmatrickar nataka.gov.inನಲ್ಲಿ ಮೇ 22ರೊಳಗೆ ಅರ್ಜಿ ಸಲ್ಲಿಸುವುದು. ವಿದ್ಯಾರ್ಥಿಗಳು ಬ್ಯಾಂಕಿಗೆ ಭೇಟಿ ನೀಡಿ ಅವರ ಆಧಾರ್ ಸಂಖ್ಯೆಯನ್ನು ಕಡ್ಡಾಯವಾಗಿ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮಾಡಿಸಬೇಕು. ಹೆಚ್ಚಿನ ಮಾಹಿತಿಗೆ ಮೈಸೂರಿನ ಒಂಟಿಕೊಪ್ಪಲು ಪೂರ್ವ ಬಡಾವಣೆಯ ಆದಿಪಂಪ ರಸ್ತೆಯಲ್ಲಿರುವ ಡಾ. ಬಾಬು ಜಗಜೀವನರಾಮ್ ಭವನ ಕಟ್ಟಡದಲ್ಲಿನ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರನ್ನು ಅಥವಾ ದೂ.ಸಂಖ್ಯೆ: 0821–25201910 ಸಂಪರ್ಕಿಸಬಹುದು.



ಎಐಸಿಸಿ ಆದೇಶದ ಮೇರೆಗೆ ಜರುಗಿದ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಸದಸ್ಯತ್ವ ನೋಂದಣಿಯ ಶುಲ್ಕವನ್ನು ಕೆಪಿಸಿಸಿ ಅಧ್ಯಕ್ಷರ ಹೆಸರಿನಲ್ಲಿ ಡಿಡಿಯನ್ನು ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ಅವರಿಗೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಜಿ.ಸೋಮ ಶೇಖರ್, ಶ್ರೀಧರ್, ಸುಂದರ್ ಕುಮಾರ್, ಮಾಧ್ಯಮ ವಕ್ತಾರ ಮಹೇಶ್, ಮುಖಂಡರಾದ ಗುಣಶೇಖರ್, ಚಿಕ್ಕಲಿಂಗು, ಗೋವಿಂದರಾಜು ಉಪಸ್ಥಿತರಿದ್ದರು.



ಎಂಐಟಿ ಪ್ರಥಮ ದರ್ಜೆ ಕಾಲೇಜು ಮತ್ತು ರೋಟ್ರಾಕ್ಟ್ ಕ್ಲಬ್ ವತಿಯಿಂದ ಚಾಮುಂಡಿಬೆಟ್ಟದ ಗ್ರಾಪಂ ಕಚೇರಿ ಆವರಣದಲ್ಲಿ ಇತ್ತೀಚೆಗೆ ರಕ್ತದಾನ ಶಿಬಿರ ಏರ್ಪಡಿಸಿತ್ತು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ನಾಗೇಗೌಡ, ಗ್ರಾಪಂ ಅಧ್ಯಕ್ಷ ಕೆ.ಭರತ್, ಉಪಪ್ರಾಂಶುಪಾಲರಾದ ಎನ್.ಚಂದ್ರಜಿತ್, ಪಿಡಿಓ ರೂಪೇಶ್, ವಿದ್ಯಾರ್ಥಿಗಳು ಮತ್ತು ಕ್ಲಬ್‌ನ ಸದಸ್ಯರು ಭಾಗವಹಿಸಿದ್ದರು. ಕಾಲೇಜು ವಿದ್ಯಾರ್ಥಿಗಳು, ಗ್ರಾಮಸ್ಥರು ಮತ್ತು ಉಪನ್ಯಾಸಕರು ರಕ್ತದಾನ ಮಾಡಿದರು.

ನಾಳೆಯಿಂದ ಮೈಸೂರಲ್ಲಿ 3 ದಿನಗಳ ಟೆಕ್ ಭಾರತ್ ಮೇಳ

ಸಿಎಫ್‌ಟಿಆರ್‌ಐನಲ್ಲಿ ಕೃಷಿ, ಆಹಾರ ತಂತ್ರಜ್ಞಾನ ಕುರಿತ ವಸ್ತುಪ್ರದರ್ಶನ, ವಿಚಾರ ಸಂಕಿರಣ, ಗೋಷ್ಠಿಗಳಿಗೆ ಸಿಎಂ ಬಸವರಾಜ ಬೊಮ್ಮಾಯಿ ಅವರಿಂದ ಚಾಲನೆ

ಮೈಸೂರು, ಮೇ 17(ಆರ್‌ಕೆ)– ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಮೇ 19ರಿಂದ 21ರವರೆಗೆ ಮೂರು ದಿನಗಳ 'ಟೆಕ್ ಭಾರತ್–2022' ತಂತ್ರ ಜ್ಞಾನ ವರ್ಗಾವಣೆ ಮೇಳ ನಡೆಯಲಿದೆ.

ಸಿಎಫ್‌ಟಿಆರ್‌ಐ, ಐಎಂಎಸ್ ಫೌಂಡೇಷನ್ ಮತ್ತು ಲಘು ಉದ್ಯೋಗ ಭಾರತಿ ಸಂಯುಕ್ತಾಶ್ರಯದಲ್ಲಿ ಅಗ್ರಿಟೆಕ್, ಫುಡ್‌ಟೆಕ್ ಮತ್ತು ಫುಡ್ ಪ್ರೊಸೆಸಿಂಗ್ ಟೆಕ್ನಾಲಜಿ ಕುರಿತ ಸಮ್ಮೇಳನ ಮತ್ತು ವಸ್ತುಪ್ರದರ್ಶನ ವನ್ನು ಮೇ 19ರಂದು ಬೆಳಗ್ಗೆ 10.30ಕ್ಕೆ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸುವರು.

ಮೈಸೂರಿನ ಸಿಎಫ್‌ಟಿಆರ್‌ಐ ಆವರಣದ ಐಎಫ್ ಟಿಟಿಸಿ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸಂಸ್ಥೆ ನಿರ್ದೇಶಕಿ ಡಾ. ಶ್ರೀದೇವಿ ಅನ್ನಪೂರ್ಣ ಸಿಂಗ್, ಕೇಂದ್ರ ಸಚಿವರಾದ ಪಶು ಪತಿಕುಮಾರ್ ಪರಾಸ್, ಕೈಲಾಶ್ ಚೌಧರಿ, ಶೋಭಾ ಕರಂದ್ಲಾಜೆ, ರಾಜ್ಯ ಕೃಷಿ ಸಚಿವ ಬಿ.ಸಿ.ಪಾಟೀಲ್, ಸಂಸದ ಪ್ರತಾಪ್ ಸಿಂಹ, ಕೇಂದ್ರ ವಾಣಿಜ್ಯ ಇಲಾಖೆ ಎಪಿಇಡಿ ಅಧ್ಯಕ್ಷ ಡಾ.ಎಂ.ಅಂಗಮುತ್ತು, ಐಟಿ–ಬಿಟಿ ಇಲಾಖೆ ಅಡಿಷನಲ್ ಚೀಫ್ ಸೆಕ್ರೆಟರಿ ಡಾ.ಇ.ವಿ. ರಮಣರೆಡ್ಡಿ, ಇನ್‌ಫೋಸಿಸ್ ಮಾಜಿ ಸಿಇಓ ಕ್ರಿಸ್ ಗೋಪಾಲಕೃಷ್ಣನ್ ಟೆಕ್ ಭಾರತ್ ಉದ್ಘಾಟನಾ ಸಮಾ ರಂಭದಲ್ಲಿ ಪಾಲ್ಗೊಳ್ಳುವರು ಎಂದು ತಿಳಿಸಿದರು.

ಅಂದು ಮಧ್ಯಾಹ್ನ ಅಗ್ರಿಕಲ್ಚರ್ ಡೆವಲಪ್‌ಮೆಂಟ್ ಕುರಿತ ಗುಂಪು ಚರ್ಚೆಯಲ್ಲಿ ಕೇಂದ್ರ ಕೃಷಿ ಇಲಾಖೆ ಸಿಇಓ ಡಾ.ಅಶೋಕ್ ದಳವಾಯಿ, ಕಂದಾಯ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ವಿವೇಕ್ ಅಗರ್‌ವಾಲ್, ಇಸ್ರೇಲ್‌ನ ಅರ್ಥಶಾಸ್ತ್ರ ಶಿರ್ವಿಂಟ್ ಇಮ್ಯಾನುಯಲ್ ಸೇರಿದಂತೆ ಹಲವು ತಂತ್ರಜ್ಞರು ಪಾಲ್ಗೊಳ್ಳುವರು.

ಅದೇ ರೀತಿ ಮೇ 20 ಮತ್ತು 21ರಂದು ವಿವಿಧ ಗೋಷ್ಠಿ, ಚಿಂತನ–ಮಂಥನ ನಡೆಯಲಿದ್ದು, ದೇಶ–ವಿದೇಶಗಳಿಂದ ಕೃಷಿ, ಆಹಾರ ಮತ್ತು ಆಹಾರ ತಂತ್ರ ಜ್ಞಾನದಲ್ಲಿ ಅಪಾರ ಪರಿಣತಿ ಹೊಂದಿರುವ ತಜ್ಞರು ಭಾಗವಹಿಸಿ ಪ್ರಸ್ತುತ ಅಭಿವೃದ್ಧಿಗೊಂಡಿರುವ ತಂತ್ರಜ್ಞಾನ ವನ್ನು ಕೈಗಾರಿಕೋದ್ಯಮಿಗಳು ಬಳಸಿಕೊಂಡು ತಮ್ಮ ಉತ್ಪನ್ನಗಳನ್ನು ರಫ್ತು ಮಾಡುವ ಮೂಲಕ ಮಾರು ಕಟ್ಟೆ ಸೃಷ್ಟಿಸಲು ಸಲಹೆ–ಮಾರ್ಗದರ್ಶನ ನೀಡುವರು.



ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಅವರು ಮಂಗಳವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದರು. (ಎಡದಿಂದ) ಲಘು ಉದ್ಯೋಗ ಭಾರತಿ ಉಪಾಧ್ಯಕ್ಷೆ ಛಾಯಾ ನಂಜಪ್ಪ, ಕಾರ್ಯದರ್ಶಿ ಭೋಜರಾಜ್ ಹಾಗೂ ಚೀಫ್ ಸೈಂಟಿಸ್ಟ್ ಡಾ.ಬಿ.ಪಿ.ಸತ್ಯೇಂದ್ರ ರಾವ್ ಚಿತ್ರದಲ್ಲಿದ್ದಾರೆ.

ಆಹಾರ ಉತ್ಪಾದನೆಯಲ್ಲಿ ಪ್ರಮುಖ ಪಾತ್ರ ವಹಿಸುವ ರೈತರಿಗೆ ಆಹಾರ ಸಂಸ್ಕರಣೆ ವಿಧಾನ ಮತ್ತು ಅದರ ಮೌಲ್ಯದ ಬಗ್ಗೆ ಜ್ಞಾನದ ಕೊರತೆ ಇರುವುದರಿಂದ ಸಿಎಫ್‌ಟಿಆರ್‌ಐನಲ್ಲಿ ಅಭಿವೃದ್ಧಿ ವರ್ಗಾವಣೆ ಮಾಡುವುದು ಕಾರ್ಯಕ್ರಮದ ಉದ್ದೇಶ ಎಂದರು.

ಡ್ರೋಣ್ ಟೆಕ್ನಾಲಜಿ, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಮತ್ತು ಇಂಟರ್‌ನೆಟ್ ಆಫ್ ಥಿಂಗ್ಸ್ (IoT) ತಂತ್ರಜ್ಞಾನಗಳ ಬಗ್ಗೆ ಟೆಕ್ ಭಾರತ್ ಮೇಳದಲ್ಲಿ ಪ್ರಾತ್ಯಕ್ಷಿಕೆ ಮೂಲಕ ಪರಿಚಯಿಸಲಾಗುವುದು. ಭಾರತದ ಆರ್ಥಿಕ ಅಭಿವೃದ್ಧಿಯು ಕೃಷಿಯನ್ನೇ ಅವಲಂಬಿಸಿದ್ದು, ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೂ ಸಹ ತಮ್ಮ ಜಮೀನಿನ ಭೂಮಿಯ ಗುಣಕ್ಕನುಗುಣವಾಗಿ ಬೆಳೆ ಬೆಳೆಯಲು ಬೇಕಾದ ತಂತ್ರಜ್ಞಾನ ಒದಗಿಸಲು ಈ ಮೇಳ ಸಹಕಾರಿಯಾಗಿದೆ ಎಂದು ತಿಳಿಸಿದರು.

ಇ–ಟ್ರೇಡಿಂಗ್, ಆನ್‌ಲೈನ್ ಮಾರುಕಟ್ಟೆ, ಸಪ್ಲೈ ಚೈನ್, ಅಗ್ರಿಕಲ್ಚರಲ್ ವೇಸ್ಟ್ ಮ್ಯಾನೇಜ್‌ಮೆಂಟ್, ರೀ ಸೈಕ್ಲಿಂಗ್, ಹಣ್ಣು ಮತ್ತು ತರಕಾರಿ ಬೆಳೆ ಸೇರಿದಂತೆ ಕೃಷಿಯಲ್ಲಿ ಇತ್ತೀಚಿನ ತಂತ್ರಜ್ಞಾನ ಬಳಕೆ ಬಗ್ಗೆ ಗೋಷ್ಠಿಗಳಲ್ಲಿ ತಜ್ಞರು ವಿಷಯ ಮಂಡಿಸುವರು ಎಂದರು.

ಲಘು ಉದ್ಯೋಗ ಭಾರತಿ ಕಾರ್ಯದರ್ಶಿ ಭೋಜ ರಾಜ್ ಮಾತನಾಡಿ, ಬೆಳಗಾವಿ ಮತ್ತು ಬೆಂಗಳೂರಲ್ಲಿ ಯಶಸ್ವಿ ಟೆಕ್ ಭಾರತ್ ಮೇಳ ನಡೆದು 3ನೇ ಆವೃತ್ತಿ ಯನ್ನು ಮೈಸೂರಲ್ಲಿ ಆಯೋಜಿಸಿದ್ದು, ಈ ಮೆಗಾ ಮೇಳದಲ್ಲಿ ರೈತರು, ಕೈಗಾರಿಕೋದ್ಯಮಿಗಳು, ತಂತ್ರಜ್ಞಾನ ಅಭಿವೃದ್ಧಿಪಡಿಸುತ್ತಿರುವ ಕಂಪನಿಗಳು, ಸಂಶೋಧಕರು, ವಿಜ್ಞಾನಿಗಳು, ಮಹಿಳಾ ಉದ್ಯಮಿಗಳು ಪ್ರಪಂಚದ ವಿವಿಧ ಭಾಗಗಳ ತಜ್ಞರು ಭಾಗವಹಿಸುತ್ತಿದ್ದಾರೆ ಎಂದರು.

ವಸ್ತುಪ್ರದರ್ಶನದಲ್ಲಿ ಕೃಷಿ ಮತ್ತು ಆಹಾರ ಕ್ಷೇತ್ರ ದಲ್ಲಿ ತೊಡಗಿರುವ ಹಾಗೂ ತಂತ್ರಜ್ಞಾನ ಅಭಿವೃದ್ಧಿ ಪಡಿಸಿರುವ 100ಕ್ಕೂ ಹೆಚ್ಚು ಸಂಸ್ಥೆಗಳು ಭಾಗವಹಿಸ ಲಿದ್ದು, 400ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳು, 250 ಡೆಲಿಗೇಟ್ಸ್‌ಗಳು ನೋಂದಣಿ ಮಾಡಿಸಿದ್ದಾರೆ. ಮೂರು ದಿನಗಳ ಕಾಲ ಬೆಳಗ್ಗೆ 10ರಿಂದ ಸಂಜೆ 6 ಗಂಟೆವರೆಗೆ ನಡೆಯಲಿರುವ ವಸ್ತುಪ್ರದರ್ಶನ ಮತ್ತು ಗೋಷ್ಠಿಗಳಿಗೆ ಉಚಿತ ಪ್ರವೇಶವಿರುತ್ತದೆ ಎಂದು ಉದ್ಯೋಗ ಭಾರತಿ ಉಪಾಧ್ಯಕ್ಷೆ ನೆಕ್ಟರ್ ಫ್ರೆಷ್ ಹನಿ ಸಂಸ್ಥಾಪಕಿ ಛಾಯಾ ನಂಜಪ್ಪ ತಿಳಿಸಿದರು. ಸಿಎಫ್‌ಟಿಆರ್‌ಐನ ಡಾ.ಸತ್ಯೇಂದ್ರ ರಾವ್, ಡಾ.ರಮೇಶ್‌ಕುಮಾರ್ ಗೋಷ್ಠಿಯಲ್ಲಿದ್ದರು.

ನೋಟಿಸ್ ನೀಡದೆ ಗಿರವಿ ಇಟ್ಟ ಒಡವೆ ಹರಾಜು

ಬ್ಯಾಂಕ್ ಮುಂದೆ ರೈತರ ಪ್ರತಿಭಟನೆ

ಹೊಸ ಆಭರಣ ಮಾಡಿಸಿಕೊಡಲು ಒಪ್ಪಿದ ಬ್ಯಾಂಕ್, ಪ್ರತಿಭಟನೆ ವಾಪಸ್

ಮೈಸೂರು, ಮೇ 17(ಎಂಟಿವೈ)– ಬ್ಯಾಂಕ್‌ನಿಂದ ರೈತರೊಬ್ಬರಿಗೆ ವಂಚನೆಯಾಗಿದೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ರೈತ ಸಂಘ ನೇತೃತ್ವದಲ್ಲಿ ರೈತರು ಸೋಮವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಜನಸ್ಮಾಲ್ ಫೈನಾನ್ಸ್ ಬ್ಯಾಂಕ್ ಮುಂದೆ ಪ್ರತಿಭಟನೆ ನಡೆಸಿದ ರೈತರು, ಇಲವಾಲ ಹೋಬಳಿಯ ಹೊಸಕೋಟೆ ಗ್ರಾಮದ ರೈತ ಪ್ರವೀಣ್ ಎಂಬುವರು 75 ಗ್ರಾಂ ಚಿನ್ನವನ್ನು ಗಿರವಿ ಇಟ್ಟು ಸಾಲ ಪಡೆದಿದ್ದರು. ಆದರೆ, ಯಾವುದೇ ನೋಟಿಸ್ ನೀಡದೆ 3 ತಿಂಗಳಿನಲ್ಲೇ ಹರಾಜು ಹಾಕಲಾಗಿದೆ. ಈ ಮೂಲಕ ರೈತನಿಗೆ ವಂಚಿಸಲಾಗಿದೆ ಎಂದು ಆರೋಪಿಸಿದರು. ಇದಕ್ಕೆ ಮಣಿದ ಬ್ಯಾಂಕ್ ಅಧಿಕಾರಿಗಳು, ಮೇ 23ರಂದು ಹರಾಜು ಹಾಕಿರುವ ಬಂಗಾರದ ಬದಲಾಗಿ ಹೊಸದಾಗಿ ಅದೇ ವಿನ್ಯಾಸದ ಆಭರಣವನ್ನು ಮಾಡಿಸಿಕೊಡುವುದಾಗಿ ಭರವಸೆ ನೀಡಿದ್ದಾರೆ. ಇದಕ್ಕೆ ಸ್ಪಂದಿಸಿ ಪ್ರತಿಭಟನೆಯನ್ನು ಹಿಂಪಡೆದರು.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಪಿ.ಮರಂಕಯ್ಯ, ತಾಲೂಕು ಗೌರವ ಅಧ್ಯಕ್ಷ ನಾಗನಹಳ್ಳಿ ವಿಜಯೇಂದ್ರ, ತಾಲೂಕು ಅಧ್ಯಕ್ಷ ಆನಂದೂರು ಪ್ರಭಾಕರ್, ತಾಲೂಕು ಪ್ರಧಾನ ಕಾರ್ಯದರ್ಶಿ ಮಂಡಕಳ್ಳಿ ಮಹೇಶ್, ಸಂಘಟನಾ ಕಾರ್ಯದರ್ಶಿ ರಾಘವೇಂದ್ರ, ಸಹಕಾರ್ಯದರ್ಶಿ ನಾಗನಹಳ್ಳಿ ಚಂದ್ರಶೇಖರ್, ಶಿವೇಗೌಡ, ಮಹೇಶ, ಬಸವರಾಜು, ಪ್ರವೀಣ್ ಇನ್ನಿತರರು ಪಾಲ್ಗೊಂಡಿದ್ದರು.



ಸಿಎಫ್‌ಟಿಆರ್‌ಐನ 22 ತಂತ್ರಜ್ಞಾನ ಉಚಿತವಾಗಿ ಲಭ್ಯ

ಮೈಸೂರು,ಮೇ 17(ಆರ್‌ಕೆ)–ಮೈಸೂರಿನ ಸಿಎಫ್‌ಟಿಆರ್‌ಐ ಅಭಿವೃದ್ಧಿಪಡಿಸಿರುವ ಸುಮಾರು 450ರ ಪೈಕಿ 22 ತಂತ್ರಜ್ಞಾನಗಳನ್ನು ಉಚಿತವಾಗಿ ನೀಡಲಾಗುತ್ತಿದೆ ಎಂದು ಸಂಸ್ಥೆ ನಿರ್ದೇಶಕಿ ಡಾ. ಶ್ರೀದೇವಿ ಅನ್ನಪೂರ್ಣ ಸಿಂಗ್ ತಿಳಿಸಿದ್ದಾರೆ.

ರಾಗಿ ಆಧಾರಿತ ಬ್ರೆಡ್ ತಯಾರಿಕೆ, ಕುಸುವಲಕ್ಕಿ, ಮರಳಿನಲ್ಲಿ ಧಾನ್ಯ ಹುರಿಯುವುದು ಸೇರಿದಂತೆ ಒಟ್ಟು 22 ತಂತ್ರಜ್ಞಾನಗಳನ್ನು ಸಿಎಫ್‌ಟಿಆರ್‌ಐ ವೆಬ್‌ಸೈಟ್‌ನಲ್ಲಿ ಹಾಕಲಾಗಿದ್ದು, ಸಾರ್ವಜನಿಕರು, ಕೃಷಿಕರು ಡೌನ್‌ಲೋಡ್ ಮಾಡಿಕೊಂಡು ಉದ್ದಿಮೆ ಆರಂಭಿಸಬಹುದಾಗಿದೆ ಎಂದ ಅವರು, ಸಂಸ್ಥೆ ಅಭಿವೃದ್ಧಿಪಡಿಸಿರುವ ದೋಸೆ–ಇಡ್ಲಿ ತಯಾರಿಕೆ ತಂತ್ರಜ್ಞಾನವನ್ನು ಬಳಸಿಕೊಂಡು 200ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳು ಉದ್ಯಮ ಸ್ಥಾಪಿಸಿ 300 ಕೋಟಿ ರೂ. ವಹಿವಾಟು ನಡೆಸಿದ್ದಾರೆ ಎಂದು ಅವರು ತಿಳಿಸಿದರು.

ಮೈಸೂರಲ್ಲಿ ಆಯೋಜಿಸಿರುವ ಮೂರು ದಿನಗಳ ಟೆಕ್ ಭಾರತ್ ಮೇಳದಲ್ಲಿ ದೇಶದಾದ್ಯಂತ ವಿವಿಧ ಸಂಸ್ಥೆಗಳು ಅಭಿವೃದ್ಧಿಪಡಿಸಿರುವ ಕೃಷಿ ಮತ್ತು ಆಹಾರ ತಂತ್ರಜ್ಞಾನಗಳ ಉತ್ಸಾಹಿ ಯುವ ಉದ್ಯಮಿಗಳಿಗೆ ಪರಿಚಯಿಸಿ ಪ್ರೋತ್ಸಾಹಿಸಲಾಗುವುದು ಎಂದು ಡಾ. ಅಶ್ರೀದೇವಿ ನ್ನಪೂರ್ಣ ಸಿಂಗ್ ತಿಳಿಸಿದರು.

ಮೇ 28ರಂದು ಅಮೃತ ಭಾರತಿಗೆ ಕನ್ನಡದ ಆರತಿ: ಡಿಸಿ

ಮೈಸೂರು,ಮೇ 17–ಸ್ವಾತಂತ್ರ್ಯ ಮಹೋತ್ಸವದ ಅಂಗವಾಗಿ 75ನೇ ವರ್ಷದ ಹಿನ್ನೆಲೆಯಲ್ಲಿ ರಾಜ್ಯದ 75 ಸ್ಥಳಗಳಲ್ಲಿ 'ಅಮೃತ ಭಾರತಿಗೆ ಕನ್ನಡದ ಆರತಿ' ಎಂಬ ವಿಶೇಷ ಕಾರ್ಯಕ್ರಮವನ್ನು ಮೇ 28ರಂದು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ತಿಳಿಸಿದರು.

ಡಿಸಿ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ 'ಅಮೃತ ಭಾರತಿಗೆ ಕನ್ನಡದ ಆರತಿ' ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿಯ ಇತಿಹಾಸವನ್ನು ಹೊಂದಿರುವ ಐತಿಹಾಸಿಕ ಸ್ಥಳಗಳಾದ ರಾಮಸ್ವಾಮಿ ವೃತ್ತ, ಸುಬ್ಬರಾಯನಕೆರೆ, ನಂಜನಗೂಡು ತಾಲೂಕಿನ ಬದನವಾಳು ಮತ್ತು ತಗಡೂರು ಸ್ಥಳಗಳಲ್ಲಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಕಾರ್ಯಕ್ರಮದ ಪ್ರಮುಖ ಉದ್ದೇಶ ದೇಶದ ಸ್ವಾತಂತ್ರ್ಯ ಚಳುವಳಿಗೆ ಕರ್ನಾಟಕದ ಕೊಡುಗೆಯನ್ನು ಸ್ಮರಿಸುವುದೇ ಆಗಿದೆ ಎಂದು ತಿಳಿಸಿದರು.



ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಚೆನ್ನಪ್ಪ ಮಾತನಾಡಿ, 4 ಸ್ಥಳಗಳಿಗೆ ಸಂಬಂಧಿಸಿದಂತೆ 4 ಉಪ ಸಮಿತಿಗಳನ್ನು ರಚಿಸಲಾಗುವುದು. ರಾಮಸ್ವಾಮಿ ವೃತ್ತ ಹಾಗೂ ಸುಬ್ಬರಾಯನ ಕೆರೆ ಮೈದಾನದ ಕಾರ್ಯಕ್ರಮಕ್ಕೆ ಪಾಲಿಕೆ ಆಯುಕ್ತರ ಅಧ್ಯಕ್ಷತೆಯಲ್ಲಿ, ಬದನವಾಳು ಕಾರ್ಯಕ್ರಮಕ್ಕೆ ಎಸಿ ಅಧ್ಯಕ್ಷತೆಯಲ್ಲಿ, ತಗಡೂರು ಕಾರ್ಯಕ್ರಮಕ್ಕೆ ತಹಸೀಲ್ದಾರ್ ಅಧ್ಯಕ್ಷತೆಯಲ್ಲಿ ಉಪಸಮಿತಿಗಳನ್ನು ರಚಿಸಿ, ಕಾರ್ಯಕ್ರಮದ ರೂಪುರೇಷೆಗಳನ್ನು ತಯಾರಿಸಲಾಗುವುದು ಎಂದರು. ಸಭೆಯಲ್ಲಿ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ, ಕನ್ನಡ– ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ವಾರ್ತಾ–ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಹರೀಶ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.



ಮೈಸೂರು ತಾಲೂಕಿನ ಗುಂಗ್ರಾಲ್ ಛತ್ರ ಗ್ರಾಮದಲ್ಲಿರುವ ಶಾಸಕ ಜಿ.ಟಿ.ದೇವೇಗೌಡ ಅವರ ನಿವಾಸಕ್ಕೆ ಮಾಜಿ ಸಚಿವರೂ ಆದ ಶಾಸಕ ಹೆಚ್.ಡಿ.ರೇವಣ್ಣ ಭೇಟಿ ನೀಡಿ, ಮೊಮ್ಮಗಳ ನಿಧನಕ್ಕೆ ಸಂತಾಪ ಸೂಚಿಸಿ, ಶಾಸಕ ಜಿ.ಟಿ.ದೇವೇಗೌಡ, ಅವರ ಪತ್ನಿ ಕೆ.ಲಲಿತಾ ಜಿ.ಟಿ.ದೇವೇಗೌಡ, ಪುತ್ರ ಜಿ.ಡಿ.ಹರೀಶ್‌ಗೌಡರಿಗೆ ಸಾಂತ್ವನ ಹೇಳಿದರು. ಮುಡಾ ಮಾಜಿ ಅಧ್ಯಕ್ಷ ವಿಜಯ್ ಇತರರಿದ್ದಾರೆ.

ಬಿಜೆಪಿ ಹಗರಣಗಳ ಸರ್ಕಾರ: ಸಿಎಂ ರಾಜೀನಾಮೆಗೆ ಆಗ್ರಹ

ಮೈಸೂರು, ಮೇ 17(ಎಂಟಿವೈ)– ಪಿಎಸ್‌ಐ ನೇಮಕಾತಿ ಪರೀಕ್ಷೆ ಹಾಗೂ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಯಲ್ಲಿ ನಡೆದಿರುವ ಅಕ್ರಮ ಬಗ್ಗೆ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರಾಜೀನಾಮೆ ನೀಡಬೇಕು. ಇಲ್ಲದಿದ್ದರೆ ರಾಜ್ಯಪಾಲರು ಮಧ್ಯ ಪ್ರವೇಶಿಸಿ ಭ್ರಷ್ಟಾಚಾರದಲ್ಲಿ ಮುಳುಗಿರುವ ರಾಜ್ಯ ಸರ್ಕಾರವನ್ನು ವಜಾಗೊಳಿಸಬೇಕು ಎಂದು ಕರ್ನಾಟಕ ಶೋಷಿತ ಸಮುದಾಯಗಳ ಒಕ್ಕೂಟದ ರಾಜ್ಯಾಧ್ಯಕ್ಷ ರಾಜೇಂದ್ರಸಿಂಗ್ ಬಾಬು ಒತ್ತಾಯಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರ ಅತ್ಯಂತ ಹೆಚ್ಚಿನ ಭ್ರಷ್ಟಾಚಾರ ನಡೆಸುತ್ತಿದೆ. ಬಿಜೆಪಿ ಪಕ್ಷದ ಹೆಸರನ್ನು ಇನ್ನು ಮುಂದೆ ಭಾರೀ ಭ್ರಷ್ಟಾಚಾರ ನಡೆಸುವ ಪಾರ್ಟಿ ಎಂದು ಹೆಸರು ಬದಲಾಯಿಸಿಕೊಳ್ಳಲಿ. ಸಿಎಂ ಬೊಮ್ಮಾಯಿ ನೇತೃತ್ವದ ಸರ್ಕಾರ ಹಿಂದೆಂದೂ ರಾಜ್ಯ ಕಂಡರಿಯದ ಭ್ರಷ್ಟಾಚಾರ ನಡೆಸಿದ ಸರ್ಕಾರ ಎಂಬಂತಾಗಿದೆ. ಪಿಎಸ್‌ಐ, ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಸೇರಿದಂತೆ ಸರ್ಕಾರದ ವಿವಿಧ ಹುದ್ದೆಗಳ ನೇಮಕಾತಿಗಾಗಿ ನಡೆಸಿದ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ. ಈ ಅಕ್ರಮದಲ್ಲಿ ಸಚಿವರು ಹಾಗೂ ಸರ್ಕಾರವೇ ನೇರವಾಗಿ ಭಾಗಿಯಾಗಿರುವುದು ಖಚಿತವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಕರಣದ ನೈತಿಕತೆ ಹೊತ್ತು ಸಿಎಂ ಬೊಮ್ಮಾಯಿ ರಾಜೀನಾಮೆ ನೀಡುವಂತೆ ಆಗ್ರಹಿಸಿದರು.

ದಿನಕ್ಕೊಂದು ಅಕ್ರಮ ನೇಮಕಾತಿ ಪ್ರಕರಣ ಬೆಳಕಿಗೆ ಬರುತ್ತಿರುವ ಬೆನ್ನಲ್ಲೇ ಈಗ ಹಿರಿಯ ಪೊಲೀಸ್ ಅಧಿಕಾರಿ ಹಾಗೂ ಪ್ರಾಮಾಣಿಕ ಅಧಿಕಾರಿಯೂ ಆಗಿರುವ ಡಾ.ಪಿ. ರವೀಂದ್ರನಾಥ್ ಅವರಿಗೆ ನಿಷ್ಠೆಯಿಂದ ಕರ್ತವ್ಯ ನಿರ್ವಹಿಸಲು ಬಿಡದೆ, ತೊಂದರೆ ಕೊಡುತ್ತಿದೆ. ಇದರಿಂದ ಅವರ ರಾಜೀನಾಮೆಗೆ ಸರ್ಕಾರ ಕಾರಣವಾಗಿದೆ. ಈ ಎಲ್ಲ ಅಕ್ರಮಗಳಲ್ಲಿ ಅಧಿಕಾರಿಗಳು ಹಾಗೂ ಸಚಿವರ ಕೈವಾಡವಿರುವುದಾಗಿ ಬಹಿರಂಗಗೊಂಡಿದೆ. ಭ್ರಷ್ಟಾಚಾರದ ಮೂಲಕ ಆಯ್ಕೆಯಾಗುವವರು ಜನಸಾಮಾನ್ಯರಿಗೆ ನ್ಯಾಯ ದೊರಕಿಸಿಕೊಡಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು. ಗೋಷ್ಠಿಯಲ್ಲಿ ಕರ್ನಾಟಕ ಶೋಷಿತ ಸಮುದಾಯಗಳ ಒಕ್ಕೂಟದ ಸದಸ್ಯರಾದ ರಾಜೇಶ್, ಡಿ.ಕಾಂತರಾಜು, ಕೆ.ಕಾಂತರಾಜು, ಡಿ.ಜೆ.ರಾಜೇಶ್ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.05.2022 ಬುಧವಾರ, ಮಳೆ ನಕ್ಷತ್ರ : ಕೃತಿಕ 11.05.2022 ರಿಂದ 24.05.2022

ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ

ತಿಥಿ: ತೃತೀಯ, ನಕ್ಷತ್ರ : ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಡಾ. ಅಗರವಾಲ್ಸ್ ಹೆಲ್ತ್ ಕೇರ್ :** ಉಚಿತ ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಕುವೆಂಪುನಗರ, ಸಯ್ಯಾಜಿರಾವ್ ರಸ್ತೆ ಆಸ್ಪತ್ರೆ ಶಾಖೆ, ಬೆಳಗ್ಗೆ 10 ರಿಂದ.

■ **ಹಿಂದುಳಿದ ವರ್ಗಗಳ ಸ್ಥಳೀಯ ಮೀಸಲಾತಿ ಸಂರಕ್ಷಣಾ ಹೋರಾಟ ವೇದಿಕೆ :** ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸದಂತೆ ಒತ್ತಾಯಿಸಿ ಪ್ರತಿಭಟನಾ ಸಭೆ, ಉಪಸ್ಥಿತರು : ಪ. ಮಲ್ಲೇಶ್, ಪ್ರೊ. ಕಾಳೇಗೌಡ ನಾಗವಾರ, ಪ್ರೊ. ಮಹೇಶ್‌ಚಂದ್ರ ಗುರು, ಪ್ರೊ. ಕೆ.ಎಸ್. ಭಗವಾನ್, ಮಾಜಿ ಮೇಯರ್ ಅನಂತು, ಬೆಟ್ಟಯ್ಯಕೋಟೆ, ಆಲಗೂಡು ಶಿವಕುಮಾರ್, ಸ್ಥಳ: ಜಿಲ್ಲಾಧಿಕಾರಿಗಳ ಕಚೇರಿ ಆವರಣ, ಬೆಳಗ್ಗೆ 11ಕ್ಕೆ.

■ **ಮೈಸೂರು ಉತ್ಸವ :** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ.

■ **ನೃತ್ಯಾಲಯ ಟ್ರಸ್ಟ್:** ಪಂಪ ಪ್ರಶಸ್ತಿ ಪುರಸ್ಕೃತ ನಾಡೋಜ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ಅವರಿಗೆ ಗೌರವ ಸಮರ್ಪಣೆ, ಸಾನ್ನಿಧ್ಯ: ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ.ಎನ್.ಎಸ್.ತಾರಾನಾಥ್, ಅಧ್ಯಕ್ಷತೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿವೃತ್ತ ನಿರ್ದೇಶಕ ಡಾ. ಡಿ.ಕೆ.ರಾಜೇಂದ್ರ, ಉಪಸ್ಥಿತರು: ನೃತ್ಯಾಲಯ ಟ್ರಸ್ಟ್ ಅಧ್ಯಕ್ಷ ಡಾ. ತುಳಸೀ ರಾಮಚಂದ್ರ, ಸ್ಥಳ: ಶ್ರೀ ವಾಸುದೇವಾಚಾರ್ಯ ಭವನ, ಸಂಜೆ 6ರಿಂದ.

■ **ಶ್ರೀ ಶ್ರೀನಿವಾಸಸ್ವಾಮಿ ಕೈಂಕರ್ಯ ಸಭಾ :** ಶ್ರೀ ಶ್ರೀನಿವಾಸಸ್ವಾಮಿಯವರ ವಾರ್ಷಿಕ ಮಹೋತ್ಸವ, ಅಂಕುರಾರ್ಪಣ, ಸ್ಥಳ: ಸಭಾ ಆವರಣ, ತಿಲಕ್‌ನಗರ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಸಾಹತು ಕಾಲದ ಕಾನೂನುಗಳು– ಬಾನುಲಿ ಸರಣಿ, 6.40ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಬಿ.ಶ್ರೀರಾಂ ಭಟ್, ಸಿ. ವಿಶ್ವನಾಥ್, ವ್ಯಾಖ್ಯಾನ– ಪ್ರೊ.ಮೈಸೂರು ಕೃಷ್ಣಮೂರ್ತಿ, 7.15 ಸೇವಾಂಕುರ ಭಾರತ–ಸಂವಾದದಲ್ಲಿ ಭಾಗವಹಿಸುವವರು ಎಂ.ಎಸ್.ಶ್ರೀಪಾದ ಹಾಗೂ ಡಾ.ರೇಖಾ ಷಣ್ಮುಖ, ನಡೆಸಿಕೊಡುತ್ತಾರೆ –ಡಾ.ದಿವಾಕರ ಹೆಗಡೆ, 9.00 ಸ್ವಾತಂತ್ರ್ಯ ಅಮೃತ ಮಹೋತ್ಸವದ ವಿಶೇಷ ಕಾರ್ಯಕ್ರಮ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳವಳಿಯ ಪಯಣ –ಬಾನುಲಿ ಸರಣಿ, 10.00 ಹಿಂದೂಸ್ಥಾನಿ ಸಂಗೀತ– ಕುಮಾರ್ ಮರ್ಡೂರ್–ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30ದೇವರನಾಮ–ರಾಜ್‌ಕುಮಾರ್ ಭಾರತಿ, 12.45 ಲಾಕ್‌ಡೌನ್ ಕಥಾ ನಾಟಕ –ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ, 'ಆತ್ಮೀಯ ತಂದ ಆತಂಕ', ಮೂಲಕಥೆ– ತ್ರಿಪುರಾಂತಕ ಜಿ.ಎಲ್. ಬಾನುಲಿ ರೂಪಾಂತ ರಾಮನಾಥ್ ಎಸ್., ನಿರ್ಮಾಣ–ಪ್ರಭುಸ್ವಾಮಿ ಮಳಿಮಠ, 1.20 ಭಾವಗೀತೆ–ಎನ್.ಜಮುನ, 3.00ಲಯ ಸಂಭ್ರಮ–ತಾಳ, ಲಯ ರಸಾಸ್ವಾದ.ಪರಿಕಲ್ಪನೆ ಮತ್ತು ಪ್ರಸ್ತುತಿ–ಎಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ–ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ–ಸ್ತ್ರೀ ಚೇತನ–ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಮೈಸೂರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀಮತಿ ಪೂರ್ಣಿಮಾ, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪಿ.ಸಿ.ಮಳಿಮಠ್ ಮತ್ತು ಕೆ.ಬಿ.ಮೀನಾ, 5.45 ಹಾಡು ಹೇಳಿದ ಕಥೆ, ಪ್ರಸ್ತುತಿ–ಡಾ. ಮೈಸೂರು ಉಮೇಶ್ 6.50 ಕೃಷಿರಂಗ–ಕಿಸಾನ್‌ವಾಣಿ, ಹೂವು ಹಾಗೂ ಸುಗಂಧಿತ ಸಸ್ಯಗಳ ಕೃಷಿಯಲ್ಲಿನ ಅನುಭವ ಕುರಿತು ಬಿ.ಎನ್.ನಾಗೇಶ್ ಅವರೊಡನೆ ಸಂದರ್ಶನ, 9.05 ಕ್ಷಿತಿಜ–Literacy ಗುರು– ಸಾಹಿತ್ಯ ದಿಗ್ಗಜರೊಂದಿಗೆ ಸಂವಾದ, 10.30 ಹಳ್ಳಿ ಹಾಡು, ಪ್ರಸ್ತುತಿ –ಅಬ್ದುಲ್ ರಶೀದ್

ಹಿನಕಲ್‌ನಲ್ಲಿಂದು ಮೈಸೂರು ತಾಲೂಕು

■ **ಹಿನಕಲ್ ಶ್ರೀ ಮಾರಮ್ಮನ ದೇವಸ್ಥಾನ :** ಬ್ರಹ್ಮಶಿಲಾ (ಕರುಕಲ್ಲು) ಪ್ರತಿಷ್ಠಾಪನೆ ಮತ್ತು ಪೂಜಾ ಮಹೋತ್ಸವ, ಬೆಳಗ್ಗೆ 9.30 ರಿಂದ ಗಣಪತಿ ಪೂಜೆ, ಪುಣ್ಯಾಹ, ಋತ್ವಿಕ್ ವರ್ಣನೆ ದೇವತಾನಾಂದಿ ಅಂಕುರಾರ್ಪಣ, ಧ್ವಜಾರೋಹಣ, ಯಾಗಶಾಲಾ ಪ್ರವೇಶ, ಕಲಶ ಸ್ಥಾಪನೆ, ಸಂಜೆ 4 ರಿಂದ ಬದನವಾಳು ಶ್ರೀ ಶಿವಕುಮಾರಶಾಸ್ತ್ರಿ ಮತ್ತು ತಂಡದವರಿಂದ ಸುಗಮ ಸಂಗೀತ ಮತ್ತು ವಚನ ಗಾಯನ, ಸ್ಥಳ: ಶ್ರೀ ಮಾರಮ್ಮನ ದೇವಸ್ಥಾನದ ಆವರಣ, ಹಿನಕಲ್ ಗ್ರಾಮ

ಮರಿತಿಬ್ಬೇಗೌಡ ಗೆಲುವಿಗೆ ನನ್ನ ವರ್ಚಸ್ಸು ಕಾರಣವಾಗಿತ್ತು

● ಮಾಜಿ ಸಿಎಂ ಕುಮಾರಸ್ವಾಮಿ ಎದಿರೇಟು ● ಅವರು ಇಲ್ಲದಾಗಲೂ ಹಲವು ಚುನಾವಣೆ ಗೆದ್ದಿದ್ದೇವೆ; ಅವರಿಗೆ ಅಷ್ಟೇಕೆ ಆದ್ಯತೆ ನೀಡ್ತೀರಾ?

ಮೈಸೂರು, ಮೇ 17(ಎಸ್‌ಬಿಡಿ)– ಮರಿತಿಬ್ಬೇಗೌಡರ ಗೆಲುವಿಗೆ ನನ್ನ ವರ್ಚಸ್ಸು ಕಾರಣ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ.

ಮೈಸೂರಿನಲ್ಲಿ ಶಾಸಕ ಸಾ.ರಾ.ಮಹೇಶ್ ಕಚೇರಿ ಆವರಣದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ, ಮರಿತಿಬ್ಬೇಗೌಡರ ಆರೋಪಗಳಿಗೆ ಪ್ರತಿಕ್ರಿಯೆ ನೀಡಿದ ಕುಮಾರಸ್ವಾಮಿ, ಅವರನ್ನು ಜೆಡಿಎಸ್ ಅಭ್ಯರ್ಥಿ ಮಾಡಿದ್ದನ್ನು ಒಪ್ಪುತ್ತಾರಲ್ಲವೇ?. ನಂತರ ಚುನಾವಣಾ ಖರ್ಚು–ವೆಚ್ಚಕ್ಕೆ ಕುಮಾರಸ್ವಾಮಿಯಿಂದ ಎಷ್ಟು ದೇಣಿಗೆ ಹೋಗಿತ್ತು ಎನ್ನುವುದನ್ನು ಮರೆತಿದ್ದಾರಾ?. ಅವರನ್ನು ಸೋಲಿಸಲು ನಾನು ಆರ್ಥಿಕ ನೆರವು ನೀಡಿದ್ದೆನಾ? ಇದೆಲ್ಲವನ್ನೂ ಸಾರ್ವಜನಿಕವಾಗಿ ಚರ್ಚೆ ಮಾಡಲು ಹೇಳಿ. ಆ ಸಂದರ್ಭದಲ್ಲಿ ಕುಮಾರಸ್ವಾಮಿ ಅವರಿಗಿದ್ದ ವರ್ಚಸ್ಸು ನನ್ನ ಗೆಲುವಿಗೆ ಕಾರಣವಾಯಿತು ಎನ್ನುವುದನ್ನು ಸ್ಮರಿಸಿಕೊಳ್ಳಲಿ. ಇದಕ್ಕಿಂತ ಹೆಚ್ಚಿಗೆ ಹೇಳಬೇಕಿಲ್ಲ ಎಂದು ಖಡಕ್ಕಾಗಿ ನುಡಿದರು.

ದಕ್ಷಿಣ ಪದವೀಧರರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಗೆ ಹೆಚ್.ಕೆ. ರಾಮುಗೆ ಟಿಕೆಟ್ ನೀಡಿರುವುದು ನನ್ನ ವೈಯಕ್ತಿಕ ತೀರ್ಮಾನವಲ್ಲ. ಪಕ್ಷದ ಕೋರ್ ಕಮಿಟಿ, ಮೈಸೂರು, ಮಂಡ್ಯ, ಹಾಸನ ಹಾಗೂ ಚಾಮರಾಜನಗರ ಜಿಲ್ಲೆಗಳ ಮುಖಂಡರ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಧಾರ. ಈಗಿನ ಚುನಾವಣೆಗಳಲ್ಲಿ ಆರ್ಥಿಕ ವೆಚ್ಚ ಮಾಡಬೇಕೆನ್ನುವುದು ಜಗಜ್ಜಾಹಿರಾಗಿರುವ ಸಂಗತಿ. ಹಾಗೆಂದ ಮಾತ್ರಕ್ಕೆ ಚುನಾವಣೆಯಲ್ಲಿ ಹಣ ಖರ್ಚು ಮಾಡಲು ಶಕ್ತರಾಗಿದ್ದಾರೆ ಎನ್ನುವ ಕಾರಣಕ್ಕೆ ರಾಮುಗೆ ಟಿಕೆಟ್ ನೀಡಿಲ್ಲ. ಚುನಾವಣೆಯಲ್ಲಿ ಅವರು ಗೆಲ್ಲುತ್ತಾರೆಂಬ ವಿಶ್ವಾಸದಿಂದ ಪಕ್ಷ ಈ ನಿರ್ಧಾರ ಕೈಗೊಂಡಿದೆ ಎಂದರು.

ಮರಿತಿಬ್ಬೇಗೌಡರ ಕ್ಷೇತ್ರದವರೇ ಆದ ಶಾಸಕ ಡಾ.ಅನ್ನದಾನಿ ಅವರಿಗೆ ವಾಸ ಮಾಡಲು ಮನೆಯೂ ಇರಲಿಲ್ಲ. ಅಂದು ದಲಿತ ಸಮಾಜದ ಯುವಕ ಅನ್ನದಾನಿ ಚುನಾವಣಾ ವೆಚ್ಚವನ್ನು ಸಂಪೂರ್ಣವಾಗಿ ಕುಮಾರಸ್ವಾಮಿಯೇ ಭರಿಸಿದ್ದು. ದಿವಂಗತ ಚಿಕ್ಕಮಾದು ಅವರು ದೊಡ್ಡ ಶ್ರೀಮಂತರು ಎಂದು ಅವರಿಗೆ ಟಿಕೆಟ್ ನೀಡಿರಲಿಲ್ಲ. ಅವರನ್ನು ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದಿಂದ ಗೆಲ್ಲಿಸಿದ್ದಲ್ಲದೆ, ಪರಿಷತ್ ಸದಸ್ಯರನ್ನಾಗಿಯೂ ಮಾಡಲಾಗಿತ್ತು. ಅವರಿಂದ ಹಣ ತೆಗೆದುಕೊಂಡು ಅಥವಾ ಅವರು ಶ್ರೀಮಂತರೆನ್ನುವ ಕಾರಣಕ್ಕೆ ಮಾಡಿದ್ದಲ್ಲ. ಜೆಡಿಎಸ್ ಇತಿಹಾಸದಲ್ಲಿ ಇಂತಹ ಸಾಕಷ್ಟು ಉದಾಹರಣೆಗಳಿವೆ. ಎಲ್ಲರನ್ನೂ ಮೆಚ್ಚಿಸಲು ಸಾಧ್ಯವಿಲ್ಲ. ಪಕ್ಷದ ತೀರ್ಮಾನಕ್ಕೆ ಬದ್ಧವಾಗಿರಬೇಕು ಎನ್ನುವುದು ಎಲ್ಲರಿಗೂ ಅನ್ವಯಿಸುತ್ತದೆ ಎಂದು ಎಚ್ಚರಿಸಿದರು.

ಹೊಸಬರಿಗೆ ಮಣೆ ಹಾಕಲ್ಲ: ಪಕ್ಷದ ಹಿತ ದೃಷ್ಟಿಯಿಂದ ಮುಂದಿನ ದಿನಗಳಲ್ಲಿ ಕೆಲವು ಕಠಿಣ ನಿರ್ಧಾರ ಕೈಗೊಳ್ಳುವ ಚಿಂತನೆಯಿದೆ. ರಾಜ್ಯದ ಸಮಸ್ಯೆಗಳ ಬಗ್ಗೆ ವಿಷಯಾಧಾರಿತವಾಗಿ ಜನರ ಮುಂದೆ ಹೋಗಿ ಪಕ್ಷದ ಶಕ್ತಿ ವೃದ್ಧಿಸಲು ಹೆಜ್ಜೆ ಇಡಲಾಗಿದೆ. ಈಗಾಗಲೇ ತಳ ಹಂತದ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗಿದೆ. ಇನ್ನು ಬೇರೆ ಪಕ್ಷಗಳಿಂದ ಜೆಡಿಎಸ್‌ಗೆ ಬರುವವರಿಗೆ ತಕ್ಷಣ ಮಣೆ ಹಾಕುವುದನ್ನು ನಿಲ್ಲಿಸಲು ತೀರ್ಮಾನಿಸಲಾಗಿದೆ. ಮರಿತಿಬ್ಬೇಗೌಡರು ಮೊದಲಿನಿಂದಲೂ ಅವರದೇ ಆದ ರೀತಿಯಲ್ಲಿ ಕೆಲವು ತೀರ್ಮಾನ ತೆಗೆದುಕೊಂಡಿದ್ದಾರೆ. ಈ ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ. ವಿಧಾನಸಭೆ ಹಾಗೂ ವಿಧಾನಪರಿಷತ್ ಚುನಾವಣೆ ನಡುವೆ ವ್ಯತ್ಯಾಸವಿದೆ. ಪಕ್ಷದ ತೀರ್ಮಾನಕ್ಕೆ ಎಲ್ಲರೂ ತಲೆ ಬಾಗಲೇಬೇಕು. ಮರಿತಿಬ್ಬೇಗೌಡರು ಇಲ್ಲದಿದ್ದಾಗಲೂ ನಾವು ಹಲವು ಚುನಾವಣೆಗಳನ್ನು ಗೆದ್ದಿದ್ದೇವೆ ಎಂದು ಹೇಳಿದ ಕುಮಾರಸ್ವಾಮಿ, ಯಾಕೆ ಅವರಿಗೆ ಅಷ್ಟೊಂದು ಆದ್ಯತೆ ಕೊಡುತ್ತೀರಿ? ಎಂದು ಮಾಧ್ಯಮದವರನ್ನೇ ಪ್ರಶ್ನಿಸಿದರು.



ಸಮಾಲೋಚನಾ ಸಭೆ: ವಿಧಾನಪರಿಷತ್ ಸದಸ್ಯ ಶ್ರೀಕಂಠೇಗೌಡರ ಮಾರ್ಗದರ್ಶನದಲ್ಲಿ ಅಭ್ಯರ್ಥಿ ಹೆಚ್.ಕೆ.ರಾಮು ಹಾಗೂ ಅವರ ಸ್ನೇಹಿತರು, ಈಗಾಗಲೇ ಪದವೀಧರ ಮತದಾರರ ನೋಂದಣಿ ಪ್ರಕ್ರಿಯನ್ನು ಯಶಸ್ವಿಯಾಗಿ ಪೂರೈಸಿದ್ದಾರೆ. ಮೈಸೂರಿನಲ್ಲಿ ಕಚೇರಿಯನ್ನೂ ತೆರೆದು ಮತದಾರರ ವಿಶ್ವಾಸ ಪಡೆಯುವ ನಿಟ್ಟಿನಲ್ಲಿ ಜೆಡಿಎಸ್ ಪ್ರಚಾರ ಆರಂಭಿಸಿದೆ. ದಕ್ಷಿಣ ಪದವೀಧರ ಕ್ಷೇತ್ರ ವ್ಯಾಪ್ತಿಯ ಶಾಸಕರು, ಕಾರ್ಪೊರೇಟರ್‌ಗಳು ಹಾಗೂ ಮುಖಂಡರೊಂದಿಗೆ ಇನ್ನೆರಡು ದಿನದಲ್ಲಿ ಸಮಾಲೋಚನಾ ಸಭೆ ನಡೆಸಿ, ಚರ್ಚಿಸಲಾಗುವುದು ಎಂದು ತಿಳಿಸಿದರು.

ಪದವೀಧರರಿಗೆ ಜೆಡಿಎಸ್ ನೆರವಾಗಿದೆ: ಆಕಸ್ಮಿಕವಾಗಿ ನಾನು ಎರಡು ಬಾರಿ ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿಯಾದಾಗ ಪದವೀಧರರಿಗೆ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಮಹತ್ವದ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿತ್ತು. ಮೊದಲ ಬಾರಿ ಸಿಎಂ ಆದಾಗ 2006–07ರಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಆದ್ಯತೆ ನೀಡಿ, ಕಾಲೇಜು ಹಾಗೂ ಪ್ರೌಢಶಾಲೆಗಳನ್ನು ಪ್ರಾರಂಭ ಮಾಡಿ 56 ಸಾವಿರ ಪದವೀಧರರಿಗೆ ಉದ್ಯೋಗ ಕಲ್ಪಿಸಲಾಗಿತ್ತು. ಕೃಷಿ ಹಾಗೂ ಅರಣ್ಯ ಇಲಾಖೆಯಲ್ಲಿ ಉದ್ಯೋಗ ಸೃಷ್ಟಿಸಿದ್ದೆವು. ಇಂಜಿನಿಯರಿಂಗ್ ಕ್ಷೇತ್ರದಲ್ಲೂ ಸಾಕಷ್ಟು ಉದ್ಯೋಗ ನೀಡಲಾಗಿತ್ತು. 2ನೇ ಬಾರಿ ಆಡಳಿತ ನಡೆಸಿದಾಗಲೂ ಇಂಜಿನಿಯರ್‌ಗಳ ನೇಮಕಾತಿ ನಡೆದಿತ್ತು ಎಂದು ತಿಳಿಸಿದರು.

ಓಪಿಎಸ್ ಜಾರಿಗೆ ಬದ್ಧ: ಪಿಂಚಣಿ ವಿಚಾರದಲ್ಲಿ ಸಾಕಷ್ಟು ಗೊಂದಲವಿದೆ. ಹಳೇ ಪಿಂಚಣಿ ಯೋಜನೆ(ಓಪಿಎಸ್)ಯನ್ನೇ ಮುಂದುವರೆಸಬೇಕೆಂಬ ಮನವಿ ಹಿನ್ನೆಲೆಯಲ್ಲಿ ಹೊಸ ಪಿಂಚಣಿ ಯೋಜನೆ(ಎನ್‌ಪಿಎಸ್)ಯ ಸಾಧಕ ಬಾಧಕಗಳ ಪರಿಶೀಲನೆ ನಡೆಸಿ, ಸರ್ಕಾರಕ್ಕೆ ವರದಿ ನೀಡಬೇಕೆಂದು ಆರ್ಥಿಕ ಇಲಾಖೆ ಪ್ರಧಾನ ಕಾರ್ಯದರ್ಶಿ ನೇತೃತ್ವದಲ್ಲಿ ಸಮಿತಿ ರಚನೆ ಮಾಡಲಾಗಿತ್ತು. ಆದರೆ ಈವರೆಗೆ ಯಾವುದೇ ರೀತಿಯ ತೀರ್ಮಾನ ಆಗಲಿಲ್ಲ. ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ, 2–3 ರಾಜ್ಯಗಳಲ್ಲಿರುವಂತೆ ಎಲ್ಲಾ ನೌಕರರಿಗೂ ಓಪಿಎಸ್ ಜಾರಿಗೆ ತರುವ ಉದ್ದೇಶವಿದೆ. ಪದವೀಧರರು ಖಾಸಗಿ ಅಥವಾ ಸರ್ಕಾರಿ ಉದ್ಯೋಗ ಪಡೆಯುವವರೆಗೆ ನೆರವಾಗುವ ನಿಟ್ಟಿನಲ್ಲಿ ಅವರಿಗೆ ಪದವಿ ಪೂರೈಸಿದ ಬಳಿಕ 3 ವರ್ಷ ಸಹಾಯಧನ ನೀಡುವ ಕಾರ್ಯಕ್ರಮವನ್ನು ಪಕ್ಷದ ಪ್ರಣಾಳಿಕೆಯಲ್ಲಿ ಸೇರಿಸುವ ಚಿಂತನೆ ಇದೆ. ಹೀಗೆ ಶಿಕ್ಷಣ ಹಾಗೂ ಪದವೀಧರ ನಿರುದ್ಯೋಗಿಗಳಿಗೆ ಸಹಕಾರ ಹಾಗೂ ನೇಮಕಾತಿಯಲ್ಲಿನ ಜೆಡಿಎಸ್ ಸಾಧನೆ ಹಾಗೂ ಚಿಂತನೆ ಬಗ್ಗೆ ಪದವೀಧರರಿಗೆ ತಿಳಿಸಿಕೊಡುವ ವಿಷಯಾಧಾರಿತ ಪ್ರಚಾರಕ್ಕೆ ಚಾಲನೆ ನೀಡಲಾಗುವುದು ಎಂದರು.

ಶಾಸಕರಾದ ಸಾ.ರಾ.ಮಹೇಶ್, ಕೆ.ಮಹದೇವ್, ಅಶ್ವಿನ್‌ಕುಮಾರ್, ವಿಧಾಪರಿಷತ್ ಸದಸ್ಯರಾದ ಸಿ.ಎನ್. ಮಂಜೇಗೌಡ, ಶ್ರೀಕಂಠೇಗೌಡ, ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ನಗರಾಧ್ಯಕ್ಷ ಕೆ.ಟಿ.ಚಲುವೇಗೌಡ, ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯರಾದ ಸಾ.ರಾ.ನಂದೀಶ್, ಸಿ.ಜೆ.ದ್ವಾರಕೀಶ್, ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ ಎಂ.ಜೆ.ರವಿಕುಮಾರ್, ಮುಖಂಡರಾದ ಕೆ.ವಿವೇಕಾನಂದ, ರವಿಚಂದ್ರೇಗೌಡ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ರಾಷ್ಟ್ರೀಯ ಪಕ್ಷಗಳು ಜೆಡಿಎಸ್ ಬಾಗಿಲು ತಟ್ಟುತ್ತಿವೆ

ಮಾಜಿ ಸಿಎಂ ಕುಮಾರಸ್ವಾಮಿ ಗೇಲಿ | 123 ನಮ್ಮ ಗುರಿ ಸಾಧನೆ ನಿಶ್ಚಿತ

ಮೈಸೂರು, ಮೇ 17(ಎಸ್‌ಬಿಡಿ)– ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಸ್ವತಂತ್ರವಾಗಿ ಅಧಿಕಾರ ಹಿಡಿಯುವ ವಿಶ್ವಾಸವಿಲ್ಲದ ಎರಡೂ ರಾಷ್ಟ್ರೀಯ ಪಕ್ಷಗಳು, ಜೆಡಿಎಸ್ ಮನೆ ಬಾಗಿಲು ತಟ್ಟುತ್ತಿವೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

> ಜಿ.ಟಿ.ದೇವೇಗೌಡರ ಮೊಮ್ಮಗಳು ನಿಧನಳಾದ ಹಿನ್ನೆಲೆಯಲ್ಲಿ ಅವರ ಮನೆಗೆ ಭೇಟಿ ನೀಡಿದ್ದೆ. ಆ ವೇಳೆ ಯಾವುದೇ ರಾಜಕೀಯ ಮಾತನಾಡಿಲ್ಲ. ನಮ್ಮ ಸಂಬಂಧಗಳು ಚೆನ್ನಾಗಿಯೇ ಇವೆ. ಅದರಲ್ಲಿ ಯಾವುದೇ ಕೊರತೆಯಿಲ್ಲ. ಆದರೆ ರಾಜಕೀಯ ನಿರ್ಣಯಗಳು ಆಯಾಯ ಸಂದರ್ಭದ ತೀರ್ಮಾನಗಳಾಗುತ್ತವೆ ಅಷ್ಟೇ.
> -ಹೆಚ್.ಡಿ.ಕುಮಾರಸ್ವಾಮಿ

ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳು ಹಳೇ ಮೈಸೂರು ಭಾಗದ ಜೆಡಿಎಸ್ ನಾಯಕರ ಸೆಳೆಯುವ ಪ್ರಯತ್ನ ನಡೆಸುತ್ತಿವೆ ಎನ್ನುವ ವಿಚಾರಕ್ಕೆ ಮೈಸೂರಿನಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಹೆಚ್.ಡಿ.ಕುಮಾರಸ್ವಾಮಿ, ಈಗಲೂ ಕೂಡ ಸ್ವತಂತ್ರವಾಗಿ ಅಧಿಕಾರಕ್ಕೆ ಬರುವ ವಿಶ್ವಾಸ ಎರಡೂ ರಾಷ್ಟ್ರೀಯ ಪಕ್ಷಗಳಲ್ಲಿ ಇಲ್ಲ. ಈ ವೈಫಲ್ಯದಿಂದಲೇ ಅವರು ಜೆಡಿಎಸ್ ಪಕ್ಷದ ಮನೆ ಬಾಗಿಲು ತಟ್ಟುತ್ತಿದ್ದಾರೆ. ಬಿಜೆಪಿಯಿಂದ ಕಾಂಗ್ರೆಸ್‌ಗೆ ಹೋಗುತ್ತಾರೋ? ಇಲ್ಲ ಜೆಡಿಎಸ್‌ನಿಂದ ಬಿಜೆಪಿಗೆ ಅಥವಾ ಕಾಂಗ್ರೆಸ್‌ಗೆ ಹೋಗ್ತಾರೋ? ಅದಕ್ಕೂ ನನಗೂ ಸಂಬಂಧವಿಲ್ಲ. ಜೆಡಿಎಸ್ ಪಕ್ಷದ ಶಕ್ತಿಯನ್ನು ವೃದ್ಧಿಸುವುದೊಂದೇ ನನ್ನ ಗುರಿ ಎಂದು ತಿಳಿಸಿದರು.

123 ಗುರಿ ಸಾಧನೆ ನಿಶ್ಚಿತ: ಪಕ್ಷದಲ್ಲಿದ್ದರೂ ಮಾನಸಿಕವಾಗಿ ಹೊರಗಿರುವವರಿಂದ ಹಿನ್ನಡೆಯಾಗಬಹುದು. ಹಾಗಾಗಿ ಇಂತಹ ಗೊಂದಲ, ಸಮಸ್ಯೆಗಳಿಗೆ ಸದ್ಯದಲ್ಲೇ ಪರಿಹಾರ ದೊರಕುತ್ತದೆ. ಈಗಾಗಲೇ 'ಜನತಾ ಜಲಧಾರೆ ಮುಖಾಂತರ ಜೆಡಿಎಸ್ ಅಸ್ತಿತ್ವ ಸಾಬೀತು ಮಾಡಿದ್ದೇವೆ. ಅದೊಂದು ಐತಿಹಾಸಿಕ ಕಾರ್ಯಕ್ರಮ. ಅಷ್ಟೊಂದು ಪ್ರಮಾಣದ ಜನರನ್ನು ಸೆಳೆಯುವುದು ಯಾವ ರಾಷ್ಟ್ರೀಯ ಪಕ್ಷಗಳಿಗೂ ಸಾಧ್ಯವಿಲ್ಲ. ಕರ್ನಾಟಕದಲ್ಲಿ ಜೆಡಿಎಸ್ ಎಂದೂ ಪ್ರಸ್ತುತ ಎನ್ನುವುದು ಸಾಬೀತಾಗಿದೆ. ಇದು ಪ್ರಾರಂಭಿಕ ಹೋರಾಟ. 2023ರ ಸಾರ್ವತ್ರಿಕ ಚುನಾವಣೆಯಲ್ಲಿ 123 ಸ್ಥಾನ ಗೆಲ್ಲುವ ಗುರಿ ಸಾಧಿಸುವ ವಿಶ್ವಾಸ ಗಟ್ಟಿಯಾಗಿದೆ. ನನ್ನ ಗುರಿ ಸ್ಪಷ್ಟವಾಗಿರುವುದರಿಂದ ಗೊಂದಲಗಳಿಗೆ ಪ್ರಾಮುಖ್ಯತೆ ನೀಡುವ ಅಗತ್ಯವಿಲ್ಲ. ಈಗಾಗಲೇ ಜೆಡಿಎಸ್ ಅಲೆಯ ವಾತಾವರಣ ನಿರ್ಮಾಣವಾಗಿದೆ ಎಂದರು.

ರಾಜ್ಯಸಭೆಗೆ ಸ್ಪರ್ಧೆ ನಿರ್ಧಾರ: ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯುವ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯನ್ನು ಸ್ಪರ್ಧಿಗಿಳಿಸುವ ತೀರ್ಮಾನವಾಗಿದೆ. ಹಾಗಾಗಿ ನಾವು ಯಾವುದೇ ಪಕ್ಷಕ್ಕೆ ಬೆಂಬಲ ನೀಡುವ ಪ್ರಶ್ನೆಯೇ ಇಲ್ಲ. ಮತಗಳ ಸಾಮರ್ಥ್ಯಾನುಸಾರ ಬಿಜೆಪಿಯಿಂದ ಇಬ್ಬರು, ಕಾಂಗ್ರೆಸ್‌ನಿಂದ ಓರ್ವ ಅಭ್ಯರ್ಥಿಯನ್ನು ಕಣಕ್ಕಿಳಿಸಿ, ಗೆಲ್ಲಿಸುವ ಪ್ರಯತ್ನದಲ್ಲಿವೆ. ಹೆಚ್ಚುವರಿ ಮತಗಳಿಂದ ಮತ್ತೋರ್ವ ಅಭ್ಯರ್ಥಿಯನ್ನು ಗೆಲ್ಲಿಸುವುದು ಸಾಧ್ಯವಿಲ್ಲ. ಎರಡೂ ಪಕ್ಷಗಳ ಹೆಚ್ಚುವರಿ ಮತಗಳಿಗಿಂತ ಜೆಡಿಎಸ್ ಮತಗಳ ಸಂಖ್ಯೆ ಹೆಚ್ಚಿರುವುದರಿಂದ ನಮ್ಮ ಅಭ್ಯರ್ಥಿಯೂ ಕಣಕ್ಕಿಳಿಯಲಿದ್ದಾರೆ. ಈ ವಿಚಾರದಲ್ಲಿ ನಮ್ಮ ತೀರ್ಮಾನ ಸ್ಪಷ್ಟವಾಗಿದೆ. ಇನ್ನು ವಿಧಾನಸಭೆಯಿಂದ ವಿಧಾನಪರಿಷತ್‌ಗೆ ಆಯ್ಕೆ ಮಾಡುವ ಸಂಬಂಧ ಶಾಸಕಾಂಗ ಸಭೆಯಲ್ಲಿ ತೀರ್ಮಾನ ತೆಗೆದು ಕೊಳ್ಳಲಾಗುವುದು ಎಂದು ತಿಳಿಸಿದರು.

ಕಾಂಗ್ರೆಸ್ ನಿರ್ಧಾರ ಒಂದು ಜೋಕ್: ಒಂದು ಕುಟುಂಬಕ್ಕೆ ಒಂದೇ ಟಿಕೆಟ್ ಎನ್ನುವ ಕಾಂಗ್ರೆಸ್ ನಿರ್ಧಾರ ಒಂದು ಜೋಕ್ ಅಷ್ಟೇ. ಜನರನ್ನು ಸೆಳೆಯಲು ನಡೆಸಿರುವ ನಗೆಪಾಟಲಿನ ಸಂಗತಿ. ಈ ಬಗ್ಗೆ ಕಾಂಗ್ರೆಸ್‌ನಲ್ಲೇ ಗೊಂದಲವಿದೆ. ಮೈಸೂರು ಜಿಲ್ಲೆಯವರಾದ ಕಾಂಗ್ರೆಸ್‌ನ ನಾಯಕರು (ಮಾಜಿ ಸಿಎಂ ಸಿದ್ದರಾಮಯ್ಯ) ನನ್ನ ಮಗ 50 ಸಾವಿರ ಬಹುಮತದೊಂದಿಗೆ ಚುನಾವಣೆಯಲ್ಲಿ ಗೆದ್ದಿದ್ದಾನೆ, ನಾನು 34 ಸಾವಿರದಿಂದ ಗೆದ್ದಿದ್ದೇನೆ, ಒಂದು ಕುಟುಂಬಕ್ಕೆ ಒಂದೇ ಟಿಕೆಟ್ ಎಂದಾದರೆ ನಾವೆಲ್ಲಿ ಹೋಗಬೇಕು ಎಂದು ಪ್ರಶ್ನೆ ಮಾಡಿದ್ದಾರೆ. ಪ್ರಧಾನಿ ಮೋದಿ ಅವರು ಕುಟುಂಬ ರಾಜಕಾರಣ ಪ್ರಜಾಪ್ರಭುತ್ವಕ್ಕೆ ಮಾರಕ ಎಂದರು. ಆದರೆ ರಾಜ್ಯ ಬಿಜೆಪಿಯಲ್ಲಿ ನಡೆಯುತ್ತಿರುವುದು ಕುಟುಂಬ ರಾಜಕಾರಣವೇ. ಕುಟುಂಬ ರಾಜಕಾರಣ ದೂರ ಇಡಬೇಕೆಂದರು. ಆದರೆ ವಿಧಾನಪರಿಷತ್ ಚುನಾವಣೆಗೆ ಯಾರ ಹೆಸರನ್ನು ಕಳುಹಿಸಿದ್ದಾರೆ?. ಕಾಂಗ್ರೆಸ್‌ನಲ್ಲಿ ಒಂದೇ ಕುಟುಂಬದವರು ಎಷ್ಟು ಜನ ಇದ್ದಾರೆ. ಕನಿಷ್ಠ 5 ವರ್ಷ ಪಕ್ಷಕ್ಕಾಗಿ ಶ್ರಮಿಸಿದವರಿಗೆ ಮಾತ್ರ ಅವಕಾಶ ಎಂದರು. ಆದರೆ ಈಗಲೂ ಅವರಿವರ ಮನೆ ಬಾಗಿಲು ತಟ್ಟಿ ಆಹ್ವಾನಿಸುತ್ತಿದ್ದಾರೆ. ಇದರಲ್ಲೇನಾದರೂ ನೈತಿಕತೆ ಇದೆಯೇ?. ಒಂದು ಕುಟುಂಬಕ್ಕೆ ಒಂದೇ ಟಿಕೆಟ್ ಪರಿಪಾಲನೆ ಸಾಧ್ಯವೇ ಇಲ್ಲ ಎಂದು ಅಭಿಪ್ರಾಯಿಸಿದರು.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಮೊಮ್ಮಗಳು ಗೌರಿ ನಿಧನದ ಹಿನ್ನೆಲೆಯಲ್ಲಿ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ, ಶಾಸಕರಾದ ಡಿ.ಸಿ.ತಮ್ಮಣ್ಣ, ಸಾ.ರಾ.ಮಹೇಶ್, ಪುಟ್ಟರಾಜು, ಕೆ.ಮಹದೇವ್, ಅಶ್ವಿನ್‌ಕುಮಾರ್, ಎಂಎಲ್‌ಸಿ ಕೆ.ಟಿ.ಶ್ರೀಕಂಠೇಗೌಡ, ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರ್ ಸೇರಿದಂತೆ ಹಲವು ಮುಖಂಡರು ಮಂಗಳವಾರ ಮೈಸೂರು ತಾಲೂಕಿನ ಗುಂಗ್ರಾಲ್ ಛತ್ರದಲ್ಲಿರುವ ಜಿಟಿಡಿ ನಿವಾಸಕ್ಕೆ ಭೇಟಿ ನೀಡಿ, ಸಾಂತ್ವನ ಹೇಳಿದರು.

ಶಾಲಾ ಪಠ್ಯವನ್ನು 'ಪಕ್ಷಪುಸ್ತಕ'ಗಳನ್ನಾಗಿ ಮಾಡುವ ವ್ಯವಸ್ಥಿತ ಹುನ್ನಾರಕ್ಕೆ ನನ್ನ ಧಿಕ್ಕಾರ

ಮಾಜಿ ಸಿಎಂ ಕುಮಾರಸ್ವಾಮಿ ಟ್ವೀಟ್‌ನಲ್ಲಿ ಆಕ್ರೋಶ

ಬೆಂಗಳೂರು, ಮೇ 17– ಈ ಬಾರಿ ಶೈಕ್ಷಣಿಕ ವರ್ಷದಲ್ಲಿ ಶಾಲಾ ಪಠ್ಯ ಪುಸ್ತಕದಲ್ಲಿ ಅನೇಕ ಬದಲಾವಣೆಗಳಾಗಿವೆ. ಕೆಲವು ಪಠ್ಯ ಹಾಗೂ ವಿಚಾರಗಳನ್ನು ಕೈ ಬಿಡಲಾಗಿದ್ದು, ಕೆಲವು ಪ್ರಮುಖ ವಿಷಯಗಳನ್ನು ಸೇರ್ಪಡೆ ಮಾಡಲಾಗಿದೆ. ಇನ್ನು ಭಾರೀ ವಿವಾದ ಸೃಷ್ಟಿಸಿದ್ದ ಟಿಪ್ಪು ಸುಲ್ತಾನ್ ವೈಭವೀಕರಣವನ್ನು ಪಠ್ಯ ಪುಸ್ತಕದಿಂದ ತೆಗೆದು ಹಾಕಲಾಗಿದೆ. ಟಿಪ್ಪು ಪಾಠವನ್ನು 2 ಸಾಲಿನಲ್ಲಿ ಹೇಳಿ ಮುಗಿಸಿದ್ದಾರೆ. ಪಠ್ಯ ಪುಸ್ತಕದಲ್ಲಿ ಟಿಪ್ಪು ಪಾಠ ಕಡಿತಕ್ಕೆ ವಿರೋಧ' ಪಕ್ಷಗಳು ವಿರೋಧ' ವ್ಯಕ್ತಪಡಿಸಿದೆ. ಮಾಜಿ ಸಿಎಂ ಕುಮಾರಸ್ವಾಮಿ ಅವರು ಶಿಕ್ಷಣ ಇಲಾಖೆಯ ಕ್ರಮವನ್ನು ಖಂಡಿಸಿದ್ದಾರೆ. ಸರಣಿ ಟ್ವೀಟ್ ಮಾಡುವ ಮೂಲಕ ಬಿಜೆಪಿ ಸರ್ಕಾರದ ವಿರುದ್ಧ ಹರಿಹಾಯ್ದಿದ್ದಾರೆ.



ಮಾಜಿ ಸಿಎಂ ಕುಮಾರಸ್ವಾಮಿ ಸರಣಿ ಟ್ವೀಟ್?: ಪಠ್ಯಪುಸ್ತಕಗಳನ್ನು 'ಪಕ್ಷಪುಸ್ತಕ'ಗಳನ್ನಾಗಿ ಮಾಡುವ ವ್ಯವಸ್ಥಿತ ಹುನ್ನಾರಕ್ಕೆ ನನ್ನ ಧಿಕ್ಕಾರವಿದೆ. ಬಿಜೆಪಿಯ ನೈಜ ಬಣ್ಣದ ವಿಸ್ತೃತರೂಪವೇ ಆಯ್ದ ಪಠ್ಯಗಳನ್ನು ಟಾರ್ಗೆಟ್ ಮಾಡಿ ಡಿಲೀಟ್ ಮಾಡುವುದು. ಬಿಜೆಪಿಯ ಈ ಬುಡಮೇಲು ಕೃತ್ಯಗಳ ಬಗ್ಗೆ ನನಗೆ ಅಚ್ಚರಿಯೇನೂ ಇಲ್ಲ. ನನ್ನ ಜತೆ ಮೈತ್ರಿ ಸರಕಾರ ಮಾಡಿದಾಗ ಅವರ ಬೇಳೆ ಬೇಯಲಿಲ್ಲ. ಆಪರೇಷನ್ ಕಮಲದ ಅನೈತಿಕ ಮಾರ್ಗದಲ್ಲಿ ಅಧಿಕಾರಕ್ಕೆ ಬಂದ ಸ್ವಘೋಷಿತ ಡೋಂಗಿ ರಾಷ್ಟ್ರಭಕ್ತರು ಇನ್ನೇನು ಮಾಡಲು ಸಾಧ್ಯ?

ಬಿಜೆಪಿ ಮತ್ತವರ ಪಟಾಲಂ ವಿಕೃತಿಗೆ ಇದು ಪರಾಕಾಷ್ಠೆ: ಮಹಾನ್ ರಾಷ್ಟ್ರಪ್ರೇಮಿ, ಬ್ರಿಟೀಷರಿಗೆ ಸಿಂಹಸ್ವಪ್ನ, ಭಾರತ ಮಾತೆಯ ಹೆಮ್ಮೆಯ ಪುತ್ರ ಸರ್ದಾರ್ ಭಗತ್ ಸಿಂಗ್ ಅವರ ಪಠ್ಯಕ್ಕೆ ಕೊಕ್ ಕೊಟ್ಟು, ಆರೆಸ್ಸೆಸ್ ಸಂಸ್ಥಾಪಕ ಹೆಡಗೇವಾರ್ ಕುರಿತ ಮಾಹಿತಿಯನ್ನು ಪಠ್ಯಕ್ಕೆ ತುರುಕುತ್ತಿರುವ ಬಿಜೆಪಿ ಮತ್ತವರ ಪಟಾಲಂ ವಿಕೃತಿಗೆ ಇದು ಪರಾಕಾಷ್ಠೆ. ಭಗತ್ ಸಿಂಗ್ ಸ್ವಾತಂತ್ರ್ಯಕ್ಕಾಗಿ ಬ್ರಿಟೀಷರ ವಿರುದ್ಧ ಹೋರಾಡಿ ಗಲ್ಲಿಗೇರಿದರು. ಸಂಘ ಪರಿವಾರಿಗಳು ಅದೇ ಬ್ರಿಟೀಷರಿಗೆ ಪರಿಚಾರಿಕೆ ಮಾಡಿಕೊಂಡು ಸ್ವಾತಂತ್ರ್ಯಕ್ಕಿಂತ ಗುಲಾಮಗಿರಿಯೇ ಲೇಸೆಂದುಕೊಂಡಿದ್ದರು. ಇಂಥವರು, ಭಗತ್‌ಸಿಂಗ್‌ರಂಥ ರಾಷ್ಟ್ರಪ್ರೇಮಿಗಳನ್ನು ಸಹಿಸಿಕೊಳ್ಳುತ್ತಾರೆಯೇ?

ಬಿಜೆಪಿಗರು ಮತ್ತು ಬ್ರಿಟೀಷರು ಇಬ್ಬರೂ ಒಂದೇ: ಪ್ರಜಾಪ್ರಭುತ್ವ ವಿರೋಧಿ ನಡವಳಿಕೆ, ಚಾರಿತ್ರ್ಯಹೀನತೆಯೇ ಮೈವೆತ್ತ ಬಿಜೆಪಿಗೆ ರಾಜ್ಯದ ಬೆಳವಣಿಗೆಯಲ್ಲಿ ನಂಬಿಕೆ ಇಲ್ಲ. ಹಿಜಾಬ್, ಆಹಾರ, ವ್ಯಾಪಾರ, ಹಲಾಲ್ ಎಲ್ಲಾ ಆಯಿತು. ಈಗ ಪಠ್ಯಕ್ಕೆ ನೇತಾಡುತ್ತಿದೆ. ಅಭಿವೃದ್ಧಿ ಎಂದರೆ ಆ ಪಕ್ಷಕ್ಕೆ ಅಪಥ್ಯ. ಬಿಜೆಪಿಗರು ಮತ್ತು ಬ್ರಿಟೀಷರು ಇಬ್ಬರೂ ಒಂದೇ. ಒಡೆದು ಆಳುವುದೇ ಇವರ ನೀತಿ & ಧರ್ಮ. ಬ್ರಿಟೀಷ್ ಪರಂಪರೆಯನ್ನು ಬಿಜೆಪಿಗರು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲೂ ಮುಂದುವರಿಸಿದ್ದಾರೆ. ಜನರ ಸ್ವಾತಂತ್ರ್ಯವನ್ನು ಸಹಿಸಲು ಅವರಿಗೆ ಆಗುತ್ತಿಲ್ಲ.

"ಅಯ್ಯೋ.. ಕರ್ನಾಟಕ ಕಟುಕರ ಕೈಯಲ್ಲಿ ಸಿಕ್ಕಿಕೊಂಡಿದೆ: ಪಠ್ಯವನ್ನು ವಿಕೃತಿಗೊಳಿಸುತ್ತಿರುವುದು ಎಂದರೆ, ಕನ್ನಡ ಅಸ್ಮಿತೆಯನ್ನು ಹತ್ತಿಕ್ಕುವ ಪಾತಕಯತ್ನ. ಕನ್ನಡಿಗರು ಎಚ್ಚೆತ್ತುಕೊಳ್ಳಬೇಕು, ಪ್ರಶ್ನಿಸಬೇಕು. ಹೋರಾಟಕ್ಕೂ ಇಳಿಯಬೇಕು. "ಅಯ್ಯೋ.. ಕರ್ನಾಟಕ ಕಟುಕರ ಕೈಯಲ್ಲಿ ಸಿಕ್ಕಿಕೊಂಡಿದೆ!!" ಎಂದು ಟ್ವೀಟ್ ಮಾಡುವ ಮೂಲಕ ಮಾಜಿ ಸಿಎಂ ಕುಮಾರಸ್ವಾಮಿ ಅವರು, ಟಿಪ್ಪು ಪಠ್ಯ ಕಡಿತಕ್ಕೆ ಬೇಸರ ವ್ಯಕ್ತಪಡಿಸಿದ್ದಾರೆ.

ಶಿಕ್ಷಣ ಇಲಾಖೆ ಅಧಿಕಾರಿಗಳು ಕಚೇರಿಗಳಲ್ಲಿ ಕುಳಿತರೆ ಉಪಯೋಗವಿಲ್ಲ: ಶಾಲೆ ಆರಂಭವಾಗಿದ್ದು ಸರ್ಕಾರಿ ಶಾಲೆಗಳ ದುಸ್ಥಿತಿ ಬಗ್ಗೆ ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸಿದ್ದಾರೆ. ಶಿಕ್ಷಣ ಇಲಾಖೆ ಅಧಿಕಾರಿಗಳು ಕಚೇರಿಗಳಲ್ಲಿ ಕುಳಿತರೆ ಉಪಯೋಗವಿಲ್ಲ. ಶಾಲೆಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಕುಂದುಕೊರತೆಗಳನ್ನು ನೀಗಿಸಬೇಕು. ಸ್ವಚ್ಛತೆ – ನೈರ್ಮಲ್ಯ, ಮೂಲಸೌಕರ್ಯಗಳನ್ನು ಉತ್ತಮಪಡಿಸಲು ಶ್ರಮಿಸಬೇಕು ಎಂದು ಒತ್ತಾಯಿಸಿದ್ದಾರೆ. ಗ್ರಾಮೀಣ ಭಾಗದ ಅನೇಕ ಕಡೆ ಶಾಲಾ ಕಟ್ಟಡಗಳು ಶಿಥಿಲವಾಗಿವೆ. ಮಳೆ ಬಂದರೆ ಹಳ್ಳಿಶಾಲೆಗಳು ಸೋರುತ್ತಿವೆ. ಕಿಟಕಿ ಬಾಗಿಲುಗಳೇ ಇಲ್ಲದ ದೃಶ್ಯಗಳನ್ನು ಮಾಧ್ಯಮಗಳಲ್ಲಿ ಗಮನಿಸಿದ್ದೇನೆ. ಉತ್ತಮ ವಾತಾವರಣದಲ್ಲಿ ಮಕ್ಕಳು ಕಲಿಯುವ ವ್ಯವಸ್ಥೆ ಕಲ್ಪಿಸಬೇಕು. ಇದು ರಾಜ್ಯ ಸರ್ಕಾರದ ಹೊಣೆ ಎಂದಿದ್ದಾರೆ.

ದಕ್ಷಿಣ ಪದವೀಧರ ಕ್ಷೇತ್ರದಿಂದ ಪರಿಷತ್ ಚುನಾವಣೆ ; 35 ವರ್ಷಗಳಿಂದ ಜೆಡಿಎಸ್ ಕಾರ್ಯಕರ್ತರಾಗಿ ದುಡಿದ ಜಯರಾಂ ಕೀಲಾರರಿಗೆ ಟಿಕೆಟ್ ಇಲ್ಲ

ಹಣ ಇದೆ ಎಂಬ ಕಾರಣಕ್ಕೆ ಹೆಚ್.ಕೆ.ರಾಮುಗೆ ಟಿಕೆಟ್

ವರಿಷ್ಠರು ಹಣ ಪಡೆದು ಟಿಕೆಟ್ ನೀಡಿದ್ದಾರೆಂದು ನಾನು ಹೇಳಿಲ್ಲ ; ಎಂಎಲ್‌ಸಿ ಮರಿತಿಬ್ಬೇಗೌಡ ಸ್ಪಷ್ಟನೆ

ಮೈಸೂರು,ಮೇ 17(ಪಿಎಂ)– ಜೆಡಿಎಸ್ ಕಾರ್ಯಕರ್ತರಾಗಿ ಸುಮಾರು 35 ವರ್ಷಗಳು ಪರೋಕ್ಷವಾಗಿ ದುಡಿದ ಜಯರಾಂ ಕೀಲಾರ ಅವರಿಗೆ ದಕ್ಷಿಣ ಪದವೀಧರ ಕ್ಷೇತ್ರದಿಂದ ಪರಿಷತ್ ಚುನಾವಣೆಗೆ ಸ್ಪರ್ಧಿಸಲು ಪಕ್ಷದಿಂದ ಟಿಕೆಟ್ ನೀಡದಿರುವ ಬಗ್ಗೆ ನನಗೆ ಅಸಮಾಧಾನ ಇದೆ. ಪಕ್ಷದ ಕಾರ್ಯಕರ್ತರನ್ನು ಕಡೆಗಣಿಸಿ ಹಣವಿದ್ದವರಿಗೆ ಟಿಕೆಟ್ ನೀಡಿದ್ದಾರೆಂದು ಎಂದು ಜೆಡಿಎಸ್ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಆಕ್ರೋಶ ವ್ಯಕ್ತಪಡಿಸಿದ್ದು, ಪಕ್ಷದ ವರಿಷ್ಠರು ಹಣ ಪಡೆದು ಟಿಕೆಟ್ ನೀಡಿದ್ದಾರೆ ಎಂದು ನಾನು ಹೇಳಿಲ್ಲ ಎಂಬುದಾಗಿ ಸ್ಪಷ್ಟಪಡಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಯರಾಂ ಕೀಲಾರ ಅವರಿಗೆ ಟಿಕೆಟ್ ನೀಡುವ ಭರವಸೆ ನೀಡಿ, ಕೊನೆ ಘಳಿಗೆಯಲ್ಲಿ ನಿಮ್ಮ ಬಳಿ ಹಣವಿಲ್ಲವೆಂದು ಹೆಚ್.ಕೆ.ರಾಮು ಅವರಿಗೆ ಟಿಕೆಟ್ ನೀಡಿರುವುದು ನನಗೆ ಬಹಳ ಬೇಸರ ತಂದಿದೆ. ಈ ಹಿನ್ನೆಲೆಯಲ್ಲಿ 'ನಮ್ಮ ಪಕ್ಷದಲ್ಲಿ ದುಡಿಮೆಗಿಂತ ದುಡ್ಡಿಗೆ ಪ್ರಾಮುಖ್ಯತೆ ಕೊಟ್ಟಿದ್ದಾರೆ' ಎಂದು ಹೇಳಿದ್ದೇನೆ. ಇದು ಸತ್ಯ. ಆದರೆ ಕುಮಾರಸ್ವಾಮಿಯವರು ನನ್ನ ಹೇಳಿಕೆ ತಿರುಚಿ, 'ಜೆಡಿಎಸ್‌ನಲ್ಲಿ ಟಿಕೆಟ್‌ಗಾಗಿ ಕುಮಾರಸ್ವಾಮಿ, ದೇವೇಗೌಡರು ಹಣ ತೆಗೆದುಕೊಳ್ಳುತ್ತಾರೆ ಎಂದು ಮೈಸೂರಿನಲ್ಲಿ ಯಾರೋ ಒಬ್ಬರು ಹೇಳುತ್ತಾರೆ' ಎಂದು ಮೇ 13ರಂದು ಹೇಳಿದ್ದಾರೆ. ಆದರೆ ನಾನು ಆ ರೀತಿಯಲ್ಲಿ ಹೇಳಿಕೆ ನೀಡಿಲ್ಲ ಎಂದರು.

ಜಯರಾಂಗೆ ಟಿಕೆಟ್ ಭರವಸೆ ನೀಡಿದ್ದರು: ಜಯರಾಂ ಕೀಲಾರ ಅವರಿಗೆ ಟಿಕೆಟ್ ನೀಡಬೇಕು. ಅವರನ್ನು ಈ ಬಾರಿ ಗೆಲ್ಲಿಸುವ ಜವಾಬ್ದಾರಿ ನಮ್ಮದೆಂದು ಹೆಚ್.ಡಿ.ದೇವೇಗೌಡ, ಹೆಚ್.ಡಿ.ಕುಮಾರಸ್ವಾಮಿ ಅವರಲ್ಲಿ ಪ್ರಾರಂಭದಿಂದಲೂ ಮನವಿ ಮಾಡಿದ್ದೆವು. ಆಗ ನಿಮಗಲ್ಲದೆ ಯಾರಿಗೂ ಟಿಕೆಟ್ ನೀಡುವುದಿಲ್ಲ. ನೀವು ತಯಾರಿ ನಡೆಸಿ ಎಂದಿದ್ದರು. ಕೊನೆ ಘಳಿಗೆಯಲ್ಲಿ ಜಯರಾಂ ಬಳಿ ಹಣವಿಲ್ಲ. ಹಾಗಾಗಿ ಟಿಕೆಟ್ ಕೊಡಲಾಗದು ಎಂದರು. ಈಗ ಹೆಚ್.ಕೆ.ರಾಮು ಅವರಿಗೆ ಯಾವ ಮಾನದಂಡದಲ್ಲಿ ಟಿಕೆಟ್ ನೀಡಿದ್ದಾರೆ ಎಂದು ಪ್ರಶ್ನಿಸಿದರು.

ಟಿಕೆಟ್ ಕೊಟ್ಟೂ ನನ್ನ ಸೋಲಿಸಲೆತ್ನಿಸಿದರು: ಕಳೆದ ಎರಡು ಚುನಾವಣೆಗಳಲ್ಲಿ ಜೆಡಿಎಸ್‌ನಿಂದ ಬಿ ಫಾರಂ ಕೊಟ್ಟು ಎರಡೂ ಚುನಾವಣೆಗಳಲ್ಲಿ ಪರೋಕ್ಷವಾಗಿ ಸೋಲಿಸುವ ಪ್ರಯತ್ನ ಪಕ್ಷದ ವರಿಷ್ಠರಿಂದಲೇ ನಡೆಯಿತು. ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ನಾಡಿನಲ್ಲಿ ಪ್ರಾದೇಶಿಕ ಪಕ್ಷ ಉಳಿಯಬೇಕೆಂಬ ಆಶಯದಿಂದ ಪಕ್ಷದಲ್ಲಿ ಮುಂದುವರೆದೆ ಎಂದು ಹೇಳಿದರು.

ನಮ್ಮ ನಾಯಕರಿಂದ ಕಲುಷಿತ: ಇಂದು ಪದವೀಧರ ಕ್ಷೇತ್ರವನ್ನು ಕಲುಷಿತಗೊಳಿಸುವ ಕೆಲಸ ನಮ್ಮ ಪಕ್ಷದ ನಾಯಕರಿಂದಲೇ ನಡೆಯುತ್ತಿದೆ. ಹಣದ ಹೆಸರು ಹೇಳಿಕೊಂಡು ರಾಮು ಅವರಿಗೆ ಟಿಕೆಟ್ ನೀಡಿದ್ದಾರೆ. ದುಡಿಮೆಗೆ ಬೆಲೆ ಇಲ್ಲವೇ? 30 ವರ್ಷ ಪಕ್ಷಕ್ಕಾಗಿ ಜಯರಾಂ ದುಡಿಮೆ ಮಾಡಿದ್ದಾರೆ. 2004ರಲ್ಲಿ ಡಾ.ಅನ್ನದಾನಿ ಅವರಿಗೆ ನಾವೇ ಟಿಕೆಟ್ ನೀಡಿ, ಪಕ್ಷದಿಂದಲೇ ಸಂಪೂರ್ಣ ಚುನಾವಣಾ ವೆಚ್ಚ ಭರಿಸಿದ್ದೇವೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ. ಅದೇ ರೀತಿಯಲ್ಲಿ ಜಯರಾಂ ಅವರಿಗೂ ಸಹಾಯ ಮಾಡಬಹುದಿತ್ತಲ್ಲವೇ? ಇದಕ್ಕೆ ಅವರು ಸ್ಪಷ್ಟೀಕರಣ ನೀಡಬೇಕು ಎಂದು ಒತ್ತಾಯಿಸಿದರು.

ಕುಮಾರಸ್ವಾಮಿಗೆ ಯೋಗ್ಯತೆ ಇಲ್ಲ: 'ನಮ್ಮ ಪಕ್ಷ ಬಿಟ್ಟು ಹೋದವರೆಲ್ಲಾ ಬೀದಿ ಪಾಲಾಗಿದ್ದಾರೆ. ಬಿ.ಎಲ್.ಶಂಕರ್ ಅವರು 20 ವರ್ಷಗಳಿಂದ ಯಾವ ಅಧಿಕಾರ ವನ್ನೂ ಪಡೆದುಕೊಳ್ಳಲಾಗಿಲ್ಲ' ಎಂದು ಕುಮಾರಸ್ವಾಮಿ ಹೇಳಿಕೆ ನೀಡಿದ್ದಾರೆ. ಬಿ.ಎಲ್.ಶಂಕರ್ ಅವರ ಬಗ್ಗೆ ಮಾತ ನಾಡುವ ಯೋಗ್ಯತೆ ಕುಮಾರಸ್ವಾಮಿಯವರಿಗೆ ಇಲ್ಲ. ಶಂಕರ್, ಸರಳ–ಸಜ್ಜನ ವ್ಯಕ್ತಿ. ಪಾರ್ಟಿ ಬಿಟ್ಟವರು ಬೀದಿಪಾಲಾದರೆ, ಇವರು ಪಂಚತಾರ ಹೋಟೆಲ್ ವೆಸ್ಟ್ ಎಂಡ್‌ನಲ್ಲೇ ವಾಸ ಮಾಡಲಿ ಎಂದು ವ್ಯಂಗ್ಯವಾಡಿದರು. ತಮ್ಮ ದೋಷಗಳ ಬಗ್ಗೆ ಕುಮಾರಸ್ವಾಮಿ ವಿಮರ್ಶೆ ಮಾಡಿ ಕೊಳ್ಳದಿದ್ದರೆ, ಪಕ್ಷಕ್ಕೆ ಕಷ್ಟವಾಗಲಿದೆ. ಆದರೆ ನಮ್ಮ ಪಕ್ಷದಲ್ಲಿ ತಪ್ಪು ನಿರ್ಧಾರಗಳನ್ನು ಬದಲಾವಣೆ ಮಾಡಿಕೊಂಡು ಹೊಸ ಚೈತನ್ಯ ತುಂಬ ಬೇಕೆಂಬ ಇಚ್ಛೆ ಪಕ್ಷದ ನಾಯಕರಲ್ಲಿ ಇಲ್ಲ ಎಂದರು. ನಿವೃತ್ತ ಪ್ರಾಂಶುಪಾಲ ಮತ್ತು ಈ ಬಾರಿ ದಕ್ಷಿಣ ಪದವೀಧರ ಕ್ಷೇತ್ರದ ಜೆಡಿಎಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಜಯರಾಂ ಕೀಲಾರ ಗೋಷ್ಠಿಯಲ್ಲಿದ್ದರು.

ಪರಿಷತ್‌ಗೆ ರೈತನ ಮಗನ ನೇಮಕ ಮಾಡಿದ್ದಾರಾ!?

22 ವರ್ಷಗಳಿಂದ ನೋಡುತ್ತಿದ್ದೇನೆ. ನಮ್ಮ ಪಕ್ಷದಿಂದ ಈವರೆಗೆ ರೈತನ ಮಗನನ್ನು ವಿಧಾನ ಪರಿಷತ್‌ಗೆ ನೇಮಕ ಮಾಡಿಲ್ಲ. ಕುದುರೆ ಸಾಕುವವರು, ಚಿನ್ನ–ಬೆಳ್ಳಿ ವ್ಯಾಪಾರ ಮಾಡುವವರು, ಲ್ಯಾಂಡ್ ವ್ಯವಹಾರ ಮಾಡುವವರು ಇಂತಹವರನ್ನೇ ಪರಿಷತ್‌ಗೆ ನಾಮನಿರ್ದೇಶನ ಮಾಡಿದ್ದಾರೆ. ಮುಂದಿನ ತಿಂಗಳು ನಮ್ಮ ಪಕ್ಷಕ್ಕೆ ಒಬ್ಬ ಪರಿಷತ್ ಸದಸ್ಯರನ್ನು ನೇಮಕ ಮಾಡುವ ಅವಕಾಶವಿದೆ. ಜಯರಾಂ ಅಥವಾ ರೈತ ಸಮುದಾಯದ ಸಾಮಾನ್ಯ ಕಾರ್ಯಕರ್ತರನ್ನು ನಾಮನಿರ್ದೇಶನ ಮಾಡಲಿ. ಆಗ ನೋಡೋಣ ಇವರ ಬದ್ಧತೆಯನ್ನು ಎಂದು ಮರಿತಿಬ್ಬೇಗೌಡ ಕಿಡಿಕಾರಿದರು.

ನನ್ನ ಕ್ಷೇತ್ರಕ್ಕೆ ಅಭ್ಯರ್ಥಿ ರೆಡಿ ಮಾಡ್ತಿದ್ದಾರೆ ; ಮುಂದೆ ಜೆಡಿಎಸ್ ತೊರೆಯುವುದು ನಿಶ್ಚಿತ

ಮೈಸೂರು,ಮೇ 17(ಪಿಎಂ)– ಮುಂದೊಂದು ದಿನ ಜೆಡಿಎಸ್ ಪಕ್ಷ ತೊರೆಯುವುದು ನಿಶ್ಚಿತ. ಆದರೆ ಈಗಲೇ ಆ ತೀರ್ಮಾನ ಮಾಡುವುದಿಲ್ಲ. ಮುಂದೆ ಎಲ್ಲವನ್ನೂ ಆಲೋಚನೆ ಮಾಡುತ್ತೇನೆ. ಮತದಾರರು, ಹಿತೈಷಿಗಳ ಅಭಿಪ್ರಾಯ ಪಡೆದು ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತೇನೆ ಎಂದು ಮರಿತಿಬ್ಬೇಗೌಡ ತಿಳಿಸಿದರು.

ಯಾವುದೇ ಪಕ್ಷದ ನಾಯಕರಲ್ಲಿ ನಾನು ನಿಮ್ಮ ಪಾರ್ಟಿಗೆ ಬರುತ್ತೇನೆ ಎಂದು ಸದ್ಯ ಹೇಳಿಲ್ಲ. ಹೆಚ್.ಡಿ.ದೇವೇಗೌಡರ ಮಾತಿಗೆ ನಮ್ಮ ಪಕ್ಷದಲ್ಲಿ ಬೆಲೆ ಇಲ್ಲ. ಹೆಚ್.ಡಿ.ಕುಮಾರಸ್ವಾಮಿ ನಾಯಕತ್ವ ವಹಿಸಿಕೊಂಡ ಬಳಿಕ ಪಕ್ಷ ಸೊರಗುತ್ತಿದೆ. ಹೆಚ್.ಕೆ.ರಾಮುಗೂ ದಕ್ಷಿಣ ಪದವೀಧರ ಕ್ಷೇತ್ರಕ್ಕೂ ಏನು? ಸಂಬಂಧ ಎಂದು ಪ್ರಶ್ನಿಸಿದರು. ಮುಂದಿನ ದಿನಗಳಲ್ಲಿ ಜಯರಾಮ್ ಅವರನ್ನು ಪರಿಷತ್ ಸದಸ್ಯರಾಗಿ ಮಾಡಿದರೆ ಪಕ್ಷದಲ್ಲಿ ಉಳಿಯುತ್ತೀರಾ? ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ನಾನು ಪಾರ್ಟಿಯಲ್ಲಿ ಇರೋಲ್ಲ. ಏಕೆಂದರೆ ನಮ್ಮ ನಾಯಕರು ನನ್ನ ಕ್ಷೇತ್ರಕ್ಕೆ ಈಗಾಗಲೇ ಅಭ್ಯರ್ಥಿ ರೆಡಿ ಮಾಡಿದ್ದಾರೆ ಎಂದರು. ಈ ಚುನಾವಣೆಯಲ್ಲಿ ನಾನು ತಟಸ್ಥವಾಗಿರುತ್ತೇನೆ. ಹೆಚ್.ಕೆ.ರಾಮು ಪರ ಪ್ರಚಾರ ಮಾಡಲ್ಲ. ನನ್ನ ಬೆಂಬಲಿಗರು ಯಾರಿಗೆ ಮತದಾನ ಮಾಡಬೇಕೆಂದು ಸ್ವತಃ ಅವರೇ ನಿರ್ಣಯ ಮಾಡಲಿದ್ದಾರೆ. ಅದರಲ್ಲಿ ನಾನು ಹಸ್ತಕ್ಷೇಪ ಮಾಡಲ್ಲ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

1993ರ ಮುಂಬೈ ಸರಣಿ ಸ್ಫೋಟ ಪ್ರಕರಣ: ನಾಲ್ವರು ಆರೋಪಿಗಳ ಬಂಧನ

ಮುಂಬೈ, ಮೇ 17– 1993ರ ಮುಂಬೈ ಸರಣಿ ಬಾಂಬ್ ಸ್ಫೋಟ ಪ್ರಕರಣ ಸಂಬಂಧ ನಾಲ್ವರು ಆರೋಪಿಗಳನ್ನು ಗುಜರಾತ್‌ನ ಭಯೋತ್ಪಾದನಾ ನಿಗ್ರಹ ದಳವು (ಎಟಿಎಸ್) ಮಂಗಳವಾರ ಬಂಧಿಸಿದೆ. ನಕಲಿ ಪಾಸ್‌ಪೋರ್ಟ್ ಹೊಂದಿರುವ ಶಂಕೆಯ ಮೇರೆಗೆ 4 ಮಂದಿಯನ್ನು ವಶಕ್ಕೆ ಪಡೆದಿದ್ದೇವೆ. ಅವರು 1993ರ ಬಾಂಬೆ ಸರಣಿ ಸ್ಫೋಟದ ಆರೋಪಿಗಳು ಎಂಬುದು ತನಿಖೆ ವೇಳೆ ಖಚಿತವಾಗಿದೆ. ಕೂಡಲೇ ಅವರನ್ನು ಬಂಧಿಸಲಾಗಿದೆ. ಬಂಧಿತರನ್ನು ಅಬುಬಕರ್, ಯೂಸುಫ್ ಭಟ್ಕಾ, ಶೋಬ್ ಬಾಬಾ, ಸಯ್ಯದ್ ಖುರೇಷಿ ಎಂದು ಗುರುತಿಸಲಾಗಿದೆ ಎಂದು ಗುಜರಾತ್ ಎಟಿಎಸ್ ಡಿಐಜಿ ದೀಪನ್ ಭದ್ರನ್ ತಿಳಿಸಿದ್ದಾರೆ.

ಶ್ರೀಲಂಕನ್ ಏರ್‌ಲೈನ್ಸ್ ಮಾರಾಟಕ್ಕೆ ಮುಂದಾದ ಸರ್ಕಾರ

ಕೊಲಂಬೋ, ಮೇ 17– ಸಾಲದ ಸುಳಿಗೆ ಸಿಲುಕಿ ನಲುಗಿರುವ ಶ್ರೀಲಂಕಾ ಆರ್ಥಿಕ ಹಾಗೂ ರಾಜಕೀಯ ಬಿಕ್ಕಟ್ಟನ್ನು ನಿಭಾಯಿಸಲು ಹೆಣಗಾಡುತ್ತಿದೆ. ಈ ಯೋಜನೆಯ ಭಾಗವಾಗಿ ದ್ವೀಪ ರಾಷ್ಟ್ರ ತನ್ನ ರಾಷ್ಟ್ರೀಯ ವಿಮಾನಯಾನ ಸಂಸ್ಥೆ ಶ್ರೀಲಂಕನ್ ಏರ್‌ಲೈನ್ಸ್ ಅನ್ನು ಖಾಸಗೀಕರಣಗೊಳಿಸಲು ಮುಂದಾಗಿದೆ.

ಶ್ರೀಲಂಕಾದ ಹೊಸದಾಗಿ ನೇಮಕಗೊಂಡ ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಶ್ರೀಲಂಕನ್ ಏರ್‌ಲೈನ್ಸ್ ಅನ್ನು ಖಾಸಗೀಕರಣಗೊಳಿಸಲು ಮುಂದಾಗಿದ್ದಾರೆ. ಈ ಮೂಲಕ ಆರ್ಥಿಕ ಹಾಗೂ ರಾಜಕೀಯ ಬಿಕ್ಕಟ್ಟನ್ನು ಸುಧಾರಿಸಲು ಪ್ರಯತ್ನಿಸುತ್ತಿದ್ದಾರೆ.

1948 ರಲ್ಲಿ ಬ್ರಿಟನ್‌ನಿಂದ ಸ್ವಾತಂತ್ರ್ಯ ಪಡೆದ ಬಳಿಕ ಶ್ರೀಲಂಕಾ ಇದೇ ಮೊದಲ ಬಾರಿಗೆ ತೀವ್ರವಾದ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ. ನಷ್ಟದಲ್ಲಿರುವ ಶ್ರೀಲಂಕಾದ ಏರ್‌ಲೈನ್ಸ್ ಅನ್ನು ಖಾಸಗೀಕರಣಗೊಳಿಸುವ ಬಗ್ಗೆ ವಿಕ್ರಮಸಿಂಘೆ ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಪ್ರಸ್ತಾಪಿಸಿದರು. ಶ್ರೀಲಂಕನ್ ಏರ್‌ಲೈನ್ಸ್‌ನ ವ್ಯವಸ್ಥಾಪಕ ಷೇರುದಾರ ಸ್ಥಾನದಿಂದ ಮಾಜಿ ಪ್ರಧಾನಿ ಮಹಿಂದಾ ರಾಜಪಕ್ಸೆಯನ್ನು ತೆಗೆದುಹಾಕಿದ ಬಳಿಕ ದೊಡ್ಡ ಮಟ್ಟದ ನಷ್ಟವನ್ನು ಅನುಭವಿಸಿತು. 2021 ಮಾರ್ಚ್ ಹೊತ್ತಿಗೆ ಅದರ ಒಟ್ಟು ನಷ್ಟ 372 ಶತಕೋಟಿ ರೂ. ಆಗಿತ್ತು ಎಂದು ಶ್ರೀಲಂಕಾ ಪ್ರಧಾನಿ ತಿಳಿಸಿದ್ದಾರೆ.

ಶ್ರೀಲಂಕನ್ ಏರ್‌ಲೈನ್ಸ್ ಅನ್ನು ಖಾಸಗೀಕರಣಗೊಳಿಸಿದರೂ ನಾವು ನಷ್ಟವನ್ನು ಭರಿಸುವುದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಈ ನಷ್ಟವನ್ನು ವಿಮಾನದಲ್ಲಿ ಇಲ್ಲಿವರೆಗೆ ಕಾಲಿಡದ, ಕಡು ಬಡತನದಲ್ಲಿ ಹುಟ್ಟಿರುವವರೂ ಭರಿಸಬೇಕಾಗುತ್ತದೆ ಎಂದು ವಿಕ್ರಮಸಿಂಘೆ ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಸಂದರ್ಶಕ : (ಆಗಷ್ಟೇ ಡಿಗ್ರಿ ಮುಗಿಸಿ ಬ್ಯಾಂಕ್ ಕೆಲಸವೊಂದರ ಸಂದರ್ಶನಕ್ಕೆ ಹಾಜರಾಗಿದ್ದಾಗ)" ಸೈಕ್ಲೋನ್ ಎಂದರೇನು?

ಅಭ್ಯರ್ಥಿ : "ಅಷ್ಟೂ ಗೊತ್ತಿಲ್ವಾ ಸಾರ್ ನಂಗೆ....? ಸೈಕಲ್ ತಗೊಳ್ಳೋಕೆ ಕೊಡೋ ಲೋನ್ ಅಲ್ವಾ ಅದು!"

ಮೈಸೂರು ಮಿತ್ರ

ಬುಧವಾರ, 18 ಮೇ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಸುಖ ಬರಲಿ ಅಥವಾ ಬಾರದಿರಲಿ ಬದುಕಲು ಎಲ್ಲರೂ ಕಲಿಯಬೇಕು.

– ಜಾರ್ಜ್ ಎಲಿಯಟ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಕಬ್ಬು ರುಚಿ ಅಂತ ಬೇರು ಸಹಿತ ಅಗಿಯುವುದೋ?

ನಿಮ್ಮ ಪತ್ರಗಳು

80ರ ಹುಟ್ಟುಹಬ್ಬದ ಸಂಭ್ರಮದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಮಾನ್ಯರೆ,



ಮೈಸೂರಿನ ಅವಧೂತ ದತ್ತ ಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಗೆ 80ರ ಹುಟ್ಟುಹಬ್ಬದ ಸಂಭ್ರಮ. ಮೈಸೂರು ನಗರದ ಆಶ್ರಮದಲ್ಲಿ ಭಕ್ತರಿಂದ ಹಬ್ಬದ ವಾತಾವರಣ. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ನಾದಮಂಟಪ, ಬೋನ್ಸಾಯ್ ಉದ್ಯಾನವನ, ಶ್ರೀ ದತ್ತ ವೆಂಕಟೇಶ್ವರ ದೇವಸ್ಥಾನ, ಅತ್ಯಂತ 70 ಅಡಿ ಎತ್ತರದ ಶ್ರೀ ಆಂಜನೇಯ ಸ್ವಾಮಿ ಪ್ರತಿಮೆ ಇವೆಲ್ಲವೂ ಪೂಜ್ಯರ ಅದ್ಭುತ ಕೊಡುಗೆಗಳಾಗಿವೆ. ದೇಶ ವಿದೇಶಗಳಲ್ಲಿ ನಾದ ಸಂಗೀತ ಚಿಕಿತ್ಸೆಯ ಕಾರ್ಯಕ್ರಮಗಳನ್ನು ನೀಡಿ, ನಾದಬ್ರಹ್ಮ ಎಂದು ಖ್ಯಾತರಾಗಿದ್ದಾರೆ.

80ರ ಹುಟ್ಟುಹಬ್ಬದ ವಿಶೇಷ ಆಕರ್ಷಣೆಯಾಗಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರು ಮೇಕೆದಾಟುವಿನಿಂದ ಮೈಸೂರಿಗೆ ಭಕ್ತರೊಂದಿಗೆ ಪಾದ ಯಾತ್ರೆ ಮಾಡಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ 50ಕ್ಕೂ ಹೆಚ್ಚು ಸಾಧಕರನ್ನು ಹುಟ್ಟುಹಬ್ಬದಲ್ಲಿ ಪ್ರಶಸ್ತಿಗಳನ್ನು ನೀಡಿ, ಸ್ವಾಮೀಜಿಯವರು ಗೌರವಿಸುತ್ತಿದ್ದಾರೆ. ಸಂಗೀತ ಕ್ಷೇತ್ರದಲ್ಲಿನ ಸೇವೆಗಾಗಿ ಸ್ವಾಮೀಜಿಯವರಿಗೆ ಗೌರವ ಡಾಕ್ಟರೇಟ್ ಹಾಗೂ 9 ಬಾರಿ ಗಿನ್ನಿಸ್ ದಾಖಲೆಯ ಪ್ರಶಸ್ತಿಗಳು ಸ್ವಾಮೀಜಿಯವರಿಗೆ ಸಂದಿದೆ. ಮೈಸೂರು ಮಹಾನಗರಪಾಲಿಕೆಯವರು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ವೃತ್ತ ಎಂದು ನಾಮಕರಣ ಮಾಡಿ, ಸ್ವಾಮೀಜಿಯವರಿಗೆ ಗೌರವ ಸಲ್ಲಿಸಿದ್ದಾರೆ. ಮೈಸೂರನ್ನು ವಿಶ್ವಕ್ಕೆ ಪರಿಚಯಿಸಿದ ಅದ್ಭುತ ಸಾಧಕರಾಗಿ ಸ್ವಾಮೀಜಿಯವರು ವಿಜೃಂಭಿಸಿದ್ದಾರೆ. ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಮೈಸೂರಿನ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸೋಣ. ಮೈಸೂರು ನಾಗರಿಕರ ಪರವಾಗಿ ಸ್ವಾಮೀಜಿಯವರಿಗೆ 80ನೇ ಹುಟ್ಟುಹಬ್ಬದ ಅಭಿನಂದನೆಗಳು.

– ಅಮೋಘವರ್ಷ ನಾಗರಾಜ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಮೈಸೂರು.

ಆಸಿಡ್ ದಾಳಿ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಿ

ಮಾನ್ಯರೆ,

ಕಳೆದ ತಿಂಗಳ 28 ರಂದು (ಏಪ್ರಿಲ್ 28) ಬೆಂಗಳೂರಿನ ಯುವತಿಯೋರ್ವಳ ಮೇಲೆ ಆಸಿಡ್ ಎರಚಿ ಪರಾರಿಯಾಗಿದ್ದ ಆರೋಪಿ ನಾಗೇಶ್ ಬಾಬು ಎಂಬಾತನನ್ನು ಕೃತ್ಯ ನಡೆದ 16 ದಿನಗಳ ನಂತರ ಪೊಲೀಸರು ಬಂಧಿಸಿದ್ದಾರೆ. ಆರೋಪಿಯು ತಮಿಳುನಾಡಿನ ತಿರುವಣ್ಣಾಮಲೈಯ ಆಶ್ರಮವೊಂದರಲ್ಲಿ ಭಕ್ತನ ಸೋಗಿನಲ್ಲಿ ಅಡಗಿದ್ದನೆಂದು ಪೊಲೀಸ್ ಮೂಲಗಳು ತಿಳಿಸಿವೆ. ಪೊಲೀಸರು ಸಹ ಭಕ್ತರ ವೇಶ ಧರಿಸಿ ಆರೋಪಿಯ ಚಲನ ವಲನಗಳನ್ನು ಗಮನಿಸಿ ಅವನನ್ನು ಬಂಧಿಸಿರುವುದು ಪೊಲೀಸರ ಚಾಕಚಕ್ಯತೆಯನ್ನು ಪ್ರತಿಬಿಂಬಿಸುತ್ತದೆ. ಇದಕ್ಕಾಗಿ ಅವರಿಗೆ ಪೊಲೀಸ್ ಇಲಾಖೆ ವಿಶೇಷ ನಗದು ಬಹುಮಾನ ರೂ 5,00,000 (ಐದು ಲಕ್ಷ ರೂಪಾಯಿಗಳು) ಘೋಷಿಸಿರುವುದು ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಇದು ಪೊಲೀಸರ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆಯಲ್ಲದೇ ಅವರ ಕಾರ್ಯಕ್ಷಮತೆಯನ್ನು ಸಹ ಹೆಚ್ಚಿಸಬಲ್ಲದು. ಇದಕ್ಕಾಗಿ ಆ ಪೊಲೀಸ್ ತಂಡಕ್ಕೆ ವಿಶೇಷ ಅಭಿನಂದನೆಗಳು. ಅಲ್ಲಿಂದ ಬೆಂಗಳೂರಿಗೆ ಕರೆತರುವಾಗ ಮಾರ್ಗಮಧ್ಯೆ ಕೆಂಗೇರಿ ಬಳಿ ಪೊಲೀಸರ ಮೇಲೆ ಹಲ್ಲೆ ನಡೆಸಿ, ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ, ಪೊಲೀಸರು ಹಾರಿಸಿದ ಗುಂಡಿನಿಂದ ಕಾಲಿಗೆ ಪೆಟ್ಟಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಗಾಗಿದ್ದಾನೆ ಎಂದು ಹೇಳಲಾಗಿದೆ.

ಈ ಕೃತ್ಯ ನಡೆದ ಬೆನ್ನಲ್ಲೇ ಮೈಸೂರಿನ ಯುವಕನೋರ್ವ ಸಹ ತಾನು ಪ್ರೀತಿಸುತ್ತಿದ್ದ ಯುವತಿಯೋರ್ವಳ ಮೇಲೆ ಆಸಿಡ್ ಹಾಕುವುದಾಗಿ ಬೆದರಿಕೆ ಒಡ್ಡಿರುವ ಸುದ್ದಿ ಮಾಧ್ಯಮಗಳಲ್ಲಿ ವರದಿಯಾಗಿದೆ. ಇಂತಹ ಕೃತ್ಯ ಎಸಗುವವರು ಸಾಮಾನ್ಯವಾಗಿ ಭಗ್ನ ಪ್ರೇಮಿಗಳು ಅಥವಾ ವಿಕೃತ ಪ್ರೇಮಿಗಳಾಗಿರುತ್ತಾರೆ. ಇಂತಹವರಿಂದ ಬಾಳಿ ಬದುಕಬೇಕಾದ ಎಷ್ಟೋ ಹೆಣ್ಣು ಮಕ್ಕಳ ಬದುಕು ದಾರುಣ ಅಂತ್ಯ ಕಾಣುತ್ತಿದೆ. ಮುಂಬಯಿ, ಬೆಂಗಳೂರು ಮುಂತಾದ ಮಹಾ ನಗರಗಳಲ್ಲಿ ಇಂತಹ ಕೃತ್ಯಗಳು ಹೆಚ್ಚಾಗಿ ನಡೆಯುತ್ತವೆ. ಇಂತಹ ಭೀಕರ ಆಸಿಡ್ ದಾಳಿಗೆ ತುತ್ತಾದ ಯುವತಿಯರ ಬದುಕು ಜೀವನ ಪರ್ಯಂತ ಯಾತನಾಮಯವಾಗಿರುತ್ತದೆ. ಕೆಲವು ಹೆಣ್ಣು ಮಕ್ಕಳು ಬದುಕಲೂ ಆಗದ, ಸಾಯಲೂ ಆಗದ ಸ್ಥಿತಿ ತಲುಪುತ್ತಾರೆ. ಇಂತಹವರನ್ನು ಕಠಿಣವಾದ ಶಿಕ್ಷೆಗೆ ಒಳಪಡಿಸಲು ವಿಶೇಷ ನ್ಯಾಯಾಲಯ ರಚಿಸಿ, ಆರೋಪಿಗಳಿಗೆ ಕ್ಷಿಪ್ರ ಅವಧಿಯಲ್ಲಿ ಶಿಕ್ಷೆ ವಿಧಿಸಬೇಕು. ಇವರ ಆಸ್ತಿಪಾಸ್ತಿಗಳನ್ನು ವಶಪಡಿಸಿಕೊಂಡು ಸಂತ್ರಸ್ತೆಯರಿಗೆ ಪುನರ್ವಸತಿ ಕಲ್ಪಿಸಲು ಉಪ ಯೋಗಿಸಿಕೊಳ್ಳಬೇಕು. ಅವರಿಗೆ ವಿಧಿಸುವ ಶಿಕ್ಷೆ ಇತರರಿಗೆ ಎಚ್ಚರಿಕೆಯ ಗಂಟೆಯಾಗಬೇಕು.

–ಡಾ.ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಅಡುಗೆ ಅನಿಲ ದುರ್ಘಟನೆಗೂ ವಿಮೆ ಪರಿಹಾರವಿದೆ

ಮಾನ್ಯರೆ,


ಭಾರತದಲ್ಲಿ ಅಡುಗೆ ಅನಿಲ ಗ್ರಾಹಕರ ಸಂಖ್ಯೆ 29.1 ಕೋಟಿಯಷ್ಟಿದೆ. ಅಡುಗೆ ಅನಿಲ ಬೆಲೆಯಲ್ಲಿ ವ್ಯತ್ಯಾಸವಾಗುವುದು ಭಾರತದಂತಹ ದೊಡ್ಡ ದೇಶದಲ್ಲಿ ಸಾಮಾನ್ಯ. ಇಷ್ಟು ದೊಡ್ಡ ಪ್ರಮಾಣದ ಜನಸಂಖ್ಯೆಗೆ ಅನಿಲ ಸಿಲಿಂಡರ್ ಪೂರೈಸುವುದು ಕಷ್ಟದ ಕೆಲಸವೇ ಸರಿ. ಇದು ಕೂಡ ಸರ್ಕಾರದ ಸಾಧನೆಯೆಂದರೆ ತಪ್ಪಾಗಲಾರದು.

ಪ್ರಸ್ತುತ ಅನಿಲ ಸಿಲಿಂಡರ್‌ನ ಬೆಲೆ 1000 ತಲುಪಿದ್ದು, ದೇಶದ ಬೇರೆ ಬೇರೆ ಭಾಗಗಳಲ್ಲಿ ಸರಕು ಸಾಗಾಣಿಕೆಯ ವೆಚ್ಚವೂ ಸೇರಿ ಬೆಲೆ ನಿಗದಿಯಾಗಿರುತ್ತದೆ.

ಕೇಂದ್ರ ಸರ್ಕಾರ 2016 ರಲ್ಲಿ ಪ್ರಧಾನಮಂತ್ರಿ ಉಜ್ವಲ ಯೋಜನೆಯನ್ನು ಜಾರಿಗೆ ತಂದು ಆರ್ಥಿಕವಾಗಿ ಹಿಂದುಳಿದ ಮತ್ತು ಬಡತನ ರೇಖೆಗಿಂತ ಕೆಳಗಿರುವ ಜನರಿಗೆ 14.2 ಕೆ.ಜಿ ಸಿಲಿಂಡರ್‌ಗೆ 1600 ರೂ ಮತ್ತು 5 ಕೆ.ಜಿ. ಸಿಲಿಂಡರ್‌ಗೆ 1150 ರೂಗಳ ಸಹಾಯಧನ ನೀಡಲಾಗುತ್ತದೆ. ಕೇಂದ್ರ ಸರ್ಕಾರದ ಮಾಹಿತಿಯ ಪ್ರಕಾರ ಈ ಯೋಜನೆಯಿಂದ 8 ಕೋಟಿ ಜನರಿಗೆ ಅನುಕೂಲವಾಗಿದೆ ಎಂದು ಹೇಳಲಾಗಿದೆ.

ಅಡುಗೆ ಅನಿಲ ಪೂರೈಕೆ ಕಂಪನಿಗಳಾದ ಭಾರತ್, ಹೆಚ್‌ಪಿ, ಇಂಡಿಯನ್ ಕಂಪನಿಗಳು ಅನಿಲ ದರದಲ್ಲಿ ಹೆಚ್ಚಾದರೆ ಒಂದು ರೂ ಕಡಿಮೆ ಮಾಡದೆ ಗ್ರಾಹಕರ ಬಳಿ ನಿಗದಿತ ದರವನ್ನು ಪಡೆಯುತ್ತವೆ. ಆದರೆ ಯಾವುದೇ ಅನಿಲ ಕಂಪನಿಗಳ ಅನಿಲ ದುರ್ಘಟನೆಗೆ ಒಳಗಾದ ಗ್ರಾಹಕರುಗಳಿಗೆ 40 ಲಕ್ಷದವರೆಗೂ ವಿಮೆಯ ರಕ್ಷಣೆ ಇರುತ್ತದೆ ಎಂದು ತಿಳಿಸುವ ಸಣ್ಣ ಪ್ರಯತ್ನ ಮಾಡದಿರುವುದು ದುರದೃಷ್ಟಕರವಾಗಿದೆ. ದೇಶದಲ್ಲಿ ಅಡುಗೆ ಅನಿಲ ದುರಂತಕ್ಕೆ ಬಲಿಯಾಗುವವರು ಹೆಚ್ಚು ಮಹಿಳೆಯರೇ ಆಗಿರುತ್ತಾರೆ. ಆದ್ದರಿಂದ ಈ ವಿಮೆಯ ಯೋಜನೆಯ ಬಗ್ಗೆ ಪ್ರಚಾರದ ಅಗತ್ಯವಿದ್ದು, ಸಾಮಾನ್ಯ ಜನರಿಗೆ ಈ ಮಾಹಿತಿಯ ಬಗ್ಗೆ ಅರಿವು ಮೂಡಿಸುವುದು ಅತ್ಯಗತ್ಯ. ಪ್ರಸ್ತುತ ಕೇಂದ್ರ ಸರ್ಕಾರ ಈ ಕುರಿತಾಗಿ ಕಾನೂನು ಜಾರಿಗೆ ತಂದರೆ ನೊಂದವರ ಬಡ ಕುಟುಂಬಕ್ಕೆ ಅನುಕೂಲವಾಗುತ್ತದೆ ಮತ್ತು ಈ ಹಿಂದೆ ನಡೆದಿರುವ ಅಡುಗೆ ಅನಿಲ ದುರಂತದಲ್ಲಿ ನೊಂದವರಿಗೂ ಪರಿಹಾರ ಸಿಗುವಂತಾಗಲಿ.

–ರಾ. ಸುಮ ಭಟ್, ಚಿಕ್ಕಮಗಳೂರು.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ದಕ್ಷಿಣೋತ್ತರ

(ದಕ್ಷಿಣ ಮತ್ತು ಉತ್ತರ ಅಮೆರಿಕಾ ಪ್ರವಾಸ ಕಥನ)

ಡಾ. ಬಿ.ಎಸ್.ಪ್ರಣತಾರ್ತಿಹರನ್ ನನ್ನಲ್ಲಿ ವಿಸ್ಮಯವನ್ನೂ, ಗೌರವವನ್ನೂ ಮೂಡಿಸಿರುವ ಲೇಖಕರು. ಅವರು ಕನ್ನಡದಲ್ಲಿ ಸೃಜಿಸಿರುವ ಸಾಹಿತ್ಯದ ಬೃಹತ್ ಪರಿಮಾಣವು ವಿಸ್ಮಯವನ್ನು ಹುಟ್ಟಿಸುತ್ತದೆ. ಒಬ್ಬ ವ್ಯಕ್ತಿ ಇಷ್ಟೊಂದು ಬರೆಯಲು ಸಮಯ ಎಲ್ಲಿ ಸಿಕ್ಕುತ್ತದೆ? ನಮಗೆ ಅದರಲ್ಲಿ ದಶಾಂಶ ಹೋಗಲಿ, ಶತಾಂಶವನ್ನೂ ಬರೆಯಲು ಅವಕಾಶವಾಗುವುದಿಲ್ಲವಲ್ಲಾ ಎಂಬ ಕೊರಗೂ ಮನಸ್ಸಿನಲ್ಲಿ ಹುಟ್ಟುತ್ತದೆ. ಅವರ ಬರಹಗಳ ವಸ್ತು ವೈವಿಧ್ಯ, ಅವರ ನಿಶಿತ ಸಂಶೋಧಕ ಮತಿಗಳನ್ನು ಅವಲೋಕಿಸಿದಾಗ ಅಮಲ್ಲಿ ಗೌರವ ತಾನಾಗಿ ಉಂಟಾಗುತ್ತದೆ. ಸಮುದಾಯಾಧ್ಯಯನದಲ್ಲಿ ಅವರಿಗೆ ಅಧಿಕವಾದ ಆಸಕ್ತಿ ಸಂಕೇತಿ ಸಮುದಾಯದ ಬಗೆಗೆ ಅವರು ಮಾಡಿರುವ ಗಂಭೀರ ಹುಡುಕಾಟ, ಅನ್ವೇಷಣೆ ಎಲ್ಲ ಸಂಶೋಧಕರಿಗೆ ಮಾದರಿಯಾಗಿದೆ. ಒಂದೊಂದು ವಿಷಯದಲ್ಲೂ ಅವರ ಆಸಕ್ತಿ, ಸೂಕ್ಷ್ಮೇಕ್ಷಿಕೆ ಹಳೆಯದರಲ್ಲೂ ಹೊಸತನ್ನು, ಹೊಸದರಲ್ಲೂ ಹಳೆಯ ಬೇರನ್ನು ಹುಡುಕುತ್ತದೆ. ಯಾವ ಕಾಣ್ಕೆಯನ್ನೂ ಯಾವ ಅನುಭವವನ್ನೂ ವ್ಯರ್ಥವಾಗಿ ಹೋಗಲು ಅವರು ಬಿಡುವುದಿಲ್ಲ. ಅದಕ್ಕೆ ಸಾಹಿತ್ಯದ ಸೊಬಗಿನ ಉಡುಪನ್ನು ತೊಡಿಸಿ ಓದುಗರ ಮುಂದಿಡುತ್ತಾರೆ. ಯಾವ ತೊಡಕೂ ಇಲ್ಲದ ಸರಳ ಸುಂದರ ಕನ್ನಡದ ನುಡಿ ಅವರಿಗೆ ಒಲಿದಿದೆ. ಅವರ ಪುಸ್ತಕಗಳನ್ನು ಓದಿದಾಗ ನಾವು ವಿಷಯಗಳನ್ನು ಅರಿತುಕೊಳ್ಳುವುದು ಮಾತ್ರವಲ್ಲ, ಭಾಷೆಯ ಪ್ರಯೋಗದ ಸೊಗಸನ್ನೂ ಕಲಿಯುತ್ತೇವೆ. ಹೀಗೆ ನಮಗೆ ದ್ವಿವಿಧ ಲಾಭ.

ದಕ್ಷಿಣೋತ್ತರ ಪ್ರಣತಾರ್ತಿಹರನ್ ಅವರು ನಮಗೆ ಕೊಟ್ಟಿರುವ ಐನೂರೈವತ್ತೆರಡು ಪುಟಗಳಷ್ಟು ದೀರ್ಘವಾದ ಪ್ರವಾಸ ಕಥನ. ಇದರಲ್ಲಿ ಅಮೆರಿಕೆಯ ಎರಡು ಖಂಡಗಳ ದೇಶಾಟನದ ಸ್ವಾರಸ್ಯಜನಕ ನಿರೂಪಣೆಯಿದೆ. ಉತ್ತರ ಅಮೆರಿಕೆಯು ಎಲ್ಲರಿಗೂ ಪರಿಚಿತವೇ. ಅದನ್ನು ಕುರಿತು ಏನನ್ನು ಹೇಳಲು ಹೊರಟರೂ ಜನರು 'ನಾವೂ ನೋಡಿದ್ದೇವೆ' ಎನ್ನುತ್ತಾರೆ. ಆದರೆ ದಕ್ಷಿಣ ಅಮೆರಿಕಾ ಅಷ್ಟು ಪರಿಚಿತವಲ್ಲ. ಅಲ್ಲಿ ತಿರುಗಾಡಿದ ಭಾರತೀಯರು ವಿರಳ. ಅಲ್ಲಿ ಸ್ಪ್ಯಾನಿಶ್ ಭಾಷೆಯ ಪ್ರಾಬಲ್ಯ. ಭೂಗೋಳದ ತರಗತಿಗಳಲ್ಲಿ ಅಧ್ಯಾಪಕರು ಎ.ಬಿ.ಸಿ. ರಾಜ್ಯಗಳೆಂದು ನಮಗೆ ಹೇಳುತ್ತಿದ್ದರು. ಅರ್ಜೆಂಟೈನಾ, ಬ್ರೆಸಿಲ್, ಚಿಲಿ ಇವೆಲ್ಲ ನಮಗೆ ಹೆಸರುಗಳು ಮಾತ್ರ. ಅಲ್ಲಿರುವ ಅಮೆಜಾನ್ ನದಿಯ ಬೃಹತ್ತ್ವದ ಬಗೆಗೆ ಮಾತ್ರ ನಾವು ಓದಿದ್ದೆವು.

ಪ್ರಣತಾರ್ತಿಹರನ್ 2017ರಲ್ಲಿ ಮಾಡಿದ ಪ್ರವಾಸದ ಕುತೂಹಲಜನಕ ಅಂಶಗಳನ್ನೆಲ್ಲ ಈ ಪುಸ್ತಕದಲ್ಲಿ ದಾಖಲಿಸಿದ್ದಾರೆ. ದಕ್ಷಿಣ ಅಮೆರಿಕದಲ್ಲಿ ಬಡತನ ತಾಂಡವವಾಡುತ್ತಿದೆ. ಆದ್ದರಿಂದ ಕಳ್ಳತನ ಅಲ್ಲಿ ಸಾಮಾನ್ಯ. ಹಿಂದೆ ನಮ್ಮ ದೇಶದ ರೈಲುಗಳಲ್ಲೂ 'ಕಳ್ಳರಿದ್ದಾರೆ ಜೋಕೆ', 'ದೊಂಗಲುನ್ನಾರು ಜಾಗ್ರತೆ' ಮುಂತಾದ ಸೂಚನೆಗಳಿದ್ದುವು. ಹಾಗೆ ಈ ಪುಸ್ತಕದ ಮೊದಲನೆಯ ಪುಟದಲ್ಲೇ ಓದುವುದು ಚೋರರ ನೈಪುಣ್ಯದ ಬಗೆಗೆ.

"ನಾವು ಆ ರಾತ್ರಿ ಬ್ಯೂನಸ್ ಐರಿಸ್‌ನಲ್ಲಿ ನೋಡಿದ ಟಾಂಗೋ ನೃತ್ಯವು ಕಲಾತ್ಮಕವಾಗಿತ್ತು. ದಕ್ಷಿಣ ಅಮೆರಿಕಾದಲ್ಲಿ ಕಳ್ಳರು, ಖದೀಮರು ತೋರುವ ಕೈಚಳಕವೂ ಪರಿಣತವಾದುದೇ. ಎಲ್ಲ ದೇಶಗಳಲ್ಲೂ ಶ್ರೀಮಂತ–ಬಡವ ಎಂಬ ವರ್ಗಗಳು ಇದ್ದೇ ಇವೆ. ದಕ್ಷಿಣ ಅಮೆರಿಕಾದಲ್ಲಿರುವ ಬಡತನದ ತೀವ್ರತೆ ಮತ್ತು ಬಡವರ ಸಂಖ್ಯಾಪ್ರಮಾಣವು ದೊಡ್ಡದೆಂಬುದಕ್ಕೆ ಆ ಕಳ್ಳತನಗಳ ಪ್ರಮಾಣ ಮತ್ತು ಚಾಕಚಕ್ಯತೆ ಒಂದು ನಿಚ್ಚಳ ನಿದರ್ಶನವಾಗಿತ್ತು."

ಭಾರತದಲ್ಲಿ ಕ್ರಿಕೆಟ್ ಆಟಗಾರರನ್ನು ಆರಾಧಿಸುವಂತೆ ದಕ್ಷಿಣ ಅಮೆರಿಕೆಯಲ್ಲಿ ಫುಟ್‌ಬಾಲ್ ಆಟಗಾರರನ್ನು ಅಕ್ಷರಶಃ ಜನರೆಲ್ಲ ಪೂಜಿಸುತ್ತಾರಂತೆ. ಅದರ ಬಗೆಗೆ ಲೇಖಕರು ಹೇಳಿದ್ದಾರೆ–"ಅನೇಕ ಕಡೆ ಸಿನಿಮಾ ನಟರ ದೊಡ್ಡ ಚಿತ್ರಗಳನ್ನು ಹಾಕಿ ಆರಾಧಿಸುವಂತೆ ಫುಟ್‌ಬಾಲ್ ವೀರರನ್ನು ಇಲ್ಲಿ ಆರಾಧಿಸುತ್ತಾರೆ. ಖ್ಯಾತ ಪಂದ್ಯಗಳ ಚೆಲುವಾದ ಚಿತ್ರ ಪ್ರದರ್ಶನಾಲಯವಿದೆ. ಸ್ಟೇಡಿಯಮ್ಮಿನ ನೋಟ ಮಾತ್ರವಲ್ಲ. ಅದರ ಸಂಕೀರ್ಣದಲ್ಲಿ ಆಟ ಮತ್ತು ಆಟಗಾರರಿಗೆ ಪೂರಕವಾಗಿ ಇರುವ ಸಜ್ಜಿಕೆಯೂ ನೋಡಬೇಕಾದುದೇ. ಇದನ್ನು ಪರಿಚಯಿಸಲು ಪಾಳಿಯಲ್ಲಿ (Shift) ಮಾರ್ಗದರ್ಶಕರು ಕೆಲಸ ಮಾಡುತ್ತಾರೆ. ಹಣ ಕೊಟ್ಟು ಇದನ್ನು ನೋಡಲು ಜನ ನುಗ್ಗುತ್ತಾರೆ. ನಾವು ಹೋಗಿದ್ದು ಒಂದು ಖ್ಯಾತ ಫುಟ್‌ಬಾಲ್ ಸ್ಟೇಡಿಯಮ್ಮಿಗೆ. ಅರ್ಜೆಂಟೈನಾದಲ್ಲಿ ಮುಖ್ಯವಾದ ಫುಟ್‌ಬಾಲ್ ಪಂದ್ಯ ನಡೆದರೆ ಇಡೀ ದೇಶ ಸ್ತಬ್ಧವಾಗುತ್ತದೆ. ರಸ್ತೆಗಳು ಬಂದ್ ಆಗುತ್ತವೆ. ಎಲ್ಲರೂ ಪಂದ್ಯವನ್ನು ನೇರವಾಗಿಯೋ ಟೀವಿಗಳಲ್ಲೋ ವೀಕ್ಷಿಸುವವರೇ." (ಪು.11).

ಇಂಕಾ ಸಂಸ್ಕೃತಿಯ ಬಗೆಗೆ ಪ್ರಣತಾರ್ತಿಹರನ್ ಅವರು ಅನೇಕ ಮಾಹಿತಿಗಳನ್ನು ಕೊಟ್ಟಿದ್ದಾರೆ. ಸೂರ್ಯ ಮತ್ತು ಚಂದ್ರರ ಚಲನೆಯನ್ನನುಸರಿಸಿ ಇಂಕಾ ಜನಗಳ ಧಾರ್ಮಿಕ ಆಚರಣೆಗಳು ನಡೆಯುತ್ತಿದ್ದುವಂತೆ. ಇಂಕಾ ದೇವಸ್ಥಾನಗಳು ಎಷ್ಟು ಸಂಪದ್ಭರಿತ ಎಂಬುದನ್ನು ಲೇಖಕರು ವರ್ಣಿಸಿದ್ದಾರೆ.

ಹುಸ್ಕೋದ **ಕೋರಿಕಾಂಚಾ** ಎಂಬುದು ಇಂಕಾಗಳ ಕಟ್ಟಡಗಳಲ್ಲೆಲ್ಲಾ ಅದ್ಭುತವಾದುದಾಗಿತ್ತು. ಅದರಲ್ಲಿ ಪ್ರಧಾನವಾಗಿ ಇದ್ದುದು **ಸೂರ್ಯ ದೇವಸ್ಥಾನ**. ಸೂರ್ಯ ದೇವಾಲಯದ ಗೋಡೆಗಳಿಗೆ ನೂರುಗಟ್ಟಲೆ ಚಿನ್ನದ ತಗಡುಗಳನ್ನು ಮೆಟ್ಟಲಾಗಿತ್ತು. ಸೂರ್ಯನ ಬಿಸಿಲು ಬೀಳುವ ಜಾಗಕ್ಕೆ ಅತಿ ಶುದ್ಧವಾದ ಚಿನ್ನದ ತಗಡುಗಳನ್ನು ಮೆಟ್ಟಲಾಗಿರುತ್ತಿತ್ತು. ಅವೆಲ್ಲ ಎರಡು ಅಡಿ ಉದ್ದದ ತಗಡುಗಳು. ಒಂದೊಂದೂ ಎರಡು ಕೆ.ಜಿ. ಭಾರವಾಗಿದ್ದುವು. ಆ ದೇವಸ್ಥಾನದಲ್ಲಿ ಚಿನ್ನದ ಪಂಚಾವೋ, ಚಿನ್ನದ ಪೀಠ, ಚಿನ್ನದ ಚಿಲುಮೆ ಇತ್ತು. ಸೂರ್ಯ ದೇವಸ್ಥಾನದ ಆವರಣದಲ್ಲಿ ಒಂದು ಚಿನ್ನದ ಉದ್ಯಾನವಿತ್ತು. ಅದರ ನೆಲವು ಚಿನ್ನದ ಹೆಂಟೆಗಳಿಂದ ಕೂಡಿತ್ತು. ಮುಸುಕಿನ ಜೋಳದ ಚಿನ್ನದ ಬೆಳೆ, 20 ಚಿನ್ನದ ಕುರಿಗಳು, ಕುರುಬರು, ಅವರು ಹಿಡಿದ ದೊಣ್ಣೆ ಎಲ್ಲವೂ ಸುವರ್ಣದ ಗಟ್ಟಿಗಳೇ. ಪಕ್ಕದಲ್ಲಿ ಬೆಳ್ಳಿಯಿಂದಾವೃತವಾದ ಚಂದ್ರ ದೇವಸ್ಥಾನವಿತ್ತು. ವೃಷಭ ಆಕೃತಿಯ ನಕ್ಷತ್ರ ಪುಂಜವಿದ್ದ ಗುಡಿ ಕೂಡ ಬೆಳ್ಳಿಯಿಂದ ತುಂಬಿತ್ತು. ಈ ನಕ್ಷತ್ರ ಪುಂಜ ಚಂದ್ರನಿಗೆ ಸಂಬಂಧಿಸಿದ್ದೆಂದು ಇಂಕಾಗಳ ನಂಬಿಕೆ. ಈ ಸಮಸ್ತ ಸಂಪತ್ತನ್ನೂ ಸ್ಪ್ಯಾನಿಷರು ಕೊಳ್ಳೆ ಹೊಡೆದು ಸಾಗಿಸಿ ಸರ್ವನಾಶ ಮಾಡಿಬಿಟ್ಟರು. ದೇಶಾದ್ಯಂತ ಇಂಥ ದೇವಸ್ಥಾನಗಳಿದ್ದು, ಇಂಕಾಗಳ ಕಲ್ಲಿನ ರಚನೆಗಳ ಉತ್ತಮ ಮಾದರಿಗಳಾಗಿದ್ದುವು" (ಪು.67).

ಸ್ಪ್ಯಾನಿಶ್ ಜನರು ಇಂಕಾಗಳನ್ನೂ, ಇತರ ಮೂಲ ನಿವಾಸಿಗಳನ್ನೂ ಹಿಂಸಿಸಿ ಕೊಂದು ಹಾಕಿದ್ದನ್ನೂ ಆಫ್ರಿಕಾದಿಂದ ಕಪ್ಪು ಜನರನ್ನು ಹಿಡಿದು ತಂದು ಗುಲಾಮರನ್ನಾಗಿ ಮಾಡಿ ಮಾರಿದ್ದನ್ನೂ ಓದುವಾಗ ಮನಸ್ಸಿಗೆ ನೋವಾಗುತ್ತದೆ.

ಆದರೆ ಆ ದೇಶದಲ್ಲಿರುವ ಸ್ವಚ್ಛತೆಯ ಬಗೆಗೆ, ಜನರ ಅರಿವಿನ ಬಗೆಗೆ ಮೆಚ್ಚುಗೆಯನ್ನೂ ಪ್ರಣತಾರ್ತಿ ಹರನ್ ವ್ಯಕ್ತಪಡಿಸುತ್ತಾರೆ. ಭಾರತದ ಜನರಿಗೂ ಸ್ವಚ್ಛತಾ ಪ್ರಜ್ಞೆ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂಬ ಭಾವನೆಯನ್ನೂ ಅವರು ಹೊರಗೆ ಹಾಕಿದ್ದಾರೆ. ಕತಾರ್ ಎಂಬ ದೇಶವನ್ನು ನೋಡಿದಾಗ ಅವರು ಹೇಳುವ ಮಾತು–

"ಬೆಳಗ್ಗೆ ಸುತ್ತಾಡುವಾಗ ಅವರ ರಸ್ತೆ, ಉದ್ಯಾನ ಮತ್ತು ಕಟ್ಟಡಗಳನ್ನು ಮಾತ್ರವಲ್ಲ. ಸಮುದ್ರ ತೀರವನ್ನೂ ಸಿಂಗರಿಸಿದ ಅವರ ಅಭಿರುಚಿಗೆ ಮರುಳಾಗಿ ಹೋಗಿದ್ದೆವು. ಅಂಥ ಸೊಗಸು, ಅಂಥ ವಿನ್ಯಾಸ, ಅಂಥ ಶುಭ್ರತೆ, ಅಂಥ ವೈಭವ, ಅಂಥ ಕನಸು." (ಪು.157).

ಉತ್ತರ ಅಮೇರಿಕೆಯಲ್ಲಿ ಗ್ರಂಥಾಲಯಗಳ ಸಮೃದ್ಧಿಯನ್ನೂ, ವೈಭವವನ್ನೂ ಮೆಚ್ಚಿ ಲೇಖಕರು ಬರೆದಿದ್ದಾರೆ. Frontiers of Space ಎಂಬ ಪುಸ್ತಕವನ್ನು ಮೊಮ್ಮಕ್ಕಳಿಗೆ ಓದಿ ಹೇಳಿದ್ದನ್ನೂ ವಿವರಿಸಿದ್ದಾರೆ. ಸಿಸ್ಟರ್ಸ್ ಅಂಡ್ ಬ್ರದರ್ಸ್ ಎಂಬ ಪುಸ್ತಕ ಪ್ರಕೃತಿಯ ಎಂಥ ಅದ್ಭುತಗಳನ್ನು ಚಿತ್ರಿಸಿದೆ ಎಂಬುದನ್ನು ತಿಳಿಸಿದ್ದಾರೆ. ಅಲ್ಲಿ ಸ್ವಲ್ಪ ಭಾಗವನ್ನು ಉಲ್ಲೇಖಿಸುವುದು ಆವಶ್ಯಕವೆನಿಸುತ್ತದೆ.

"ನ್ಯೂ ಮೆಕ್ಸಿಕೋ ವ್ಹಿಪ್‌ಟೈಲ್ ಅಜಾರ್ಡ್‌ಗಳಿಗೆ ಇರುವುದು ಸೋದರಿಯರು ಮಾತ್ರ ಸೋದರರಿಲ್ಲ. ಏಕೆಂದರೆ ಗಂಡು ವ್ಹಿಪ್‌ಟೈಲ್‌ಗಳೇ ಅಸ್ತಿತ್ವದಲ್ಲಿಲ್ಲ. ವ್ಹಿಪ್‌ಟೈಲ್ ಸಮೂಹದ ಎಲ್ಲ ಸೋದರಿಯರೂ ಸಮಾನ ಲಕ್ಷಣದವು. ಮಾತ್ರವಲ್ಲ. ಅವುಗಳ ತಾಯಿ, ಅಜ್ಜಿ, ಅವುಗಳ ಸಮಸ್ತ ಸ್ತ್ರೀ ಪೂರ್ವಿಕರ ತದ್ವತ್ತಾಗಿಯೇ ಅವು ಇರುವುದು. ಮಕ್ಕಳನ್ನು ಹೆರಲು ಅವಕ್ಕೆ ಗಂಡೊಂದು ಬೇಕಿಲ್ಲ. ಎಷ್ಟೋ ಸಸ್ಯಗಳು ಹೀಗೆ ಮಾಡುತ್ತವೆ. ಆದರೆ ಪ್ರಾಣಿಗಳಲ್ಲಿ ಇದು ಅಪರೂಪ. ಗಂಡಿನ ಸಹಾಯವಿಲ್ಲದೆ ಮಕ್ಕಳನ್ನು ಹೆರುವುದರಲ್ಲಿ ಕೆಲವು ಲಾಭಗಳಿವೆ. ಗಂಡಿನ ಹುಡುಕಾಟಕ್ಕಾಗಿ ಅವು ಸಮಯ ದಂಡ ಮಾಡಬೇಕಾಗಿಲ್ಲ, ಶ್ರಮ ಪಡಬೇಕಾಗಿಲ್ಲ. ಆದರೆ ಅಪಾಯವೂ ಹಾಗೇ ಇದೆ. ಒಂದಕ್ಕೆ ಮರಣಾಂತಿಕ ಖಾಯಿಲೆ ಬಂದರೆ ಅಥವಾ ಪರಿಸರದ ವ್ಯತ್ಯಾಸವಾದರೆ ಆ ಇಡೀ ಕುಟುಂಬವೇ ನಾಶವಾಗುತ್ತೆ". (ಪು.227)

ಅಮೆರಿಕಾದ ಮೂಲನಿವಾಸಿಗಳ ಬಗೆಗೆ ಈ ಪುಸ್ತಕದಲ್ಲಿ ಪ್ರಣತಾರ್ತಿಹರನ್ ಕೊಡುವ ಮಾಹಿತಿಯೂ ಅಮೂಲ್ಯವಾಗಿದೆ. ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್‌ನ I have a dream ಎಂಬ ಪದ್ಯವನ್ನೂ ಅವರು ಚಂದ ಅಂದಗಳಿಂದ ಕನ್ನಡಿಸಿದ್ದಾರೆ. ಸ್ವಾತಂತ್ರ್ಯಪ್ರಿಯರೂ ಹೊಸ ಚಿಂತನೆಯನ್ನು ಇಷ್ಟಪಡುವವರೂ ಅದನ್ನು ಅವಶ್ಯವಾಗಿ ಓದಬೇಕು. ಹೀಗೆ ಹೇಳುತ್ತಾ ಹೋದರೆ ಈ ಪುಸ್ತಕದಲ್ಲಿ ಓದಲೇಬೇಕಾದ ಹತ್ತಾರು ವಿಷಯಗಳಿವೆ.

ಲೇಖಕರು ಪ್ರತ್ಯಕ್ಷಾನುಭವದ ಗಟ್ಟಿಯಾದ ನೆಲೆಯಿಂದ, ಗಹನ ಚಿಂತನೆಯಿಂದ, ಅಧ್ಯಯನದ ಬಲದಿಂದ, ಲೇಖನದ ಕಲೆಯಿಂದ ಗ್ರಂಥವನ್ನು ರಚಿಸಿದ್ದಾರೆಂಬುದು ಪ್ರತಿಯೊಂದು ಪುಟದಲ್ಲೂ ಎದ್ದು ತೋರುತ್ತದೆ.

ಇನ್ನೊಂದು ಅಂಶವನ್ನಿಲ್ಲಿ ಹೇಳಬೇಕು. 2022ರ ಚಿದಾನಂದ ಪ್ರಶಸ್ತಿ ಡಾ. ಬಿ.ಎಸ್. ಪ್ರಣತಾರ್ತಿಹರನ್ ಅವರನ್ನು ಅಲಂಕರಿಸಿದೆ. ಅವರಿಗೆ ನನ್ನ ಹಾರ್ದ ಅಭಿನಂದನೆಗಳು. ಕನ್ನಡಿಗರು **ದಕ್ಷಿಣೋತ್ತರವನ್ನು** ಓದಿ ಮನೋವಿಕಾಸವನ್ನು ಪಡೆಯಲೆಂದು ಆಶಿಸುತ್ತೇನೆ.

ಬೆಂಗಳೂರಲ್ಲಿ ಭಾರೀ ಮಳೆ



ಬೆಂಗಳೂರು, ಮೇ 17– ಬೆಂಗಳೂರು ಮಹಾನಗರದ ಹಲವೆಡೆ ಮಂಗಳವಾರ ಸಂಜೆಯಿಂದ ಧಾರಾಕಾರ ಮಳೆ ಸುರಿದಿದ್ದು, ಜನಜೀವನ ಮತ್ತು ವಾಹನ ಸಂಚಾರ ಅಸ್ತವ್ಯಸ್ತಗೊಂಡಿದೆ.

ಮೆಜೆಸ್ಟಿಕ್, ಕಾರ್ಪೊರೇಷನ್, ಶಾಂತಿನಗರ, ಚಾಮರಾಜಪೇಟೆ, ಕೋರಮಂಗಲ, ಬಿಟಿಎಂ ಲೇಔಟ್, ಹೆಚ್‌ಎಸ್‌ಆರ್ ಲೇಔಟ್, ಜಯನಗರ, ಜೆ.ಪಿ.ನಗರ, ವಿಜಯನಗರ, ರಾಜಾಜಿನಗರ, ಬಸವೇಶ್ವರನಗರ, ಸದಾಶಿವನಗರ, ಮಲ್ಲೇಶ್ವರಂ, ಪೀಣ್ಯ, ಜಾಲಹಳ್ಳಿ, ಸುಂಕದಕಟ್ಟೆ, ಗೊರಗುಂಟೆಪಾಳ್ಯ ಸೇರಿದಂತೆ ಬೆಂಗಳೂರಿನ ಹಲವೆಡೆ ಮಳೆ ಅಬ್ಬರಿಸಿದೆ.

ಮಳೆ ನೀರು ಮಂಡಿ ಎತ್ತರಕ್ಕೆ ಹರಿಯುತ್ತಿದ್ದು, ರಸ್ತೆಗಳು ನದಿಯಂತಾಗಿದೆ. ಕೆಲವೆಡೆ ಕಾರು, ಬೈಕುಗಳು ಮುಂದೆ ಹೋಗದೆ ನಿಂತಲ್ಲೇ ನಿಂತರೆ, ಇನ್ನು ಕೆಲವೆಡೆ ಕಾರು, ಬೈಕುಗಳು ಕೊಚ್ಚಿಕೊಂಡು ಹೋಗಿವೆ. ಹಲವಾರು ಕಡೆ ವಾಹನಗಳು ಕುಸಿದ ರಸ್ತೆ ಗುಂಡಿಗಳಲ್ಲಿ ಸಿಲುಕಿವೆ. ಬೆಂಗಳೂರಲ್ಲಿ ಮಳೆ ನೀರು ಸರಾಗವಾಗಿ ಹರಿದುಹೋಗಲು ವ್ಯವಸ್ಥೆ ಮಾಡದೆ ಇರುವುದೇ ಇದಕ್ಕೆ ಕಾರಣ ಎಂದು ಹೇಳಲಾಗುತ್ತಿದೆ.

ಬೆಂಗಳೂರಿನ ಕೆಲವೆಡೆ ಮನೆಗಳಿಗೆ ನೀರು ನುಗ್ಗಿದೆ. ಕೆಲವು ಮನೆಗಳ ಸುತ್ತ ಮತ್ತು ಒಳಗೆ ನೀರು ನಿಂತು ಜನರು ಪರದಾಡುವಂತಾಗಿದೆ. ರಾತ್ರಿಯಲ್ಲಿ ನಿದ್ದೆಗೆಟ್ಟು ನೀರು ಹಾಕುವ ಕೆಲಸದಲ್ಲಿ ನಿವಾಸಿಗಳು ನಿರತರಾಗಿದ್ದರು.

ಮುಂಗಾರು ಆರಂಭಕ್ಕೆ ಇನ್ನೂ 2 ವಾರ ಬಾಕಿ ಇರುವಾಗಲೇ, ವರುಣರಾಯನ ಪ್ರತಾಪ ಶುರುವಾಗಿದೆ. ನಿರಂತರ ಮಳೆಗೆ ಬೆಂಗಳೂರು ಅಷ್ಟೇ ಅಲ್ಲದೆ ರಾಜ್ಯದ ಅನೇಕ ಕಡೆಗಳಲ್ಲಿ ಅವಾಂತರ ಸೃಷ್ಟಿಯಾಗಿದೆ. ಮಂಡ್ಯದಲ್ಲಿ ಸತತ 2 ಗಂಟೆಯಿಂದ ಮಳೆ ಸುರಿಯುತ್ತಿದ್ದು ಮಂಡ್ಯ, ನಾಗಮಂಗಲ, ಕೆ.ಆರ್ ಪೇಟೆ, ಮದ್ದೂರು, ಸುತ್ತಮುತ್ತ ಭಾರೀ ಮಳೆಗೆ ಜನರು ಪರದಾಡುವಂತಾಗಿದೆ. ಧಾರವಾಡದಲ್ಲಿ ಮಳೆಯಿಂದ ಜ್ಯುಬಿಲಿ ಸರ್ಕಲ್ ಹೊಂಡದಂತಾಗಿದೆ. ಕಾಲುವೆಗಳು ತುಂಬಿ ಮಳೆ ನೀರೆಲ್ಲ ಮನೆಗಳತ್ತ ನುಗ್ಗಿವೆ. ಜನರೆಲ್ಲ ಅಧಿಕಾರಿಗಳಿಗೆ ಹಿಡಿಶಾಪ ಹಾಕ್ತಿದ್ದಾರೆ.

ಮುಂದಿನ 5 ದಿನ ರಾಜ್ಯಾದ್ಯಂತ ವ್ಯಾಪಕ ಮಳೆ: ಅರಬ್ಬಿಸಮುದ್ರದಲ್ಲಿ ಚಂಡಮಾರುತ ಎದ್ದಿದ್ದು, ಮುಂದಿನ ಐದು ದಿನ ರಾಜ್ಯಾದ್ಯಂತ ಮಳೆಯಾಗುವ ಸಾಧ್ಯತೆ ಇದೆ. ಉತ್ತರ ಕರ್ನಾಟಕ, ದಕ್ಷಿಣದ ಜಿಲ್ಲೆಗಳು ಮತ್ತು ಕರಾವಳಿ ಭಾಗದಲ್ಲಿ ವ್ಯಾಪಕ ಮಳೆಯಾಗುವ ಸಂಭವವಿದೆ ಎಂದು ಹವಾಮಾನ ತಜ್ಞರು ತಿಳಿಸಿದ್ದಾರೆ.

ಚೀನಾ ಪ್ರಜೆಗಳಿಗೆ ವೀಸಾ ಪಡೆಯುವಲ್ಲಿ ನೆರವು ನೀಡಿ ಹಣ ಪಡೆದ ಆರೋಪ

ಕಾರ್ತಿ ಚಿದಂಬರಂ ವಿರುದ್ಧ ಸಿಬಿಐ ಕೇಸು

ನವದೆಹಲಿ, ಮೇ 17– ಲೋಕಸಭಾ ಸದಸ್ಯ ಮಾಜಿ ಕೇಂದ್ರ ಸಚಿವ ಪಿ ಚಿದಂಬರಂ ಪುತ್ರ ಕಾರ್ತಿ ಚಿದಂಬರಂ ವಿರುದ್ಧ ಸಿಬಿಐ ಹೊಸ ಕೇಸು ದಾಖಲಿಸಿದೆ. 50 ಲಕ್ಷ ರೂಪಾಯಿ ಅಕ್ರಮ ಹಣ ಪಡೆದು 250 ಚೀನೀ ಪ್ರಜೆಗಳಿಗೆ ವೀಸಾಕ್ಕೆ ಅನುಕೂಲ ಮಾಡಿಕೊಟ್ಟ ಆರೋಪ ಎದುರಾಗಿದೆ.



ಪಿ.ಚಿದಂಬಬರಂ ಮತ್ತು ಕಾರ್ತಿ ಚಿದಂಬರಂ ವಿರುದ್ಧ ಹೊಸ ಕೇಸುಗಳಲ್ಲಿ ಸಿಬಿಐ ಇಂದು ಬೆಳಗ್ಗೆ ದೇಶದ ಏಳು ನಗರಗಳಲ್ಲಿ ಈ ಇಬ್ಬರು ನಾಯಕರಿಗೆ ಸೇರಿದ ನಿವಾಸ ಹಾಗೂ ಕಚೇರಿಗಳ ಮೇಲೆ ದಾಳಿ ನಡೆಸಿದೆ. ಚೆನ್ನೈನಲ್ಲಿರುವ ಚಿದಂಬರಂ ನಿವಾಸ, ಮುಂಬೈಯ ಮೂರು ಕಡೆಗಳಲ್ಲಿ, ಕರ್ನಾಟಕ, ಪಂಜಾಬ್ ಮತ್ತು ಒಡಿಶಾಗಳಲ್ಲಿ ಸಹ ದಾಳಿ ನಡೆಸಲಾಗಿದೆ. ಚೆನ್ನೈನ ಲೋಧಿ ಎಸ್ಟೇಟ್‌ನಲ್ಲಿರುವ ಕಾರ್ತಿ ಚಿದಂಬರಂ ಮತ್ತು ರಾಜ್ಯಸಭಾ ಸಂಸದ ಪಿ ಚಿದಂಬರಂ ಅವರ ಅಧಿಕೃತ ನಿವಾಸಕ್ಕೂ ಸಿಬಿಐ ತಂಡ ಭೇಟಿ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿಬಿಐ ದಾಳಿಯ ಸುದ್ದಿ ಹೊರಬರುತ್ತಿದ್ದಂತೆ ಟ್ವೀಟ್ ಮಾಡಿರುವ ಕಾರ್ತಿ ಚಿದಂಬರಂ, ಎಷ್ಟು ಸಲ ಎಂದು ಲೆಕ್ಕ ತಪ್ಪಿಹೋಗಿದೆ, ಇದು ದಾಖಲೆಯಾಗಬೇಕು ಎಂದು ಸಿಬಿಐ ದಾಳಿಯ ಬಗ್ಗೆ ಸೂಚಿಸದೆ ಟ್ವೀಟ್ ಮಾಡಿದ್ದಾರೆ.

ಐಎನ್‌ಎಕ್ಸ್ ಮೀಡಿಯಾ ಪ್ರಕರಣಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ತನಿಖೆಯಲ್ಲಿ ಸಿಬಿಐಗೆ ಪ್ರಕರಣದ ಸುಳಿವು ಸಿಕ್ಕಿದೆ, ಇದರಲ್ಲಿ ಕಾರ್ತಿ ಚಿದಂಬರಂ ಈಗಾಗಲೇ ಐಎನ್‌ಎಕ್ಸ್ ಮೀಡಿಯಾಕ್ಕೆ ವಿದೇಶಿ ಹೂಡಿಕೆ ಪ್ರಚಾರ ಮಂಡಳಿ (ಎಫ್‌ಐಪಿಬಿ) ಕ್ಲಿಯರೆನ್ಸ್ ಪಡೆಯುವಲ್ಲಿ ತನಿಖೆ ನಡೆಸುತ್ತಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ. ವಹಿವಾಟಿನ ಪರಿಶೀಲನೆಯ ನಂತರ, ಪ್ಲಾಂಟ್‌ನಲ್ಲಿ ಕೆಲಸ ಮಾಡಬೇಕಿದ್ದ ಚೀನಾದ ಕಾರ್ಮಿಕರ ವೀಸಾವನ್ನು ಸುಗಮಗೊಳಿಸುವುದಕ್ಕಾಗಿ 50 ಲಕ್ಷ ರೂಪಾಯಿ ಮೌಲ್ಯದ ಪಾವತಿಯನ್ನು ಸಿಬಿಐ ಪತ್ತೆಹಚ್ಚಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ನೂತನ ಪೊಲೀಸ್ ಆಯುಕ್ತ ಸಿ.ಹೆಚ್.ಪ್ರತಾಪ್ ರೆಡ್ಡಿ ಅಧಿಕಾರ ಸ್ವೀಕಾರ



ಬೆಂಗಳೂರು ನಗರ ನೂತನ ಪೊಲೀಸ್ ಆಯುಕ್ತ ಸಿ.ಹೆಚ್. ಪ್ರತಾಪ್‌ರೆಡ್ಡಿ (ಎಡಗಡೆ) ನಿರ್ಗಮಿತ ಆಯುಕ್ತ ಕಮಲ್‌ಪಂತ್ ಅವರಿಂದ ಅಧಿಕಾರ ವಹಿಸಿಕೊಂಡರು.

ಬೆಂಗಳೂರು, ಮೇ 17– ಬೆಂಗಳೂರು ನಗರದ ನೂತನ ಪೊಲೀಸ್ ಆಯುಕ್ತರಾಗಿ ಸಿ.ಹೆಚ್. ಪ್ರತಾಪ್ ರೆಡ್ಡಿ ಅವರಿಂದು ಅಧಿಕಾರ ವಹಿಸಿಕೊಂಡರು. ಪೊಲೀಸ್ ಆಯುಕ್ತರ ಕಚೇರಿಯಲ್ಲಿ ನಿರ್ಗಮಿತ ಕಮೀಷನರ್ ಕಮಲ್ ಪಂತ್ ಅವರು ಪ್ರತಾಪ್ ರೆಡ್ಡಿ ಅವರಿಗೆ ಬ್ಯಾಟನ್ ಹಸ್ತಾಂತರಿಸಿದರು.

ರಾಜ್ಯ ಸರ್ಕಾರ ಸೋಮವಾರ ಬೆಂಗಳೂರು ನಗರ ಪೊಲೀಸ್ ಆಯುಕ್ತ ಕಮಲ್ ಪಂತ್ ಸೇರಿದಂತೆ ಹಲವು ಐಪಿಎಸ್ ಅಧಿಕಾರಿಗಳನ್ನು ಎತ್ತಂಗಡಿ ಮಾಡಿ, ನೂತನ ನಗರ ಪೊಲೀಸ್ ಆಯುಕ್ತರಾಗಿ ಆಗಿ ಪ್ರತಾಪ್ ರೆಡ್ಡಿ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಿತ್ತು. ಕಮಲ್ ಪಂತ್ ಅವರನ್ನು ಪೊಲೀಸ್ ತರಬೇತಿ ವಿಭಾಗದ ಡಿಜಿಪಿ ಆಗಿ ವರ್ಗಾವಣೆ ಮಾಡಲಾಗಿದೆ. ಕಾನೂನು ಸುವ್ಯವಸ್ಥೆ ಎಡಿಜಿಪಿಯಾಗಿ ಕರ್ತವ್ಯ ನಿರ್ವಹಿಸಿರುವ ಸಿ.ಹೆಚ್. ಪ್ರತಾಪ್ ರೆಡ್ಡಿ ಅವರು ಪೊಲೀಸ್ ಇಲಾಖೆಯಲ್ಲಿ ಸಾಕಷ್ಟು ಹೆಸರು ಮಾಡಿದ್ದು, ನೂತನ ಪೊಲೀಸ್ ಆಯುಕ್ತರಾಗಿ ಯಾವ ರೀತಿ ಕಾರ್ಯ ನಿರ್ವಹಿಸುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

ಜ್ಞಾನವಾಪಿಯಲ್ಲಿ ಮುಸ್ಲಿಮರು ನಮಾಜ್ ಮಾಡಬಹುದು

ಶಿವಲಿಂಗವಿರುವ ಪ್ರದೇಶ ರಕ್ಷಣೆಗೆ ಸುಪ್ರೀಂ ಆದೇಶ

ನವದೆಹಲಿ, ಮೇ 17– ಜ್ಞಾನವಾಪಿ ಸಮೀಕ್ಷೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ವಾರಣಾಸಿ ಮ್ಯಾಜಿಸ್ಟ್ರೇಟ್‌ಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದ್ದು, ಮಸೀದಿಯ ಆವರಣದಲ್ಲಿ ಸಮೀಕ್ಷೆಯ ವೇಳೆ ಪತ್ತೆಯಾಗಿರುವ ಶಿವಲಿಂಗವನ್ನು ರಕ್ಷಿಸಬೇಕು ಎಂದು ಹೇಳಿದೆ.

ಜ್ಞಾನವಾಪಿ ಮಸೀದಿಯಲ್ಲಿ ಮುಸ್ಲಿಮರು ನಮಾಜ್ ಸಲ್ಲಿಸಬಹುದು ಎಂದು ಕೋರ್ಟ್ ಹೇಳಿದ್ದು, ಸಿವಿಲ್ ನ್ಯಾಯಾಧೀಶರ ಹಂತದಲ್ಲಿರುವ ಉಳಿದ ಪ್ರಕ್ರಿಯೆಗಳಿಗೆ ತಡೆ ನೀಡುವುದಕ್ಕೆ ಸುಪ್ರೀಂಕೋರ್ಟ್ ನಿರಾಕರಿಸಿದೆ. ವಾರಣಾಸಿಯ ಸಿವಿಲ್ ನ್ಯಾಯಾಧೀಶರು ಜ್ಞಾನವಾಪಿ ಮಸೀದಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆ ನಡೆಸುತ್ತಿದ್ದಾರೆ. ವಿಡಿಯೋಗ್ರಫಿ ನಡೆಸಲು ಕೋರಿ ಅರ್ಜಿ ಸಲ್ಲಿಸಿದ್ದ ಹಿಂದೂ ಭಕ್ತಾದಿಗಳಿಗೆ ಸುಪ್ರೀಂಕೋರ್ಟ್ ನೋಟೀಸ್ ಜಾರಿಗೊಳಿಸಿದ್ದು, ಮಸೀದಿ ಸಮಿತಿಯ ಅರ್ಜಿಯ ವಿಚಾರಣೆಯನ್ನು ಮೇ.19ಕ್ಕೆ ಮುಂದೂಡಿದೆ.

ಈ ದಶಕದ ಅಂತ್ಯದ ವೇಳೆಗೆ 6ಜಿ ಸೇವೆ ಆರಂಭ

ನವದೆಹಲಿ, ಮೇ 17– ಭಾರತದಲ್ಲಿ ಟೆಲಿಡೆನ್ಸಿಟಿ ಮತ್ತು ಇಂಟರ್ನೆಟ್ ಬಳಕೆಯನ್ನು ವೇಗವಾಗಿ ವಿಸ್ತರಿಸಲಾಗುತ್ತಿದೆ. 21ನೇ ಶತಮಾನದಲ್ಲಿ ಈ ಸಂಪರ್ಕವು ದೇಶದ ಪ್ರಗತಿಯನ್ನು ನಿರ್ಧರಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಹೇಳಿದ್ದಾರೆ.



ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರದ(ಟ್ರಾಯ್) ಬೆಳ್ಳಿಹಬ್ಬದ ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡು ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, 5ಜಿ ನಮ್ಮ ಆರ್ಥಿಕತೆಗೆ $450 ಶತಕೋಟಿ ಕೊಡುಗೆ ನೀಡಲಿದೆ. ಇದು ಇಂಟರ್ನೆಟ್ ವೇಗವನ್ನು ಮಾತ್ರವಲ್ಲದೆ ಅಭಿವೃದ್ಧಿಯನ್ನೂ ಹೆಚ್ಚಿಸುತ್ತದೆ. ಈ ದಶಕದ ಅಂತ್ಯದ ವೇಳೆಗೆ, ನಾವು 6G ಸೇವೆಗಳನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆ ಮತ್ತು ನಮ್ಮ ಕಾರ್ಯಪಡೆಯು ಅದರ ಮೇಲೆ ಕಾರ್ಯನಿರ್ವಹಿಸಲು ಪ್ರಾರಂಭಿಸಿದೆ ಎಂದು ಹೇಳಿದರು. 2ಜಿ ಯುಗವು ನೀತಿ ಪೀಡಿತ, ಭ್ರಷ್ಟಾಚಾರದ ಸಂಕೇತವಾಗಿದೆ. ರಾಷ್ಟ್ರವು ಪಾರದರ್ಶಕವಾಗಿ 4ಜಿ ಮತ್ತು ಈಗ 5ಜಿಯತ್ತ ಸಾಗಿದೆ. ಭಾರತದಲ್ಲಿ ಈ ಮೊದಲು ಎರಡು ಇದ್ದ ಮೊಬೈಲ್ ಉತ್ಪಾದನಾ ಘಟಕಗಳು ಈಗ 200ಕ್ಕೆ ವಿಸ್ತರಿಸಿದೆ. ಭಾರತ ಇಂದು ವಿಶ್ವದ ಅತಿದೊಡ್ಡ ಮೊಬೈಲ್ ಉತ್ಪಾದನಾ ಕೇಂದ್ರವಾಗಿದೆ. ಭಾರತವು ಆರೋಗ್ಯಕರ ಸ್ಪರ್ಧೆಯನ್ನು ಪ್ರೋತ್ಸಾಹಿಸಿದೆ ಎಂದರು.

ಜ್ಞಾನವಾಪಿ ಮಸೀದಿ ಪ್ರಕರಣ

ಅಡ್ವೋಕೇಟ್ ಕಮಿಷನರ್ ಅಜಯ್ ಮಿಶ್ರಾ ವಜಾ ಮಾಡಿದ ವಾರಣಾಸಿ ಕೋರ್ಟ್

ವರದಿ ಸಲ್ಲಿಕೆಗೆ 2 ದಿನ ಕಾಲಾವಕಾಶ

ವಾರಾಣಸಿ, ಮೇ 17– ಬಾಬರಿ ಮಸೀದಿ ಪ್ರಕರಣದ ಬಳಿಕ ಅಷ್ಟೇ ಕುತೂಹಲ ಕೆರಳಿಸಿರುವ ಜ್ಞಾನವಾಪಿ ಮಸೀದಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾರಣಾಸಿ ಕೋರ್ಟ್ ಅಡ್ವೋಕೇಟ್ ಕಮಿಷನರ್ ಅಜಯ್ ಮಿಶ್ರಾ ಅವರನ್ನು ವಜಾಗೊಳಿಸಿದೆ.

ವಿವಾದಿತ ಮಸೀದಿಯ ವಿಡಿಯೊ ಚಿತ್ರೀಕರಣ ಮತ್ತು ಸಮೀಕ್ಷೆಗೆ ಆದೇಶ ನೀಡಿದ್ದ ವಾರಾಣಸಿಯ ನ್ಯಾಯಾಲಯವು ಮಂಗಳವಾರ ಅಸಹಕಾರದ ಆಧಾರದ ಮೇಲೆ ಅಡ್ವೋಕೇಟ್ ಕಮಿಷನರ್ ಅಜಯ್ ಮಿಶ್ರಾ ಅವರನ್ನು ವಜಾಗೊಳಿಸಿದ್ದು, ಸಮೀಕ್ಷಾ ವರದಿ ಸಲ್ಲಿಸಲು ಆಯೋಗಕ್ಕೆ ನ್ಯಾಯಾಲಯ ಇನ್ನೆರಡು ದಿನಗಳ ಕಾಲಾವಕಾಶವನ್ನೂ ನೀಡಿದೆ. ಈ ಹಿಂದೆ ಮೇ 17ರ ಒಳಗೆ ವರದಿ ನೀಡಬೇಕು ಎಂದು ಕೋರ್ಟ್ ಹೇಳಿತ್ತು.

ಅಜಯ್ ಮಿಶ್ರಾ ಅವರನ್ನು ನ್ಯಾಯಾಲಯವು ವಜಾಗೊಳಿಸಿದೆ ಎಂದು ಸಹಾಯಕ ವಕೀಲ ಕಮಿಷನರ್ ಅಜಯ್ ಪ್ರತಾಪ್ ಸಿಂಗ್ ಸುದ್ದಿಸಂಸ್ಥೆಗಳಿಗೆ ಮಾಹಿತಿ ನೀಡಿದ್ದಾರೆ. ಅಸಹಕಾರದ ಆಧಾರದ ಮೇಲೆ ಮಿಶ್ರಾ ಅವರನ್ನು ತೆಗೆದುಹಾಕಲಾಗಿದ್ದು, ಅಜಯ್ ಮಿಶ್ರಾ ಅವರು ಸಮೀಕ್ಷೆಗೆ ಸಂಬಂಧಿಸಿದ ಮಾಹಿತಿಯನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಿದ್ದರು ಎಂದು ಕೆಲ ಸುದ್ದಿ ಮಾಧ್ಯಮಗಳು ವರದಿ ಮಾಡಿವೆ. ಈ ಹಿಂದೆ ಅಜಯ್ ಕುಮಾರ್ ಮಿಶ್ರಾ ಅವರನ್ನು ಅಡ್ವೋಕೇಟ್ ಕಮಿಷನರ್ ಸ್ಥಾನದಿಂದ ಕೈಬಿಡಬೇಕು ಎಂದು ಕೋರಿದ್ದ ಮುಸಲ್ಮಾನರ ಅರ್ಜಿಯನ್ನು ಇದೇ ಕೋರ್ಟ್ ತಿರಸ್ಕರಿಸಿತ್ತು. ಅಲ್ಲದೆ, ಮಿಶ್ರಾ ಅವರಿಗೆ ನೆರವಾಗಲು ಹೆಚ್ಚುವರಿ ಕಮಿಷನರ್ ಮತ್ತು ಸಹಾಯಕ ಕಮಿಷನರ್ ಅವರನ್ನು ಕೋರ್ಟ್ ನೇಮಕ ಮಾಡಿತ್ತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಜೂ.13ರಂದು ಚುನಾವಣೆ

ನಾಳೆಯಿಂದ ನಾಮಪತ್ರ ಸಲ್ಲಿಕೆ | ಜೂ.15ರಂದು ಮತ ಎಣಿಕೆ



ಮೈಸೂರು, ಮೇ 17(ಎಂಕೆ)– ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಹಾಸನ ಒಳಗೊಂಡ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಜೂ. 13ರಂದು ನಡೆಯಲಿದ್ದು, ಈ ಸಂಬಂಧ ಮೇ 19ರಂದು ಅಧಿಸೂಚನೆ ಹೊರಡಿಸಲಾಗುವುದು ಎಂದು ಚುನಾವಣಾಧಿಕಾರಿಯೂ ಆದ ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್ ತಿಳಿಸಿದರು.

ಮಂಗಳವಾರ ತಮ್ಮ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಅವರು, ನಾಮಪತ್ರ ಸಲ್ಲಿಸುವವರು ಮೇ 19 ರಿಂದ 26 ರವರೆಗೆ(ಮೇ 22ರ ಭಾನುವಾರದ ರಜಾದಿನ ಹೊರತುಪಡಿಸಿ) ಪ್ರತಿದಿನ ಬೆಳಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆವರೆಗೆ ತಮ್ಮ ಕಚೇರಿಯಲ್ಲಿ ಅಭ್ಯರ್ಥಿಯಾಗಲೀ ಅಥವಾ ಸೂಚಕರಾಗಲೀ ಚುನಾವಣಾಧಿಕಾರಿ ಅಥವಾ ಸಹಾಯಕ ಚುನಾವಣಾಧಿಕಾರಿಗೆ ನಾಮಪತ್ರ ಸಲ್ಲಿಸಬಹುದು ಎಂದು ಹೇಳಿದರು.

ಮೇ 26 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದ್ದು, ಮೇ 27ರಂದು ನಾಮಪತ್ರ ಪರಿಶೀಲನೆ ನಡೆಯಲಿದೆ. ಮೇ 30ರಂದು ನಾಮಪತ್ರ ಹಿಂದಕ್ಕೆ ಪಡೆಯಲು ಕೊನೆಯ ದಿನವಾಗಿದ್ದು, ಜೂ. 13 ರಂದು ಬೆಳಗ್ಗೆ 8 ರಿಂದ ಸಂಜೆ 4 ರವರೆಗೆ ಮತದಾನ ನಡೆಯಲಿದೆ ಜೂ. 15 ರಂದು ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಮತ ಎಣಿಕೆ ಕಾರ್ಯ ನಡೆಯಲಿದ್ದು, ಜೂ. 17 ಕ್ಕೆ ಚುನಾವಣಾ ಪ್ರಕ್ರಿಯೆ ಮುಕ್ತಾಯಗೊಳ್ಳಲಿದೆ ಎಂದು ವಿವರಿಸಿದರು.

ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಗಳ ಜಿಲ್ಲಾಧಿಕಾರಿಗಳೇ ಸಹಾಯಕ ಚುನಾವಣಾಧಿಕಾರಿಗಳಾಗಿದ್ದು, ಕೋವಿಡ್ ನಿಯಮಾನುಸಾರ ಅಭ್ಯರ್ಥಿ ಜೊತೆಗೆ ಒಬ್ಬರು ಮಾತ್ರ ತೆರಳಿ ನಾಮಪತ್ರ ಸಲ್ಲಿಸಬೇಕು. ಒಬ್ಬ ಅಭ್ಯರ್ಥಿಯು ಗರಿಷ್ಠ ನಾಲ್ಕು ನಾಮಪತ್ರ ಸಲ್ಲಿಸಲು ಅವಕಾಶವಿದೆ. ನಾಮಪತ್ರದಲ್ಲಿ ಕರ್ನಾಟಕದ ದಕ್ಷಿಣ ಪದವೀಧರರ ಕ್ಷೇತ್ರದ ಪ್ರಸಕ್ತ ಮತದಾರರ ಪಟ್ಟಿಯಲ್ಲಿ ನೋಂದಾಯಿತರಾದ 10 ಮಂದಿ ಮತದಾರರಿಂದ ಸೂಚಕರಾಗಿ ಸಹಿ ಪಡೆದಿರಬೇಕು ಎಂದರು.

ಅಭ್ಯರ್ಥಿಗಳು ಸಾಮಾನ್ಯ ಅಭ್ಯರ್ಥಿಯಾಗಿದ್ದಲ್ಲಿ 10 ಸಾವಿರ ರೂ., ಪ.ಜಾತಿ ಮತ್ತು ಪ.ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಾಗಿದ್ದಲ್ಲಿ 5 ಸಾವಿರ ರೂ. ಠೇವಣಿ ಕಟ್ಟಬೇಕು. ಪ.ಜಾತಿ ಮತ್ತು ಪ.ಪಂಗಡ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ದೃಢೀಕರಣ ಪತ್ರವನ್ನು ನಾಮಪತ್ರದೊಡನೆ ಲಗತ್ತಿಸಬೇಕು. ರಾಜಕೀಯ ಪಕ್ಷದಿಂದ ಸ್ಪರ್ಧಿಸಲು ಇಚ್ಛಿಸುವ ಅಭ್ಯರ್ಥಿಗಳು ಫಾರಂ ಎಎ ಮತ್ತು ಬಿಬಿ ಯನ್ನು ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕದ(ಮೇ 26) ಮಧ್ಯಾಹ್ನ 3 ಗಂಟೆಯೊಳಗೆ ಸಲ್ಲಿಸಿರಬೇಕು ಎಂದರು.

ನೀತಿ ಸಂಹಿತೆ ಜಾರಿಯಲ್ಲಿದೆ: ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ ಮೇ 12 ರಿಂದಲೇ ದಕ್ಷಿಣ ಪದವೀಧರ ಕ್ಷೇತ್ರ ವ್ಯಾಪ್ತಿಯಲ್ಲಿ ಮಾದರಿ ನೀತಿ ಸಂಹಿತೆ ಕಟ್ಟುನಿಟ್ಟಾಗಿ ಜಾರಿಯಲ್ಲಿದೆ. ಕ್ಷೇತ್ರ ವ್ಯಾಪ್ತಿಯಲ್ಲಿನ ನಾಲ್ಕು ಜಿಲ್ಲೆಯಿಂದ ಒಟ್ಟು 130 ಮತಗಟ್ಟೆ ಇದೆ. ಹಾಸನ ಜಿಲ್ಲೆಯಲ್ಲಿ ಒಟ್ಟು 23,038 ಮಂದಿ (ಪುರುಷರು 13269,ಮಹಿಳೆಯರು 9817 ಮತ್ತು ಇತರೆ 2)ಮತದಾರರು, ಮಂಡ್ಯ ಜಿಲ್ಲೆಯಲ್ಲಿ 44,370 ಮಂದಿ(ಪುರುಷರು 24824, ಮಹಿಳೆಯರು 19534 ಮತ್ತು ಇತರೆ 12) ಮತದಾರರು, ಮೈಸೂರು ಜಿಲ್ಲೆಯಲ್ಲಿ 54,039 ಮಂದಿ (ಪುರುಷರು 31687, ಮಹಿಳೆಯರು 22347 ಮತ್ತು ಇತರೆ 5)ಮತದಾರರು ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ 11,626 ಮಂದಿ(ಪುರುಷರು 7561, ಮಹಿಳೆಯರು 4063 ಮತ್ತು ಇತರೆ 2) ಮತದಾರರು ಸೇರಿ ಒಟ್ಟು 1,33,073 ಮಂದಿ ಮತದಾರರು ಇದ್ದಾರೆ. ಇತ್ತೀಚೆಗೆ (ಮೇ 16ರವರೆಗೆ) ನಡೆದ ನೋಂದಣಿಯಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಮಂದಿ ಸೇರ್ಪಡೆಯಾಗುವ ಸಾಧ್ಯತೆ ಇದೆ ಎಂದು ತಿಳಿಸಿದರು.

ಚಿಹ್ನೆ ಹಂಚಿಕೆ ಇಲ್ಲ: ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆಯಲ್ಲಿ ಅಭ್ಯರ್ಥಿಗಳಿಗೆ ಚಿಹ್ನೆ ಹಂಚಿಕೆ ಮಾಡುವುದಿಲ್ಲ. ಚುನಾವಣೆಯನ್ನು ಒಂದು ಮತದ ಮೂಲಕ ವರ್ಗಾಯಿಸಬಹುದಾದ ಅನುಪಾತ ಕ್ರಮದ ಪ್ರಕಾರ ಮತ ಎಣಿಕೆ ನಡೆಯುತ್ತದೆ. ಮತಪತ್ರದಲ್ಲಿ ಮತದಾರರು 1, 2, 3 ಇತ್ಯಾದಿ ಅಂಕಿಗಳಲ್ಲಿ ಅಥವಾ 1, 11, 111 ಇತ್ಯಾದಿ ನಮೂದಿನಲ್ಲಿ ಪ್ರಾಶಸ್ತ್ಯ ಮತಗಳನ್ನು ನೀಡಬೇಕು. ಅಕ್ಷರದಲ್ಲಿ ಬರೆಯಬಾರದು. ಮತಕೇಂದ್ರದಲ್ಲಿ ನೀಡುವ ಸ್ಕೆಚ್ ಪೆನ್ನಿನಿಂದಲೇ ಅಂಕಿ ನಮೂದಿಸಬೇಕು ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಸಹಾಯಕ ಚುನಾವಣಾಧಿಕಾರಿಗಳಾದ ಕೆ.ರೂಪಶ್ರೀ ಮತ್ತು ಶಿವರಾಜ್ ಉಪಸ್ಥಿತರಿದ್ದರು.

ನೀತಿ ಸಂಹಿತೆ ಉಲ್ಲಂಘಿಸಿದ್ದರೆ ನೋಟಿಸ್ ನೀಡಲಾಗುವುದು...

ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆ ಹಿನ್ನೆಲೆ ನೀತಿ ಸಂಹಿತೆ ಜಾರಿಯಲ್ಲಿದ್ದರೂ ಉನ್ನತ ಶಿಕ್ಷಣ ಸಚಿವರಾದ ಡಾ.ಅಶ್ವಥ್ ನಾರಾಯಣ ಅವರು, ಕರ್ನಾಟಕ ರಾಜ್ಯ ಮುಕ್ತ ವಿವಿ(ಕೆಎಸ್‌ಒಯು) ಆವರಣದಲ್ಲಿ ಮತದಾರರೊಂದಿಗೆ ಸಭೆ ನಡೆಸಿ ಮತಯಾಚನೆ ಮಾಡುವ ಮೂಲಕ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂಬ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಚುನಾವಣಾಧಿಕಾರಿಯೂ ಆದ ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ. ಪ್ರಕಾಶ್, ಕಾರ್ಯಕ್ರಮ ನಡೆದಿರುವ ಕುರಿತು ಮಾಹಿತಿ ಸಂಗ್ರಹಿಸಿ, ಪರಿಶೀಲಿಸಲಾಗುವುದು. ನೀತಿ ಸಂಹಿತೆ ಉಲ್ಲಂಘನೆಯಾಗಿದ್ದರೆ ಸಂಬಂಧಪಟ್ಟವರಿಗೆ ನೋಟಿಸ್ ನೀಡಲಾಗುವುದು ಎಂದು ತಿಳಿಸಿದರು.

ಮತದಾರರ ಪಟ್ಟಿಯಲ್ಲಿ ನ್ಯೂನತೆ; ಕೆಲವರಿಂದ ಆಮಿಷದ ಆರೋಪ

ಮೈಸೂರು, ಮೇ 17(ಎಂಕೆ)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯ ಮತದಾರರ ಪಟ್ಟಿಯಲ್ಲಿ ಸಾಕಷ್ಟು ನ್ಯೂನತೆಗಳಿದ್ದು, ಮತದಾರರ ದೂರವಾಣಿ ಸಂಖ್ಯೆ ಸೋರಿಕೆಯಾಗಿದೆ. ಅಭ್ಯರ್ಥಿಗಳು ಮತದಾರರಿಗೆ ಆಮಿಷ ಒಡ್ಡುತ್ತಿದ್ದಾರೆ ಎಂಬುದು ಸೇರಿದಂತೆ ಹಲವು ದೂರುಗಳನ್ನು ವಿವಿಧ ಪಕ್ಷದ ಅಭ್ಯರ್ಥಿಗಳು, ಮುಖಂಡರು ಚುನಾವಣಾಧಿಕಾರಿಗೆ ಸಲ್ಲಿಸಿದರು.

ನಗರದ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ನಡೆದ ಸಭೆಯಲ್ಲಿ, ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಗಿರಿಧರ್ ಮಾತನಾಡಿ, ಪಕ್ಷೇತರ ಅಭ್ಯರ್ಥಿಗಳ ಬಳಿ ಸುಮಾರು 60 ರಿಂದ 80 ಸಾವಿರ ಮತದಾರರ ದೂರವಾಣಿ ಸಂಖ್ಯೆಗಳಿದ್ದು, ಅವರಿಗೆ ವಾಟ್ಸ್‌ಆ್ಯಪ್ ಮೂಲಕ ಮತಯಾಚಿಸಿ, ಆಮಿಷ ಒಡ್ಡುತ್ತಿದ್ದಾರೆ. ಅಲ್ಲದೆ ಗೂಗಲ್ ಪೇ ಮೂಲಕ ಹಣ ವರ್ಗಾಯಿಸುತ್ತಿದ್ದಾರೆ. ಕೆಲವರು ಇನ್ಶೂರೆನ್ಸ್ ಬಾಂಡ್ ನೀಡಿ ಆಮಿಷ ಒಡ್ಡುತ್ತಿರುವುದಾಗಿ ದೂರಿದರು. ಕೂಡಲೇ ಪ್ರತಿಕ್ರಿಯಿಸಿದ ಚುನಾವಣಾಧಿಕಾರಿ ಡಾ.ಜಿ.ಸಿ.ಪ್ರಕಾಶ್, ಅಷ್ಟೊಂದು ಮಂದಿಯ ದೂರವಾಣಿ ಸಂಖ್ಯೆ ಸೋರಿಕೆಯಾಗಲು ಹೇಗೆ ಸಾಧ್ಯ. ಈ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಬಿಜೆಪಿಯ ಮತ್ತೋರ್ವ ನಗರ ಕಾರ್ಯದರ್ಶಿ ಸೋಮಸುಂದರ್ ಮಾತನಾಡಿ, ವಿನಯ್ ಎಂಬ ಪಕ್ಷೇತರ ಅಭ್ಯರ್ಥಿಯು ಅನೇಕರಿಗೆ ಆರೋಗ್ಯ ಬಾಂಡ್ ನೀಡುವುದಾಗಿ ಭರವಸೆ ನೀಡಿ, ಬಾಂಡ್ ವಿತರಿಸುತ್ತಿದ್ದಾರೆ. ಅಲ್ಲದೆ ಸಾಕಷ್ಟು ಆಮಿಷ ಒಡ್ಡುತ್ತಿದ್ದಾರೆ ಇವರ ವಿರುದ್ಧ ಕ್ರಮ ಕೈಗೊಂಡು ನಾಮಪತ್ರ ಸಲ್ಲಿಸದಂತೆ ಮಾಡಬೇಕು ಎಂದು ಆಗ್ರಹಿಸಿದರು.


ನಗರ ಪಾಲಿಕೆಯ ವಾರ್ಡ್‌ವೊಂದರಲ್ಲಿ ಸುಮಾರು 2 ಸಾವಿರ ಮಂದಿ ಮತದಾರರಿದ್ದು, ಈ ಪೈಕಿ 1500 ಮಂದಿ ಮತದಾರರ ವಿಳಾಸ ಸರಿಯಾಗಿಲ್ಲ. ಪಟ್ಟಿಯಲ್ಲಿ ಮತದಾರರ ಹೆಸರು, ಅವರು ವಾಸವಿರುವ ಬಡಾವಣೆಯ ಹೆಸರಿದೆಯೇ ಹೊರತು, ಯಾವ ಕ್ರಾಸ್, ಮೇನ್, ರಸ್ತೆ ಮುಂತಾದವುಗಳ ಹೆಸರಿಲ್ಲ. ಈ ಸಮಸ್ಯೆಯನ್ನು ಕೂಡಲೇ ಬಗೆಹರಿಸಬೇಕು ಎಂದು ಮನವಿ ಮಾಡಿದರು.

ಬಿಎಸ್ಪಿ ಅಭ್ಯರ್ಥಿ ಡಾ. ಚನ್ನಕೇಶವಮೂರ್ತಿ ಮಾತನಾಡಿ, ಆಮಿಷ ಒಡ್ಡುವಲ್ಲಿ ಯಾವುದೇ ಪಕ್ಷದವರು ಕಡಿಮೆ ಇಲ್ಲ. ಎಲ್ಲರೂ ಒಂದಿಲ್ಲೊಂದು ಆಮಿಷ ಒಡ್ಡಿದ್ದಾರೆ. ಕೆಲವರು ಬಲವಂತವಾಗಿ ಸ್ವೀಟ್ ಬಾಕ್ಸ್ ನೀಡುವುದು, ಬಾಡೂಟ, ಮದ್ಯ ಕೊಡಿಸುವುದರಲ್ಲಿ ನಿರತರಾಗಿದ್ದಾರೆ. ಇದಕ್ಕೆ ನನ್ನ ಬಳಿ ದಾಖಲೆಗಳಿವೆ. ಅವುಗಳನ್ನು ಮುಂದಿನ ದಿನಗಳಲ್ಲಿ ತಮಗೆ ನೀಡುವುದಾಗಿ ತಿಳಿಸಿದರು.

ಪಿಎಸ್‌ಐ ವಿವಾದ: ಮರು ಪರೀಕ್ಷೆ ಬೇಡ

ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವಂತೆ ಮಾಜಿ ಸಿಎಂ ಕುಮಾರ ಸ್ವಾಮಿಗೆ ನೊಂದ ಅಭ್ಯರ್ಥಿಗಳ ಮನವಿ

ಮೈಸೂರು,ಮೇ17(ಜಿಎ)– 'ಮರು ಪರೀಕ್ಷೆ ನಡೆಸದಂತೆ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಿ' ಎಂದು ಕೋರಿ ಪಿಎಸ್‌ಐ ಪರೀಕ್ಷೆಯ ಅಭ್ಯರ್ಥಿಗಳು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರ ಸ್ವಾಮಿ ಅವರಿಗೆ ಮನವಿ ಮಾಡಿದರು.



ಸಿಐಡಿ ತನಿಖೆ ಮುಗಿದ ನಂತರ ಸರ್ಕಾರಕ್ಕೆ ಸಲಹೆ: ಹೆಚ್‌ಡಿಕೆ ಭರವಸೆ

ಮೈಸೂರಿಗೆ ಮಂಗಳವಾರ ಆಗಮಿಸಿದ್ದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರ ಸ್ವಾಮಿ ಅವರನ್ನು ಶಾಸಕ ಸಾ.ರಾ. ಮಹೇಶ್ ಅವರ ಕಚೇರಿಯಲ್ಲಿ ಭೇಟಿಯಾದ ಪಿಎಸ್‌ಐ ಪರೀಕ್ಷಾ ಅಭ್ಯರ್ಥಿಗಳು ಮರು ಪರೀಕ್ಷೆ ನಡೆಸದಂತೆ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕು ಎಂದು ಮೌಖಿಕವಾಗಿ ಮನವಿ ಮಾಡಿದರು.

ಪಿಎಸ್‌ಐ ಪರೀಕ್ಷಾ ಅಭ್ಯರ್ಥಿಗಳ ಮನವಿಗೆ ಸ್ಪಂದಿಸಿದ ಹೆಚ್.ಡಿ.ಕುಮಾರ ಸ್ವಾಮಿ ಅವರು ಈ ಪ್ರಕರಣವನ್ನು ಸಿಐಡಿ ತನಿಖೆ ನಡೆಸುತ್ತಿದ್ದು, ತನಿಖೆ ಮುಗಿದ ನಂತರ ಈ ಕುರಿತು ಮಾತನಾಡುವುದಾಗಿ ಭರವಸೆ ನೀಡಿದರು.

ಹೆಚ್.ಡಿ.ಕುಮಾರ ಸ್ವಾಮಿ ಅವರಿಗೆ ಮನವಿ ಸಲ್ಲಿಸಿದ ನಂತರ ಪಿಎಸ್‌ಐ ಅಭ್ಯರ್ಥಿಯಾದ ಮೈಸೂರಿನ ಜ್ಯೋತಿನಗರದ ನಿವಾಸಿ ತಾರಾ ಅವರು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಪಿಎಸ್‌ಐ ಆಗಲು ನಾವುಗಳು ನಾಲ್ಕು ವರ್ಷಗಳಿಂದ ಓದಿದ್ದೇವೆ. ಅಕ್ಟೋಬರ್ ತಿಂಗಳಿನಲ್ಲಿ ಪ್ರಾಮಾಣಿಕವಾಗಿ ಪರೀಕ್ಷೆ ಬರೆದಿದ್ದೇವೆ. ಮತ್ತೆ ಮರು ಪರೀಕ್ಷೆ ಬರೆಯಬೇಕು ಎಂದರೆ ಮಾನಸಿಕವಾಗಿಯೂ ತೊಂದರೆಯಾಗುತ್ತದೆ. ಆದ್ದರಿಂದ ಯಾರು ತಪ್ಪು ಮಾಡಿದ್ದಾರೋ ಅವರನ್ನು ಗುರುತಿಸಿ ಶಿಕ್ಷಿಸಬೇಕು ಎಂದು ಸರ್ಕಾರಕ್ಕೆ ತಿಳಿಸುವಂತೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರ ಸ್ವಾಮಿ ಅವರಿಗೆ ಮನವಿ ಸಲ್ಲಿಸಿದ್ದೇವೆ ಎಂದರು.

ಪಿಎಸ್‌ಐ ಹುದ್ದೆಗಾಗಿ ರಾಜ್ಯಾದ್ಯಂತ 50 ಸಾವಿರಕ್ಕೂ ಅಧಿಕ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದು, ಹಲವಾರು ಮಂದಿ ಈ ಪರೀಕ್ಷೆಗಾಗಿ ಜೀವನೋಪಾಯಕ್ಕೆ ಇದ್ದ ಕೆಲಸಗಳನ್ನು ತೊರೆದು ಈಗ ದಿಕ್ಕು ತೋಚದಂತೆ ಕುಳಿತಿದ್ದಾರೆ. ಮರು ಪರೀಕ್ಷೆ ಮಾಡುವ ಬದಲು ಪ್ರಾಮಾಣಿಕರನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ವಿಷಯವನ್ನು ಹೆಚ್.ಡಿ.ಕುಮಾರ ಸ್ವಾಮಿ ಅವರಿಗೆ ತಿಳಿಸಿದ್ದು, ಸಿಐಡಿ ತನಿಖೆ ಮುಗಿಯುವ ನಂತರ ಸರ್ಕಾರದ ಜೊತೆ ಮಾತನಾಡುತ್ತೇನೆ ಎಂಬ ಭರವಸೆ ನೀಡಿದ್ದಾರೆ ಎಂದರು.

ಸಿಐಡಿ ನಡೆಸುತ್ತಿರುವ ತನಿಖೆಗೆ ಎಲ್ಲಾ ಅಭ್ಯರ್ಥಿಗಳು ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ. ಇತ್ತೀಚೆಗೆ ನಮ್ಮನ್ನೂ ಕರೆದು ವಿಚಾರಣೆ ನಡೆಸಿದ್ದಾರೆ. ಪ್ರಮುಖವಾಗಿ ನಮ್ಮ ಓಎಂಆರ್ ಶೀಟ್ ಅನ್ನು ಪಡೆದುಕೊಂಡು ಏನಾದರೂ ತಿದ್ದುಪಡಿ ನಡೆದಿದೆಯ ಎಂದು ಪರೀಕ್ಷಿಸಿದ್ದಾರೆ. ಸಿಐಡಿ ವತಿಯಿಂದ ಇನ್ನೂ ತನಿಖೆ ನಡೆಯುತ್ತಿದ್ದು, ಈ ಹಂತದಲ್ಲಿ ಮರು ಪರೀಕ್ಷೆ ಘೋಷಣೆ ಮಾಡಿರುವುದು ಎಷ್ಟು ಸರಿ ಅದರ ಬದಲು ರೀ ಲಿಸ್ಟ್ ಮಾಡಬೇಕು ಎಂದರು.

ಮೈಸೂರಲ್ಲಿ ಅಧಿಕ ಇಳುವರಿ ನೀಡುವ ಕಬ್ಬಿನ ಹೊಸ ತಳಿ ಬಗ್ಗೆ ಅರಿವು

ಸಕ್ಕರೆ ಕಾರ್ಖಾನೆಗಳ ಕಬ್ಬು ವಿಭಾಗದ 100ಕ್ಕೂ ಹೆಚ್ಚು ಪ್ರತಿನಿಧಿಗಳ ಭಾಗಿ



ಮೈಸೂರು, ಮೇ 17(ಎಂಟಿವೈ)– ಬೆಳಗಾವಿಯ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ವತಿಯಿಂದ ಮೈಸೂರಿನಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಹೆಚ್ಚು ಇಳುವರಿ ನೀಡುವ ಕಬ್ಬಿನ ಹೊಸ ತಳಿ ಬಗ್ಗೆ ಅರಿವು ಮೂಡಿಸಲಾಯಿತು. ದಕ್ಷಿಣ ಕರ್ನಾಟಕದಲ್ಲಿರುವ ಸಕ್ಕರೆ ಕಾರ್ಖಾನೆಗಳ ಕಬ್ಬು ವಿಭಾಗದ 100ಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ 'ದಕ್ಷಿಣ ಕರ್ನಾಟಕ ಭಾಗಕ್ಕೆ ಆಶಾದಾಯಕ ಕಬ್ಬಿನ ತಳಿಗಳು' ವಿಷಯದ ಬಗ್ಗೆ ನಡೆದ ವಿಚಾರ ಸಂಕಿರಣದಲ್ಲಿ ಮಂಡ್ಯದ ವಿಸಿ ಫಾರಂನ ಸಹ ಸಂಶೋಧನ ನಿರ್ದೇಶಕ ಡಾ. ವೆಂಕಟೇಶ ಮಾತನಾಡಿ, ಪ್ರಮುಖ ವಾಣಿಜ್ಯ ಬೆಳೆಯಾದ ಕಬ್ಬು ಬೆಳೆಯನ್ನೇ ಅವಲಂಬಿಸಿರುವ ಸಾವಿರಾರು ಕುಟುಂಬಗಳು ಮೈಸೂರು ಭಾಗದಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ಹೆಚ್ಚು ಇಳುವರಿ ನೀಡುವ ತಳಿಯನ್ನು ಬಿತ್ತನೆ ಮಾಡುವುದಕ್ಕೆ ರೈತರು ಮುಂದಾಗುವಂತೆ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ರೈತರ ಹಿತಕಾಯುವ ನಿಟ್ಟಿನಲ್ಲಿ ಮಂಡ್ಯದ ವಿಸಿ ಫಾರಂ ಸದಾ ಕ್ರಿಯಾಶೀಲತೆಯಿಂದ ಕಾರ್ಯನಿರ್ವಹಿಸುತ್ತಿದೆ. ಶತಮಾನಕ್ಕೂ ಹೆಚ್ಚು ವರ್ಷ ಇತಿಹಾಸವುಳ್ಳ ವಿಸಿ ಫಾರಂನಲ್ಲಿ ಹೊಸ ತಳಿಗಳ ಬಗ್ಗೆ ಸಂಶೋಧನೆ ನಡೆಸಲಾಗುತ್ತಿದೆ. ಅದರಲ್ಲೂ ಕಬ್ಬಿನ ಬೆಳೆಯ ಸಂಶೋಧನಾ ಕಾರ್ಯ ಪ್ರಗತಿಯಲ್ಲಿದೆ. ಇತ್ತೀಚೆಗೆ ವಿಸಿಎಫ್ 517 ಮತ್ತು ಸಿಒವಿಸಿ 18061 ಈ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ವಿವಿಧ ಕಾರ್ಖಾನೆಗಳಿಗೆ ಪೂರೈಸಲಾಗಿದೆ. ರೈತರು ಹೊಸ ತಳಿಗಳನ್ನು ಬಿತ್ತನೆ ಮಾಡುವ ಮೂಲಕ ಹೆಚ್ಚು ಇಳುವರಿ ಪಡೆದು, ಆದಾಯ ಹೆಚ್ಚಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬೆಳಗಾವಿಯ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ನಿರ್ದೇಶಕ ಡಾ. ಆರ್. ಬಿ.ಖಾಂಡಗಾವೆ ಮಾತನಾಡಿ, ವಿವಿಧ ಸಂಶೋಧನಾ ಕೇಂದ್ರಗಳಲ್ಲಿ ಅಭಿವೃದ್ಧಿಪಡಿಸಿದ ಕಬ್ಬಿನ ತಳಿಗಳನ್ನು, ಕಾರ್ಖಾನೆ ವ್ಯಾಪ್ತಿಗೆ ಒಳಪಡುವ ಪ್ರದೇಶದಲ್ಲಿ ಪರೀಕ್ಷಿಸಿ ಆ ಭಾಗಕ್ಕೆ ಸೂಕ್ತವೆನಿಸಿದ ತಳಿಗಳನ್ನು ಬಳಸಿ ಸಕ್ಕರೆ ಕಾರ್ಖಾನೆ ಸಾಮರ್ಥ್ಯ ಮತ್ತು ಸಕ್ಕರೆ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕಾಗಿದೆ. ಸಾಕಷ್ಟು ಹೊಸ ತಳಿಗಳು ಸಂಶೋಧನೆಗೊಂಡಿವೆ. ಅವುಗಳಲ್ಲಿ ಸ್ಥಳೀಯ ಪ್ರದೇಶಕ್ಕೆ ಯಾವ ತಳಿ ಸೂಕ್ತವಾಗಿದೆ ಎಂದು ಅರಿತುಕೊಂಡು ಬಿತ್ತನೆ ಮಾಡಬೇಕಾಗಿದೆ. ವಿಜ್ಞಾನಿಗಳಾದ ಡಾ.ಸ್ವಾಮಿಗೌಡ ಹಾಗೂ ಮಹದೇವಸ್ವಾಮಿ ಎಂಬುವರು ಅಭಿವೃದ್ಧಿಪಡಿಸಿರುವ ಕಬ್ಬಿನ ತಳಿಗಳ ಬಗ್ಗೆ ರೈತರು ಮಾಹಿತಿ ಪಡೆಯುವಂತೆ ಸೂಚಿಸಿದರು.

ವಿಚಾರ ಸಂಕಿರಣದಲ್ಲಿ ಕೊಯಮತ್ತೂರಿನ ಕಬ್ಬು ಸಂಕರ್ಣ ಸಂಸ್ಥೆ ಮತ್ತು ಮಂಡ್ಯ ವಿಸಿ ಫಾರಂನ ಸಂಶೋಧಕರು, ವಿಜ್ಞಾನಿಗಳು ಹೊಸದಾಗಿ ಸಂಶೋಧನೆ ಮಾಡಿರುವ ಕಬ್ಬಿನ ತಳಿಗಳ ಬಗ್ಗೆ ಪೂರ್ಣ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಕೊಯಮತ್ತೂರಿನ ಕಬ್ಬು ಸಂಶೋಧನಾ ಕೇಂದ್ರ ಪ್ರಾಂಶುಪಾಲರಾದ ಡಾ.ಆರ್. ಎಂ.ಶಾಂತಿ, ಹಿರಿಯ ವಿಜ್ಞಾನಿ ಡಾ.ಕೆ. ಮೋಹನ್‌ರಾಜ್, ಮಕವಳ್ಳಿ ಶುಗರ್ ಕಂಪನಿಯ ಉಪಾಧ್ಯಕ್ಷ ವಿ.ಜೆ.ರವಿ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು. ಕಾರ್ಯಕ್ರಮದ ಸಂಯೋಜಕ ರಾಘವೇಂದ್ರ ತೆಗ್ಗಿ ಸ್ವಾಗತಿಸಿದರೆ, ಎಸ್‌ಎನ್‌ಎಸ್‌ಐ ಕೃಷಿ ವಿಭಾಗ ಮುಖ್ಯಸ್ಥ ಎನ್.ಆರ್. ಯಕ್ಕೇಲಿ ವಂದಿಸಿದ ಕಾರ್ಯಕ್ರಮದಲ್ಲಿ ವಿವಿಧ ಸಕ್ಕರೆ ಕಾರ್ಖಾನೆಗಳ ಮುಖ್ಯಸ್ಥರು ಹಾಗೂ ದಕ್ಷಿಣ ಕರ್ನಾಟಕ ಭಾಗದ ಸಕ್ಕರೆ ಕಾರ್ಖಾನೆಗಳ ಕಬ್ಬು ವಿಭಾಗದ 100ಕ್ಕೂ ಅಧಿಕ ಸಿಬ್ಬಂದಿಗಳು ಭಾಗವಹಿಸಿದ್ದರು.

ನಟಿ ರಾಖಿ ಸಾವಂತ್‌ಗೆ ಮೈಸೂರಿನ ಬಾಯ್ ಫ್ರೆಂಡ್

● ಸೋಷಿಯಲ್ ಮೀಡಿಯಾದಲ್ಲಿ ಇಬ್ಬರ ಫೋಟೋ ಹಂಚಿಕೊಂಡ ರಾಖಿ ● ಯುವಕನಿಂದ ಬಿಎಂಡಬ್ಲ್ಯೂ ಕಾರು ಕೊಡುಗೆ

ಮುಂಬೈ, ಮೇ 17– ಇತ್ತೀಚೆಗಷ್ಟೇ ಪತಿಯಿಂದ ದೂರವಾಗಿದ್ದೇನೆ ಎಂದು ಹೇಳಿಕೆ ನೀಡಿದ್ದ ಬಾಲಿವುಡ್ ನಟಿ ರಾಖಿ ಸಾವಂತ್ ಈಗ ತಮ್ಮ ಹೊಸ ಬಾಯ್‌ಫ್ರೆಂಡ್ ಪರಿಚಯಿಸಿದ್ದಾರೆ.



ಈ ಬಾಯ್‌ಫ್ರೆಂಡ್ ಕರ್ನಾಟಕದವರೇ ಆಗಿದ್ದು, ತನ್ನ ಹೊಸ ಬಾಯ್‌ಫ್ರೆಂಡ್ ಮೈಸೂರಿನವನೆಂದು ಸ್ವತಃ ರಾಖಿಯೇ ಇಬ್ಬರ ಫೋಟೋ ಹಂಚಿಕೊಂಡಿದ್ದು, ಆತನ ಹೆಸರು ಆದಿಲ್‌ಖಾನ್ ದುರಾನಿ ಎಂದು ರಾಖಿ ಹೇಳಿದ್ದಾರೆ. ಪ್ರೀತಿ, ಪ್ರೇಮ ಹಾಗೂ ಮದುವೆ ವಿಚಾರದಲ್ಲಿ ರಾಖಿ ಸಾವಂತ್ ಆಗಾಗ ಸುದ್ದಿ ಮಾಡುತ್ತಲೇ ಇರುತ್ತಾರೆ. ಕೆಲವು ವರ್ಷಗಳ ಹಿಂದೆ ಸ್ವಯಂವರ ಏರ್ಪಡಿಸಿ ತಾನು ಮದುವೆಯಾಗಿದ್ದೇನೆ ಎಂದಿದ್ದ ರಾಖಿ ನಂತರ ಅದೇನು ಇಲ್ಲ ಎಂದಿದ್ದೂ ಗೊತ್ತಿರುವ ವಿಚಾರ. ಇದಷ್ಟೇ ಅಲ್ಲದೇ ಕಳೆದ ವರ್ಷ ಮದುವೆಯಾದ ರಾಖಿ ಗಂಡನನ್ನು ಕೆಲಕಾಲ ಪರಿಚಯಿಸಿರಲೇ ಇರಲಿಲ್ಲ. ಹಿಂದಿಯಲ್ಲಿ ಪ್ರಸಾರವಾಗುವ ಜನಪ್ರಿಯ ಬಿಗ್ ಬಾಸ್ ಶೋ ಮೂಲಕ ಗಂಡನ ಪರಿಚಯ ಮಾಡಲಾಗಿತ್ತು. ಇಬ್ಬರು ಹೊರಬಂದ ಬಳಿಕ ನಾವು ಬೇರೆಯಾಗಿದ್ದೇವೆ ಎಂದು ಹೇಳಿದ್ದರು.

ಇದೀಗ ಹೊಸ ಬಾಯ್ ಫ್ರೆಂಡ್ ಕಂಡುಕೊಂಡಿರುವ ರಾಖಿ, ಆತನಿಂದ ದುಬಾರಿ ಬೆಲೆಯ ಬಿಎಂಡಬ್ಲ್ಯೂ ಕಾರು ಉಡುಗೊರೆಯಾಗಿ ಪಡೆದಿದ್ದು, ಆತ ನನ್ನ ಜೀವನದ ಕೊನೆವರೆಗೂ ಜೊತೆಯಲ್ಲಿರುತ್ತೇನೆ ಎಂದು ಹೇಳಿದ್ದಾನೆ. ಹಾಗಾಗಿ ನಾನು ಉಡುಗೊರೆ ಪಡೆದಿದ್ದೇನೆ ಎಂದು ರಾಖಿ ಹೇಳಿಕೊಂಡಿದ್ದಾರೆ. ನಾನು ಖಿನ್ನತೆಯಿಂದ ದೂರವಾಗಲು ಮೈಸೂರಿನ ಅದಿಲ್ ಖಾನ್ ದುರಾನಿ ಕಾರಣ. ಅದಿಲ್‌ನಿಂದ ನಾನು ಸಹಜ ಸ್ಥಿತಿಗೆ ಬಂದೆ ಎಂದು ರಾಖಿ ಸಾವಂತ್ ಹೇಳಿದ್ದಾರೆ. ಈಗ ಅದಿಲ್ ಜೊತೆಗಿನ ಫೋಟೋ ಕೂಡ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಅಷ್ಟೆ ಅಲ್ಲದೆ ಸ್ವೀಟ್ ಹಾರ್ಟ್ ನನ್ನ ಜೀವನ ಎಂದೆಲ್ಲಾ ಬರೆದುಕೊಂಡಿದ್ದಾರೆ. ಒಟ್ಟಾರೆ ರಾಖಿಗೆ ಮದುವೆ, ಬಾಯ್‌ಫ್ರೆಂಡ್ ವಿಚಾರಗಳೇನೂ ಹೊಸತೇನಲ್ಲ. ಇದು ಎಷ್ಟು ದಿನ ಸಾಗುತ್ತೆ ಅನ್ನೋದನ್ನು ಕಾದು ನೋಡಬೇಕಿದೆ.



ರಾಜಾ ಮದಕರಿ ನಾಯಕರ ಪುಣ್ಯಸ್ಮರಣೆಯ ಅಂಗವಾಗಿ ಜಲದರ್ಶಿನಿ ಅತಿಥಿಗೃಹದ ಶಾಸಕರ ಕಚೇರಿಯಲ್ಲಿ ಶಾಸಕ ಎಲ್.ನಾಗೇಂದ್ರ ಪುಷ್ಪನಮನ ಸಲ್ಲಿಸಿದರು. ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ ರಾಮಕೃಷ್ಣ, ನಗರಪಾಲಿಕೆ ಸದಸ್ಯ ಎಂ.ಚಿಕ್ಕವೆಂಕಟು, ಆಶ್ರಯ ಸಮಿತಿಯ ಸದಸ್ಯ ಎಂ ಮಹೇಶ್, ಮಹದೇವಣ್ಣ, ಎಂ.ಶಿವಪ್ರಕಾಶ್, ಜೆಸಿಬಿ ರವಿ, ಎ.ಶಿವಣ್ಣ, ಸಿಡಿ.ಕುಮಾರ್, ಬಿ.ಕುಮಾರ್, ಪ್ರಮೋದ್‌ಗೌಡ ಮತ್ತಿತರರು ಹಾಜರಿದ್ದರು

ಅಪರಿಚಿತ ಸಾವು



ಮೈಸೂರು, ಮೇ 17–ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣದ ಬಳಿ ಅಸ್ವಸ್ಥನಾಗಿ ಬಿದ್ದಿದ್ದ ಅಪರಿಚಿತ ವ್ಯಕ್ತಿಯನ್ನು ಸಾರ್ವಜನಿಕರು ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಿದ್ದು, ಚಿಕಿತ್ಸೆ ಫಲಕಾರಿಯಾಗದೆ ನಿನ್ನೆ ಬೆಳಗ್ಗೆ (ಮೇ 16) ಮೃತಪಟ್ಟಿದ್ದಾನೆ. ಲಷ್ಕರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸುಮಾರು 70–75 ವಯಸ್ಸಿನ ಈ ಅಪರಿಚಿತ 5.5 ಅಡಿ ಎತ್ತರವಿದ್ದು, ಬಲಗೈಯ್ಯಲ್ಲಿ ಸಾಸಿವೆ ಗಾತ್ರದ ಕಪ್ಪು ಕಾರಳ್ಳು ಇರುತ್ತದೆ. ವಾರಸುದಾರರು ಮೊನಂ.9480802232, ದೂ.ಸಂ.2418307, 2418180, 2418339 ಮೂಲಕ ಸಂಪರ್ಕಿಸಬಹುದು.

ಹಿಟ್ ಅಂಡ್ ರನ್ ಕೇಸ್: ವಿದ್ಯಾರ್ಥಿಗಳಿಂದ ಪ್ರತಿಭಟನೆ

ಕಾರು ಚಾಲನೆ ಮಾಡುತ್ತಿದ್ದ ವಿದ್ಯಾರ್ಥಿನಿ ಮೂಲಕವೇ ಗಾಯಾಳುವಿಗೆ ಚಿಕಿತ್ಸೆ

ಮೈಸೂರು, ಮೇ 17(ಎಂಟಿವೈ)– ಕಾರನ್ನು ವಿದ್ಯಾರ್ಥಿಗೆ ಡಿಕ್ಕಿ ಹೊಡೆಸಿ ಪರಾರಿಯಾಗಿದ್ದ ವಿದ್ಯಾರ್ಥಿನಿಯಿಂದಲೇ ಪ್ರತಿಭಟನೆ ಮೂಲಕ ಚಿಕಿತ್ಸೆ ಕೊಡಿಸುವಲ್ಲಿ ಮೈಸೂರು ವಿವಿ ಸಂವಹನ ಮತ್ತು ಪತ್ರಿಕೋದ್ಯಮದ ವಿದ್ಯಾರ್ಥಿಗಳು ಯಶಸ್ವಿಯಾಗಿದ್ದಾರೆ.

ಮೈಸೂರು ಮಾನಸ ಗಂಗೋತ್ರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮದ ವಿದ್ಯಾರ್ಥಿ ನಾಗರಾಜುವಿಗೆ ಸಸ್ಯಶಾಸ್ತ್ರ ಸಂಶೋಧನಾ ವಿದ್ಯಾರ್ಥಿನಿ ಸೌಮ್ಯ ಎಂಬವರು ಚಲಾಯಿಸುತ್ತಿದ್ದ ಕಾರು ಡಿಕ್ಕಿ ಹೊಡೆದಿದೆ. ಅಪಘಾತದ ನಂತರ ಕಾರನ್ನು ನಿಲ್ಲಿಸದೆ ವಿದ್ಯಾರ್ಥಿನಿ ಪರಾರಿಯಾಗಿದ್ದಾರೆ. ಇದನ್ನು ಕಂಡ ಗಾಯಾಳು ವಿದ್ಯಾರ್ಥಿಯ ಸಹಪಾಠಿಗಳು ಮೈಸೂರು ವಿವಿ ಪಿಜಿ ಕ್ಯಾಂಪಸ್‌ನಲ್ಲಿರುವ ಸಸ್ಯಶಾಸ್ತ್ರ ವಿಭಾಗದ ಮುಂದೆ ಪ್ರತಿಭಟನೆ ನಡೆಸಿದರು.

ಹಿಟ್ ಅಂಡ್ ರನ್ ಮಾಡಿದ ವಿದ್ಯಾರ್ಥಿನಿಯ ವಿರುದ್ಧ ಕ್ರಮ ಕೈಗೊಳ್ಳಬೇಕು. ಗಾಯಾಳುವಿಗೆ ಸೂಕ್ತ ಚಿಕಿತ್ಸೆ ಕೊಡಿಸಬೇಕೆಂದು ಆಗ್ರಹಿಸಿದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕುಲಸಚಿವ ಪ್ರೊ.ಶಿವಪ್ಪ ಪ್ರತಿಭಟನಾನಿರತ ವಿದ್ಯಾರ್ಥಿಗಳ ಮನವೊಲಿಸಿದ್ದಲ್ಲದೆ, ಕಾರನ್ನು ಚಾಲನೆ ಮಾಡುತ್ತಿದ್ದ ವಿದ್ಯಾರ್ಥಿಯಿಂದಲೇ ಆಸ್ಪತ್ರೆಯ ವೆಚ್ಚ ಭರಿಸುವುದರೊಂದಿಗೆ ಸೂಕ್ತ ಚಿಕಿತ್ಸೆ ಕೊಡಿಸುವುದಾಗಿ ಭರವಸೆ ನೀಡಿದರು. ಇದರಿಂದ ವಿದ್ಯಾರ್ಥಿಗಳು ಪ್ರತಿಭಟನೆಯಿಂದ ಹಿಂದೆ ಸರಿದರು. ಈ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ. ಅಪಘಾತವೆಸಗಿದ ವಿದ್ಯಾರ್ಥಿನಿ ಗಾಯಾಳು ವಿದ್ಯಾರ್ಥಿಯನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸುತ್ತಿದ್ದಾರೆ.

ಅಫ್ಘಾನಿಸ್ತಾನದಲ್ಲಿ ಮಾನವ ಹಕ್ಕುಗಳ ಆಯೋಗವನ್ನೇ ರದ್ದು ಮಾಡಿದ ತಾಲಿಬಾನ್!



ಕಾಬೂಲ್, ಮೇ 17– ಅಫ್ಘಾನಿಸ್ತಾನದಲ್ಲಿ ತಾಲಿಬಾನಿಗಳ ಮನಸೋ ಇಚ್ಛೆ ಆಡಳಿತ ಮುಂದುವರೆದಿದ್ದು, ಈ ಹಿಂದೆ ಮಹಿಳಾ ಚಾಲನಾ ಪರವಾನಗಿ ರದ್ದು ಮಾಡಿದ್ದ ತಾಲಿಬಾನ್ ಸರ್ಕಾರ ಇದೀಗ ಮಾನವ ಹಕ್ಕುಗಳ ಆಯೋಗವನ್ನೇ ರದ್ದು ಮಾಡಿದೆ.

ತನ್ನ ದೇಶಕ್ಕೆ ಸ್ವತಂತ್ರ ಮಾನವ ಹಕ್ಕುಗಳ ಆಯೋಗದ ಅಗತ್ಯವಿಲ್ಲ ಎಂದು ಪರಿಗಣಿಸಿ ಅದನ್ನು ರದ್ದು ಮಾಡಲಾಗಿದೆ ಎಂದು ತಾಲಿಬಾನ್ ಆಡಳಿತದ ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿರುವ ತಾಲಿಬಾನ್ ಸರ್ಕಾರದ ಉಪ ವಕ್ತಾರ ಇನಾಮುಲ್ಲಾ ಸಮಂಗನಿ, 'ಅಫ್ಘಾನಿಸ್ತಾನದಲ್ಲಿ ಮಾನವ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುವ ಇತರೆ ಸಂಘ ಸಂಸ್ಥೆಗಳಿವೆ. ಅವು ನ್ಯಾಯಾಂಗದೊಂದಿಗೆ ಸಂಪರ್ಕ ಹೊಂದಿವೆ. ಹಾಗಾಗಿ ಸದ್ಯಕ್ಕೆ ದೇಶದಲ್ಲಿ ಮಾನವ ಹಕ್ಕುಗಳ ಆಯೋಗದ ಅಗತ್ಯ ಇಲ್ಲ. ಭವಿಷ್ಯದಲ್ಲಿ ಇದರ ಅಗತ್ಯ ಎದುರಾದರೆ ಮತ್ತೆ ಕಾರ್ಯಾರಂಭಿಸಲಿದೆ? ಎಂದು ಹೇಳಿದ್ದಾರೆ.

ಕಳೆದ ಆಗಸ್ಟ್‌ನಲ್ಲಿ ಪ್ರಜಾಪ್ರಭುತ್ವ ಸರ್ಕಾರವನ್ನು ಪದಚ್ಯುತಗೊಳಿಸಿ ಅಧಿಕಾರದ ಚುಕ್ಕಾಣಿ ಹಿಡಿದ ತಾಲಿಬಾನ್, ಚುನಾವಣಾ ಆಯೋಗ ಮತ್ತು ಮಹಿಳಾ ಸಚಿವಾಲಯ ಸೇರಿದಂತೆ ಅಫ್ಘನ್ನರ ಸ್ವಾತಂತ್ರ್ಯವನ್ನು ರಕ್ಷಿಸುತ್ತಿದ್ದ ಹಲವು ಸಂಸ್ಥೆಗಳನ್ನು ರದ್ದು ಮಾಡಿದೆ.

ಮೊದಲ ದಿನದ ರೇಸ್ ಮುಂದೂಡಿದ ಎಂಆರ್‌ಸಿ

ಮೈಸೂರು, ಮೇ 17– ಮೈಸೂರಿನಲ್ಲಿ ಸುರಿಯುತ್ತಿರುವ ನಿರಂತರ ಮಳೆ ಹಾಗೂ ವ್ಯತಿರಿಕ್ತ ಹವಾಮಾನ ಪರಿಸ್ಥಿತಿ ಹಿನ್ನೆಲೆಯಲ್ಲಿ ಮೈಸೂರು ರೇಸ್ ಕ್ಲಬ್‌ನ ಪ್ರಸಕ್ತ ಸಾಲಿನ(2022) ಬೇಸಿಗೆ ರೇಸ್‌ಗಳಲ್ಲಿನ ಮೊದಲ ದಿನದ(ಮೇ 18) ರೇಸ್('ದಿ ಮೈಸೂರು ಜುವೆನೈಲ್ ಮಿಲಿಯನ್')ಅನ್ನು ಮುಂದೂಡಲಾಗಿದೆ. ಮೇ 18 ರಿಂದ ಆ.10ರವರೆಗೆ 13 ದಿನಗಳ ಕಾಲ ಮೈಸೂರು ಬೇಸಿಗೆ ರೇಸ್‌ಗಳು ನಡೆಯಲಿದ್ದು, ಮಳೆಯಿಂದಾಗಿ ಮೊದಲ ದಿನದ ರೇಸ್ ಅನ್ನು ಮೇ 25(ಎರಡನೇ ದಿನದಂದೆ) ರಂದು ನಡೆಸಲು ನಿರ್ಧರಿಸಲಾಗಿದೆ. ಇನ್ನುಳಿದ ಎಲ್ಲಾ ರೇಸ್‌ಗಳು ನಿಗದಿತ ದಿನಗಳಂದೇ ನಡೆಯಲಿವೆ ಎಂದು ಎಂಆರ್‌ಸಿ ಪ್ರಕಟಣೆ ತಿಳಿಸಿದೆ.

ನೇರ ಪಾವತಿ ಪೌರಕಾರ್ಮಿಕರು, ಒಳಚರಂಡಿ ಸಹಾಯಕರು, ಕಸ ಸಾಗಣಿಕೆ ವಾಹನ ಚಾಲಕರ ಖಾಯಂಗೆ ಆಗ್ರಹ

ನಾಳೆ ರಾಜ್ಯದ ಎಲ್ಲಾ ಡಿಸಿ ಕಚೇರಿ ಎದುರು ಸಾಂಕೇತಿಕ ಪ್ರತಿಭಟನೆ

ಮೈಸೂರು,ಮೇ 17(ಪಿಎಂ)– ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ನೇರಪಾವತಿ ಪೌರಕಾರ್ಮಿಕರು, ಒಳಚರಂಡಿ ಸಹಾಯಕರು ಮತ್ತು ಕಸ ಸಾಗಾಣಿಕೆ ವಾಹನ ಚಾಲಕರನ್ನು ಖಾಯಂಗೊಳಿಸಲು ಆಗ್ರಹಿಸಿ ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘದ ವತಿಯಿಂದ ಮೇ 19ರಂದು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಕಚೇರಿ ಎದುರು ಸಾಂಕೇತಿಕ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಮಹಾಸಂಘದ ರಾಜ್ಯಾಧ್ಯಕ್ಷರೂ ಆದ ಮಾಜಿ ಮೇಯರ್ ನಾರಾಯಣ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪೌರಕಾರ್ಮಿಕರ ಮುಖಂಡರೂ ಆದ ಮಾಜಿ ಮೇಯರ್ ನಾರಾಯಣ್ ಮಾತನಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇಡೀ ರಾಜ್ಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರಪಾವತಿ ಪೌರಕಾರ್ಮಿಕರು, ಒಳಚರಂಡಿ ಸಹಾಯಕರು ಮತ್ತು ಕಸ ಸಾಗಾಣಿಕೆ ವಾಹನ ಚಾಲಕರು ಸೇರಿದಂತೆ ಒಟ್ಟು 38,400 ಮಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರನ್ನು ಖಾಯಂಗೊಳಿಸಲು ಆಗ್ರಹಿಸಿ ಈ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಅಂದು ಬೆಳಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿ ಕಚೇರಿ ಎದುರು ಸಾಂಕೇತಿಕ ಪ್ರತಿಭಟನೆ ನಡೆಸಲಾಗುವುದು. ಹಿಂದಿನ ಸಿದ್ದರಾಮಯ್ಯ ಸರ್ಕಾರ ಗುತ್ತಿಗೆ ಪದ್ಧತಿ ರದ್ದುಗೊಳಿಸಿ ನೇರ ಪಾವತಿಯಡಿ ಪೌರಕಾರ್ಮಿಕರು ಕೆಲಸ ಮಾಡಲು ಅವಕಾಶ ಮಾಡಿಕೊಟ್ಟಿತು. ಆದರೆ ಗುತ್ತಿಗೆದಾರರು ನೀಡುವ ವೇತನವನ್ನು ಸರ್ಕಾರ ನೀಡುತ್ತದೆ ಎಂಬುದನ್ನು ಬಿಟ್ಟರೆ ಅವರಿಗೆ ಯಾವುದೇ ಸೌಲಭ್ಯ ಇಲ್ಲ. ಒಂದು ರೀತಿಯಲ್ಲಿ ಹೊರಗುತ್ತಿಗೆ ಹೋಗಿ, ಒಳಗುತ್ತಿಗೆಯಾಗಿ ಬದಲಾಗಿದೆ ಎಂದರು.

ಪ್ರತಿಭಟನೆ ಬಳಿಕ ಒಂದು ತಿಂಗಳ ಗಡುವು ನೀಡಲಾಗುವುದು. ಆಗಲೂ ಸರ್ಕಾರ ಬೇಡಿಕೆ ಈಡೇರಿಸದೇ ಇದ್ದರೆ, ವಿಧಾನಸೌಧ ಚಲೋ ಚಳವಳಿ ಹಮ್ಮಿಕೊಳ್ಳಲಾಗುವುದು. ಇದಕ್ಕೂ ಸ್ಪಂದಿಸದೇ ಇದ್ದರೆ, ಇಡೀ ರಾಜ್ಯದ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಸ್ಥಗಿತಗೊಳಿಸಿ, ಮುಷ್ಕರ ನಡೆಸಲಾಗುವುದು. ಖಾಯಂ ಆಗುವವರೆಗೂ ಮುಷ್ಕರ ಕೈಬಿಡುವುದಿಲ್ಲ ಎಂದು ಎಚ್ಚರಿಸಿದರು.

ಅಂತೆಯೇ ಮೈಸೂರಿನಲ್ಲಿ ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಸಾಂಕೇತಿಕ ಪ್ರತಿಭಟನೆ ನಡೆಸಲಾಗುವುದು. ಮೈಸೂರು ಮಹಾನಗರ ಪಾಲಿಕೆಯಲ್ಲಿ ನೇರ ಪಾವತಿ ಪೌರಕಾರ್ಮಿಕರು, ಒಳಚರಂಡಿ ಸಹಾಯಕರು ಮತ್ತು ಕಸ ಸಂಗ್ರಹ ವಾಹನ ಚಾಲಕರು ಸೇರಿದಂತೆ ಒಟ್ಟು 2005 ಮಂದಿಯನ್ನು ಖಾಯಂ ಮಾಡಬೇಕೆಂಬುದು ನಮ್ಮ ಬೇಡಿಕೆಯಾಗಿದೆ ಎಂದು ವಿವರಿಸಿದರು.

ಮೈಸೂರು ನಗರ ಪಾಲಿಕೆ ಖಾಯಂ ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾಸಂಘದ ಉನ್ನತ ಸಮಿತಿ ಅಧ್ಯಕ್ಷ ಎನ್.ಮಾರ, ಅಧ್ಯಕ್ಷ ಎನ್.ಮೋಹನ್‌ಕುಮಾರ್, ಪ್ರಧಾನ ಕಾರ್ಯದರ್ಶಿ ಟಿ.ಶ್ರೀನಿವಾಸ ಮತ್ತಿತರರು ಗೋಷ್ಠಿಯಲ್ಲಿದ್ದರು.

ಪದವೀಧರ ಚುನಾವಣೆ; ಕಾಂಗ್ರೆಸ್, ಜೆಡಿಎಸ್ ಭರ್ಜರಿ ಪ್ರಚಾರ



ಅಭ್ಯರ್ಥಿ ಹೆಚ್.ಕೆ.ರಾಮು ಪರ ಜೆಡಿಎಸ್ ಮುಖಂಡರು ಮಂಡ್ಯದ ವಿವಿಧ ಕಾಲೇಜುಗಳಲ್ಲಿ ಮತಯಾಚಿಸಿದರು.

ಮಂಡ್ಯ,ಮೇ 17(ಮೋಹನ್‌ರಾಜ್)– ಜೂನ್ 13ರಂದು ದಕ್ಷಿಣ ಪದವೀಧರ ಕ್ಷೇತ್ರದಿಂದ ನಡೆಯುವ ವಿಧಾನ ಪರಿಷತ್ ಚುನಾವಣೆ ಪ್ರಚಾರ ಭರಾಟೆ ಮಂಡ್ಯದಲ್ಲಿ ಭರ್ಜರಿಯಾಗಿದ್ದು, ಕಾಂಗ್ರೆಸ್ ಹಾಗೂ ಜೆಡಿಎಸ್ ಮುಖಂಡರು ಅಭ್ಯರ್ಥಿ ಪರ ಬಿರುಸಿನ ಪ್ರಚಾರ ನಡೆಸುತ್ತಿದ್ದಾರೆ. ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಇಂದು ವಿವಿಧ ಕಾಲೇಜುಗಳಿಗೆ ಭೇಟಿ ನೀಡಿ ಮತಯಾಚಿಸಿದರೆ, ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಪರ ಮಾಜಿ ಸಚಿವ ಎಂ.ಎಸ್.ಆತ್ಮಾನಂದ ಹಾಗೂ ವಿಧಾನಪರಿಷತ್ ಸದಸ್ಯ ದಿನೇಶ್‌ಗೂಳಿಗೌಡ ಪ್ರಚಾರ ನಡೆಸಿದರು.

ಶಿಕ್ಷಕರ ಸಮಸ್ಯೆ ಬಗೆಹರಿಸುವೆ: ನಗರದ ಡಯಟ್‌ಗೆ ಭೇಟಿ ನೀಡಿ ಉಪನ್ಯಾಸಕರು, ಪದವೀಧರರ ಬಳಿ ಮತಯಾಚನೆ ಮಾಡಿ ಮಾತನಾಡಿದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಅವರು ಶಿಕ್ಷಕರು, ಪದವೀಧರರು, ಉಪನ್ಯಾಸಕರ ಸಮಸ್ಯೆಗಳು ಹೆಚ್ಚಾಗಿದ್ದು, ಎಲ್ಲಾ ಸಮಸ್ಯೆಗಳನ್ನೂ ಬಗೆಹರಿಸುವುದರ ಜೊತೆಗೆ ಸಾಮಾಜಿಕ ಕಳಕಳಿ ಇಟ್ಟುಕೊಂಡು ಕೆಲಸ ಮಾಡಲು ಉತ್ಸುಕನಾಗಿದ್ದೇನೆ. ಮಂಡ್ಯ, ಮೈಸೂರು, ಹಾಸನ, ಚಾಮರಾಜನಗರ ಜಿಲ್ಲೆಗಳಿಂದ 1.40 ಲಕ್ಷಕ್ಕೂ ಹೆಚ್ಚು ಮಂದಿ ಪದವೀಧರ ಮತದಾರರು ನೋಂದಣಿಯಾಗಿದ್ದಾರೆ ಎಂದರು. ಈ ಹಿಂದೆ ತಾವು ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷನಾಗಿದ್ದ ಅವಧಿಯಲ್ಲಿ ಹತ್ತು ಹಲವು ಸಮಾಜಮುಖಿ ಕಾರ್ಯಗಳನ್ನು ಮಾಡಿದ್ದು, ಪದವೀಧರ ಮತದಾರರು ಪ್ರಥಮ ಪ್ರಾಶಸ್ತ್ಯದ ಮತ ನೀಡಿ ಆಯ್ಕೆ ಮಾಡುವಂತೆ ಮನವಿ ಮಾಡಿದರು. ಈ ವೇಳೆ ಮುಖಂಡರಾದ ಜಗದೀಶ್, ಶಿವರಾಂ, ಸಿದ್ದರಾಮು ಇತರರು ಇದ್ದರು.

ಆತ್ಮಾನಂದ ಪ್ರಚಾರ: ದಕ್ಷಿಣ ಪದವೀಧರ ಕ್ಷೇತ್ರದ ವಿಧಾನಪರಿಷತ್ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರ ಪರವಾಗಿ ಮಾಜಿ ಸಚಿವ ಎಂ.ಎಸ್.ಆತ್ಮಾನಂದ, ಜಿಪಂ ಮಾಜಿ ಅಧ್ಯಕ್ಷ ಬಿ.ಬಸವರಾಜು, ಜಿಪಂ ಮಾಜಿ ಸದಸ್ಯ ಎನ್.ರಾಜು ಅವರು ಮಂಡ್ಯ ತಾಲೂಕಿನ ಹನಕೆರೆ, ಬಿ.ಗೌಡಗೆರೆ, ಕನ್ನಲಿ ಗ್ರಾಪಂ ವ್ಯಾಪ್ತಿಯ ವಿವಿಧ ಗ್ರಾಮ ಗಳಿಗೆ ಭೇಟಿ ನೀಡಿ ಪ್ರಚಾರ ನಡೆಸಿದರು.

ನಂತರ ಮಾತನಾಡಿದ ಮಾಜಿ ಸಚಿವ ಎಂ.ಎಸ್.ಆತ್ಮಾನಂದ ಅವರು, ರೈತ ಹಾಗೂ ಜನಸಾಮಾನ್ಯರ ಪರವಾಗಿ ಹೋರಾಟ ಮಾಡಿದ ಜಿ.ಮಾದೇಗೌಡರ ಸುಪುತ್ರ ಶಿಕ್ಷಣತಜ್ಞ ಮಧು ಜಿ.ಮಾದೇಗೌಡರು ಶಿಕ್ಷಣ ಸಂಸ್ಥೆಗಳನ್ನು ನಡೆಸಿ, ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಅನುಭವ ಪಡೆದಿದ್ದಾರೆ. ಈ ಬಾರಿ ಕಾಂಗ್ರೆಸ್ ಬೆಂಬಲದಿಂದ ದಕ್ಷಿಣ ಪದವಿಧರರ ಕ್ಷೇತ್ರಕ್ಕೆ ಸ್ಪರ್ಧಿಸಿದ್ದಾರೆ. ಇವರು ನಾಲ್ಕು ಜಿಲ್ಲೆಗಳಲ್ಲಿ ಸಂಚರಿಸಿ 48 ಸಾವಿರ ಪದವಿಧರರನ್ನು ನೋಂದಣಿ ಮಾಡಿಸಿದ್ದಾರೆ. ಇವರ ಗೆಲುವಿಗೆ ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದರು.

ಕಾಂಗ್ರೆಸ್ ಅಭ್ಯರ್ಥಿ ಪರ ಮತಯಾಚನೆ

ಪಾಂಡವಪುರ, ಮೇ 17– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರ ಪರವಾಗಿ ವಿಧಾನಪರಿಷತ್ ಸದಸ್ಯ ದಿನೇಶ್‌ಗೂಳಿಗೌಡ ತಾಲೂಕಿನಲ್ಲಿ ಚುನಾವಣಾ ಪ್ರಚಾರ ನಡೆಸಿದರು.

ಪಟ್ಟಣದ ಅನ್ನಪೂರ್ಣೇಶ್ವರಿ ಹೋಟೆಲ್‌ನಲ್ಲಿ ಪಕ್ಷದ ಕೆಲ ಮುಖಂಡರೊಂದಿಗೆ ಸಭೆ ನಡೆಸಿ, ಬಳಿಕ ಚುನಾವಣಾ ಪ್ರಚಾರ ಆರಂಭಿಸಿದರು. ತಾಲೂಕಿನ ಜಯಂತಿ ನಗರದಲ್ಲಿ ಇರುವ ಶ್ರೀಶಂಭುಲಿಂಗೇಶ್ವರ ವಿದ್ಯಾಸಂಸ್ಥೆ, ಸರ್ಕಾರಿ ಆದರ್ಶ ಶಾಲೆ, ಜಿಜೆಸಿ ಕಾಲೇಜು, ಬಿಇಓ ಕಚೇರಿ, ಬಾಲಕಿಯರ ಪದವಿ ಪೂರ್ವ ಕಾಲೇಜು ಸೇರಿದಂತೆ ವಿವಿಧೆಡೆ ಬಿರುಸಿನ ಚುನಾವಣಾ ಪ್ರಚಾರ ನಡೆಸಿದರು.

ಬಳಿಕ ಮಾತನಾಡಿದ ಅವರು, ಮಾಜಿ ಸಂಸದರು, ಹೋರಾಟಗಾರರಾದ ದಿವಂಗತ ಜಿ.ಮಾದೇಗೌಡರ ಸುಪುತ್ರರಾದ ಮಧು ಜಿ.ಮಾದೇಗೌಡರು, ಒಂದು ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಪದವೀಧರರ, ಶಿಕ್ಷಕರ, ಉಪನ್ಯಾಸಕರ ಸಮಸ್ಯೆಗಳ ಬಗ್ಗೆ ಅರಿವು ಹೊಂದಿದ್ದು, ಶಿಕ್ಷಕರ ಧ್ವನಿಯಾಗಿ ವಿಧಾನಪರಿಷತ್‌ನಲ್ಲಿ ಕೆಲಸ ಮಾಡಲಿದ್ದಾರೆ ಎನ್ನುವ ವಿಶ್ವಾಸವಿದ್ದು, ಪ್ರಥಮ ಪ್ರಾಶಸ್ತ್ಯ ಮತ ನೀಡಿ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ಹೆಚ್.ತ್ಯಾಗರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಕೃಷ್ಣೇಗೌಡ, ಕಿಸಾನ್ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಕುಬೇರ್, ಟಿಎಪಿಸಿಎಂಎಸ್ ನಿರ್ದೇಶಕ ಶ್ರೀಕಾಂತ್, ಮುಖಂಡರಾದ ಚಿಕ್ಕಾಡೆ ಮರೀಶ್, ಬಿ.ಜೆ.ಸ್ವಾಮಿ, ಬಸವರಾಜ್, ಚಲುವರಸನಕೊಪ್ಪಲು ದರ್ಶನ್ ಸೇರಿದಂತೆ ಹಲವರಿದ್ದರು.




ಪಾಂಡವಪುರದ ಶಂಭುಲಿಂಗೇಶ್ವರ ಶಾಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರ ಪರ ಎಂಎಲ್‌ಸಿ ದಿನೇಶ್‌ಗೂಳಿಗೌಡ ಪ್ರಚಾರ ನಡೆಸಿದರು.

ಸಾಲ ಬಾಧೆ: ರೈತ ಆತ್ಮಹತ್ಯೆ

ಭಾರತೀನಗರ, ಮೇ 17(ಅಣ್ಣೂರು ಸತೀಶ್)– ಸಾಲ ಬಾಧೆ ತಾಳಲಾರದೆ ರೈತನೋರ್ವ ಕ್ರಿಮಿನಾಶಕ ಸೇವಿಸಿ ತಮ್ಮ ಜಮೀನಿನಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಮೀಪದ ಸುಣ್ಣದದೊಡ್ಡಿ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ಜಯರಾಮು(54) ಮೃತ ರೈತ. ಇವರು ವ್ಯವಸಾಯಕ್ಕಾಗಿ ತೊರೆಬೊಮ್ಮನಹಳ್ಳಿ ಕೃಷಿ ಪತ್ತಿನ ಸಂಘದಲ್ಲಿ 3 ಲಕ್ಷ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಿಂದ 4 ಲಕ್ಷ, 2 ಲಕ್ಷ ಕೈ ಸಾಲ ಮಾಡಿದ್ದಾರೆ ಎನ್ನಲಾಗಿದೆ. ಮಾಡಿದ್ದ ಸಾಲಗಳನ್ನು ತೀರಿಸಲಾಗದೆ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆಗೆ ಶರಣಾರಾಗಿದ್ದಾರೆಂದು ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಗೆ ಜಯರಾಮು ಕುಟುಂಬಸ್ಥರು ದೂರು ನೀಡಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮಕೈಗೊಂಡಿದ್ದಾರೆ. ಕೆ.ಎಂ.ದೊಡ್ಡಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಮೃತದೇಹ ಒಪ್ಪಿಸಲಾಯಿತು.



ಶ್ರೀರಂಗಪಟ್ಟಣ ಕಸಬಾ ವ್ಯವಸಾಯ ಸಹಕಾರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಎಸ್.ಸೋಮ್‌ಸುಂದರ್ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾ ಅಧಿಕಾರಿ ಅನುಸೂಯ ಚುನಾವಣೆ ಪ್ರಕ್ರಿಯೆ ನಡೆಸಿದರು. ಈ ಸಂದರ್ಭದಲ್ಲಿ ಮಾಜಿ ಪುರಸಭಾ ಅಧ್ಯಕ್ಷ ಶಿವಾಜಿರಾವ್, ಐ.ನಾಗರಾಜ್, ಪುರಸಭಾ ಸದಸ್ಯರಾದ ದಯಾನಂದ್, ದಿನೇಶ್, ವಸಂತಕುಮಾರಿ ಲೋಕೇಶ್, ನಿರ್ದೇಶಕರಾದ ವೆಂಕಟರಾಮ್, ಪದ್ಮಮ್ಮ, ನರಸಿಂಹೇಗೌಡ, ಕರೀಗೌಡ, ಶೋಭಾ, ಭಾಸ್ಕರ್, ವೆಂಕಟೇಶ್ ಉಪಸ್ಥಿತರಿದ್ದರು.

ಕೆ.ಆರ್.ಪೇಟೆ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಅರುಣ್‌ಕುಮಾರ್ ಪುನರಾಯ್ಕೆ



ಕೆ.ಆರ್.ಪೇಟೆ, ಮೇ 17–ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಅಧ್ಯಕ್ಷರಾಗಿ ಅಪ್ಪನಹಳ್ಳಿ ಅರುಣ್‌ಕುಮಾರ್ ಇಂದು ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಪುನರಾಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಅಘಲಯ ತಮ್ಮಣ್ಣ ನಾಯಕ್, ಖಜಾಂಚಿಯಾಗಿ ಕಿಕ್ಕೇರಿ ಗೋವಿಂದ ರಾಜು, ಪ್ರಧಾನ ಕಾರ್ಯದರ್ಶಿಯಾಗಿ ಟಿ.ವೈ.ಆನಂದ್, ಸಹ ಕಾರ್ಯದರ್ಶಿಯಾಗಿ ಸಿದ್ದಾಪುರ ಉಮೇಶ್ ಆಯ್ಕೆಯಾದರು. ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಮತ್ತೀಕೆರೆ ಜಯರಾಂ ಅಧ್ಯಕ್ಷತೆಯಲ್ಲಿ ನಡೆದ ತಾಲೂಕು ಸಂಘದ ಸಭೆಯಲ್ಲಿ ಮಂಡ್ಯ ಜಿಲ್ಲಾ ಸಂಘದ ಅಧ್ಯಕ್ಷ ಕೆ.ಸಿ.ಮಂಜುನಾಥ್ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಆಯ್ಕೆ ಪ್ರಕಟಿಸಿದರು. ಈ ವೇಳೆ ಸಂಘದ ರಾಜ್ಯಕಾರ್ಯದರ್ಶಿ ಕೆರಗೋಡು ಸೋಮಶೇಖರ್, ರಾಜ್ಯ ಕಾರ್ಯಕಾರಿಣಿ ಮಂಡಳಿ ಸದಸ್ಯ ಸಿ.ಎನ್.ಮಂಜುನಾಥ್, ಜಿಲ್ಲಾ ಉಪಾಧ್ಯಕ್ಷರಾದ ಬಿ.ಪಿ.ಪ್ರಕಾಶ್, ರವಿಸಾವಂದಿಪುರ, ಪ್ರಧಾನ ಕಾರ್ಯದರ್ಶಿ ನವೀನ್‌ಕುಮಾರ್, ಖಜಾಂಚಿ ನಂಜುಂಡಸ್ವಾಮಿ, ಸಹಕಾರ್ಯದರ್ಶಿ ಪಾಂಡವಪುರ ಜಯರಾಂ, ನಿಕಟಪೂರ್ವ ಕಾರ್ಯದರ್ಶಿ ಮೋಹನ್‌ರಾಜ್, ಕೆ.ಆರ್.ಪೇಟೆ ಸಂಘದ ಅಧ್ಯಕ್ಷ ಅಪ್ಪನಹಳ್ಳಿ ಅರುಣ್ ಮತ್ತಿತರರಿದ್ದರು.

ಮಾರ್ಗಸೂಚಿ ಕಡ್ಡಾಯ ಪಾಲನೆಗೆ ಡಿಸಿ ಸೂಚನೆ


ಮಂಡ್ಯ, ಮೇ 17–ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಗೆ ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟಿಸಿದ್ದು, ಕಡ್ಡಾಯವಾಗಿ ಮಾರ್ಗಸೂಚಿ ಪಾಲಿಸಬೇಕು ಎಂದು ಜಿಲ್ಲಾಧಿಕಾರಿ ಎಸ್.ಅಶ್ವತಿ ತಿಳಿಸಿದರು.

ತಮ್ಮ ಕಚೇರಿ ಸಭಾಂಗಣದಲ್ಲಿ ನಡೆದ ರಾಜಕೀಯ ಪಕ್ಷಗಳ ಸಭೆಯಲ್ಲಿ ಅವರು ಮಾತನಾಡಿದರು. ಜಿಲ್ಲೆಯಾದ್ಯಂತ ಜೂ. 17 ರವರೆಗೆ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದ್ದು, ಉಲ್ಲಂಘಿಸಿದರೆ ಕ್ರಮ ಕೈಗೊಳ್ಳಲಾಗುವುದು. ಜಿಲ್ಲೆಯಲ್ಲಿ ನ್ಯಾಯ ಸಮ್ಮತ, ಮುಕ್ತ, ಪಾರದರ್ಶಕ ಚುನಾವಣೆ ನಡೆಸಲು ಎಲ್ಲರೂ ಸಹಕರಿಸಬೇಕು ಎಂದರು.

ಎಡಿಸಿ ವಿ.ಆರ್.ಶೈಲಜ ಮಾತನಾಡಿ, ಮೈಸೂರು ಪ್ರಾದೇಶಿಕ ಆಯುಕ್ತರು ಮೇ 19 ರಂದು ಚುನಾವಣೆಗೆ ಅಧಿಸೂಚನೆ ಹೊರಡಿಸಲಿದ್ದಾರೆ. ನಾಮಪತ್ರ ಸಲ್ಲಿಕೆಗೆ ಮೇ 26 ಕೊನೆಯ ದಿನ. 27 ರಂದು ನಾಮಪತ್ರಗಳ ಪರಿಶೀಲನೆ. ನಾಮಪತ್ರ ಹಿಂಪಡೆಯಲು ಮೇ 30 ಕಡೆಯ ದಿನ. ಮತದಾನ ಜೂ.13 ರಂದು ಬೆಳಗ್ಗೆ 8 ರಿಂದ ಸಂಜೆ 4 ಗಂಟೆವರೆಗೆ ನಡೆಯಲಿದೆ. ಜೂ. 15 ರಂದು ಮತ ಎಣಿಕೆ ನಡೆಯಲಿದೆ ಎಂದರು.

ಮೇ 16 ರವರೆಗೆ ಮತದಾರರ ಪಟ್ಟಿಗೆ ಅರ್ಜಿ ಸಲ್ಲಿಸಿರುವವರ ಅರ್ಜಿಗಳ ಪರಿಶೀಲನೆ ನಡೆಸಲಾಗುತ್ತಿದೆ. ಮತದಾನಕ್ಕಾಗಿ 17 ಮೂಲ ಮತಗಟ್ಟೆಗಳಿದ್ದು, ಚುನಾವಣಾ ಆಯೋಗದ ನಿರ್ದೇಶನದಂತೆ 27 ಆಕ್ಸಿಲರಿ ಸೇರಿದಂತೆ ಒಟ್ಟು 44 ಮತಗಟ್ಟೆಗಳನ್ನು ಸ್ಥಾಪಿಸಲಾಗುವುದು. ಅಗತ್ಯವಿದ್ದಲ್ಲಿ ಹೆಚ್ಚುವರಿ ಆಕ್ಸಿಲರಿ ಮತಗಟ್ಟೆ ಸ್ಥಾಪಿಸಲಾಗುವುದು ಎಂದರು. ಸಭೆಯಲ್ಲಿ ವಿವಿಧ ಇಲಾಖೆ ಅಧಿಕಾರಿಗಳು ವಿವಿಧ ಪಕ್ಷದ ಮುಖಂಡರು ಇದ್ದರು.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಶನಿವಾರ	100.17 ಅಡಿ
ಒಳಹರಿವು	2,852 ಕ್ಯೂಸೆಕ್
ಹೊರಹರಿವು	1,812 ಕ್ಯೂಸೆಕ್

ಮುತಾಲಿಕ್, ಕಾಳಿಸ್ವಾಮಿಗೆ ಮಂಡ್ಯ ಪ್ರವೇಶ ನಿರ್ಬಂಧಕ್ಕೆ ಆಗ್ರಹ



ಮಂಡ್ಯ,ಮೇ.17(ಮೋಹನ್‌ರಾಜ್)– ಜಿಲ್ಲೆಯಲ್ಲಿ ಶಾಂತಿ, ಸಾಮರಸ್ಯ ಹಾಗೂ ಕೋಮು ಸೌಹಾರ್ದತೆ ಕಾಪಾಡುವ ನಿಟ್ಟಿನಲ್ಲಿ ಹೋರಾಟಗಾರರಾದ ಪ್ರಮೋದ್ ಮುತಾಲಿಕ್ ಹಾಗೂ ಕಾಳಿಸ್ವಾಮಿ ಅವರಂತಹ ವ್ಯಕ್ತಿಗಳಿಗೆ ಮಂಡ್ಯ ಜಿಲ್ಲೆ ಪ್ರವೇಶಿಸದಂತೆ ಜಿಲ್ಲಾಡಳಿತ ನಿರ್ಬಂಧ ಹೇರುವಂತೆ ಆಗ್ರಹಿಸಿ ರೈತ, ದಲಿತ ಹಾಗೂ ಪ್ರಗತಿಪರ ಸಂಘಟನೆಗಳ ವೇದಿಕೆ ಕಾರ್ಯಕರ್ತರು ಪ್ರತಿಭಟಿಸಿದರು.

ಡಿಸಿ ಕಚೇರಿ ಬಳಿ ಮಂಗಳವಾರ ಬೆಳಗ್ಗೆ ಜಮಾವಣೆಗೊಂಡ ಕಾರ್ಯಕರ್ತರು, ಮುತಾಲಿಕ್, ಕಾಳಿಸ್ವಾಮಿ ವಿರುದ್ಧ ಧಿಕ್ಕಾರ ಕೂಗಿದರು.

ಜಿಲ್ಲೆಯಲ್ಲಿ ಶಾಂತಿ ಸೌಹಾರ್ದತೆಗೆ ಧಕ್ಕೆ ತರುವಂತಹ ಕೆಲಸಗಳನ್ನು ಇತರ ಜಿಲ್ಲೆಯವರಾದ ಮುತಾಲಿಕ್ ಮತ್ತು ಕಾಳಿಸ್ವಾಮಿ ಸೇರಿದಂತೆ ಇತರರು ಮಾಡುತ್ತಿದ್ದಾರೆ. ಇದರಿಂದ ಸಾಮಾಜಿಕ ಬದುಕಲ್ಲಿ ಅಭದ್ರತೆ ಕಾಡುತ್ತಿದೆ. ಅಶಾಂತಿಯ ವಾತಾವರಣ ನಿರ್ಮಾಣವಾಗುತ್ತಿದೆ. ಆದ್ದರಿಂದ ಇಂತಹವರಿಗೆ ಜಿಲ್ಲೆ ಪ್ರವೇಶಿಸದಂತೆ ಶಾಶ್ವತವಾಗಿ ನಿರ್ಬಂಧ ಹೇರಬೇಕು ಎಂದು ಒತ್ತಾಯಿಸಿದರು.

ಶ್ರೀರಂಗಪಟ್ಟಣ ಮಸೀದಿ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿ ಬಂಧಿತರಾಗಿದ್ದ ರಿಷಿ ಕುಮಾರಸ್ವಾಮಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ. ನಿನ್ನೆ ಬೆಂಗಳೂರಿನಲ್ಲಿ ಶ್ರೀರಂಗಪಟ್ಟಣಕ್ಕೆ ಪಾದಯಾತ್ರೆ ಮೂಲಕ ತೆರಳಿ ಮಸೀದಿ ಇರುವ ಸ್ಥಳದಲ್ಲಿ ಆಂಜನೇಯಸ್ವಾಮಿ ದೇವಸ್ಥಾನ ನಿರ್ಮಿಸುತ್ತೇನೆ ಎಂದು ಹೇಳಿಕೆ ನೀಡುವ ಮೂಲಕ ಸಮಾಜದಲ್ಲಿ ಕೋಮು ಸಂಘರ್ಷಕ್ಕೆ ಕಾರಣವಾಗುತ್ತಿದ್ದು, ಮುತಾಲಿಕ್ ಕೂಡಾ ಇದಕ್ಕೆ ಹೊರತಾಗಿಲ್ಲ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಪ್ರತಿಪರ ಮುಖಂಡರಾದ ಡಾ.ಜಗದೀಶ್ ಕೊಪ್ಪ, ಗುರುಪ್ರಸಾದ್ ಕೆರಗೋಡು, ಸುನಂದಾ ಜಯರಾಂ, ಸಿ.ಕುಮಾರಿ, ಟಿ.ಎಲ್.ಕೃಷ್ಣೇಗೌಡ, ಟಿ.ಯಶ್ವಂತ್, ಮುದ್ದೇಗೌಡ, ಚಂದ್ರಶೇಖರ್, ಎಂ.ವಿ.ಕೃಷ್ಣ, ಮಂಜುನಾಥ್, ಎಂ.ಸಿ.ಶಿವರಾಜ್, ಜಿ.ಟಿ.ವೀರಪ್ಪ, ಅಮ್ಜದ್ ಪಾಷ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಜೆಡಿಎಸ್‌ಗೆ ಓವೈಸಿ ಸಾಥ್?

- ಕಾಂಗ್ರೆಸ್ ವೋಟ್‌ಬ್ಯಾಂಕ್ ಛಿದ್ರಕ್ಕೆ ಚಿಂತನೆ
- ಜೆಡಿಎಸ್ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಕಾರ್ಯತಂತ್ರ



ಬೆಂಗಳೂರು, ಮೇ 17 (ಕೆಎಂಶಿ)– ಕಾಂಗ್ರೆಸ್‌ಗೆ ಮಗ್ಗುಲ ಮುಳ್ಳಾಗಿರುವ ಆಲ್ ಇಂಡಿಯಾ ಮಜ್ಲೀಸ್–ಎ–ಇತ್ತೆಹಾದುಲ್ ಮುಸ್ಲಿಮೀನ್ ಪಕ್ಷದ (ಎಐಎಂಐಎಂ) ಅಸಾದುದ್ದೀನ್ ಓವೈಸಿ ಸೇರಿದಂತೆ ಅಲ್ಪಸಂಖ್ಯಾತರ ಪ್ರತಿನಿಧಿಸುವ ಕೆಲ ಪಕ್ಷಗಳು ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿಸಲು ಮುಂದಾಗಿವೆ ಎಂದು ಹೇಳಲಾಗುತ್ತಿದೆ.

ಈ ಸಂಬಂಧ ಹೈದರಾಬಾದಿನಲ್ಲಿ ಅಸಾದುದ್ದೀನ್ ನೇತೃತ್ವದಲ್ಲಿ ಇತ್ತೀಚೆಗೆ ಎರಡು–ಮೂರು ಸಭೆಗಳು ನಡೆದಿದ್ದು, 2023ರ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್‌ಗೆ ಅಗತ್ಯ ಬೆಂಬಲ ನೀಡಲು ಒಪ್ಪಿಗೆ ಸೂಚಿಸಿವೆ ಎನ್ನಲಾಗುತ್ತಿವೆ. ತೆರೆಮರೆಯಲ್ಲಿ ನಡೆದಿರುವ ಸಭೆಯಲ್ಲಿ ಜೆಡಿಎಸ್ ರಾಜ್ಯಾಧ್ಯಕ್ಷ ಸಿಎಂ ಇಬ್ರಾಹಿಂ, ವಿವಿಧ ಪಕ್ಷದ ಮುಖಂಡರು ಭಾಗವಹಿಸಿ ಮುಂದಿನ ಚುನಾವಣೆಯ ಕಾರ್ಯತಂತ್ರ ಹಾಗೂ ರೂಪುರೇಷೆಗಳನ್ನು ಹೆಣೆದಿದ್ದಾರೆ. ಜೆಡಿಎಸ್ ಗೆಲ್ಲುವಂತಹ ಕ್ಷೇತ್ರಗಳಲ್ಲಿ ಈ ಪಕ್ಷಗಳು ಪ್ರತ್ಯಕ್ಷ ಹಾಗೂ ಪರೋಕ್ಷ ಬೆಂಬಲ ನೀಡುವುದರ ಜೊತೆಗೆ ಪ್ರಚಾರ ಸಭೆಗಳನ್ನು ನಡೆಸುವ ಬಗ್ಗೆ ತಾತ್ವಿಕ ಒಪ್ಪಿಗೆಯನ್ನು ನೀಡಿದೆ. ಅಲ್ಪಸಂಖ್ಯಾತರು ಹೆಚ್ಚಿರುವ ಪ್ರದೇಶಗಳಲ್ಲಿ ಅಸಾದುದ್ದೀನ್ ಅವರೇ ಖುದ್ದು ಜೆಡಿಎಸ್ ಪರ ಮತಯಾಚಿಸಲಿದ್ದಾರೆ. ಅಷ್ಟೇ ಅಲ್ಲ ಅಲ್ಪಸಂಖ್ಯಾತ ಸಮುದಾಯದ ಕೆಲವು ಮುಖಂಡರು ಹಾಗೂ ರಾಜಕಾರಣಿಗಳನ್ನು ಜೆಡಿಎಸ್‌ಗೆ ಕರೆತರುವಲ್ಲಿ ಅಸಾದುದ್ದೀನ್ ಕಾರ್ಯಾರಂಭಿಸಿದ್ದಾರೆ ಎನ್ನಲಾಗುತ್ತಿದೆ.

ಜೆಡಿಎಸ್ ಯಾವ ಕ್ಷೇತ್ರದಲ್ಲಿ ಪ್ರಬಲವಾಗಿರುತ್ತದೆಯೋ ಅಂತಹ ಕಡೆ ಮಾತ್ರ ಓವೈಸಿ ಬೆಂಬಲ ನೀಡುತ್ತದೆ. ಉಳಿದ ಕೆಲವು ಕಡೆ ಪ್ರತ್ಯೇಕವಾಗಿ ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದ್ದಾರೆ. ಆ ಮೂಲಕ ಕಾಂಗ್ರೆಸ್ ಪಕ್ಷದ ಹಾದಿಗೆ ಮುಂದಿನ ಚುನಾವಣೆಯಲ್ಲೂ ಮುಳ್ಳಾಗಿ ಪರಿಣಮಿಸುವ ಸಾಧ್ಯತೆಗಳಿವೆ. ಈ ಎರಡು ಪಕ್ಷಗಳು ರಾಜಕೀಯ ಪ್ರವೇಶಿಸಿದ ಬಳಿಕ ಮುಸ್ಲಿಂ ಮತಗಳು ವಿಭಜನೆಯಾಗಿ ಕಾಂಗ್ರೆಸ್‌ನ ಭಾರೀ ಹಿನ್ನಡೆಗೆ ಕಾರಣವಾಗಿವೆ. ಪ್ರತಿ ಚುನಾವಣೆಯಲ್ಲೂ ಕಾಂಗ್ರೆಸ್‌ನ ಸಾಂಪ್ರದಾಯಿಕ ಮತಗಳನ್ನು ಈ ಎರಡು ಪಕ್ಷಗಳು ವಿಭಜಿಸಿ ಬಿಜೆಪಿಗೆ ಅನುಕೂಲ ಮಾಡಿಕೊಡುತ್ತಿವೆ ಎಂಬ ಆರೋಪವನ್ನು ಕಾಂಗ್ರೆಸ್ ಮಾಡುತ್ತಿದೆ. ಈಗಾಗಲೇ ಓವೈಸಿ ಪಕ್ಷ ಬಿಹಾರ, ಯುಪಿಯಲ್ಲಿ ನೆಲೆಯಾಗಿದೆ. ಹೀಗಾಗಿ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್‌ಗೆ ಮಾರಕವಾಗುವ ಎಲ್ಲಾ ಲಕ್ಷಣಗಳು ಗೋಚರಿಸುತ್ತಿವೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಜೆಡಿಎಸ್ ಅನ್ನು ಬಿಜೆಪಿಯ ಬಿ ಟೀಂ ಎಂದು ಆರೋಪಿಸಿದ್ದರು. ಇದರಿಂದ ಮುಸ್ಲಿಂ ಮತಗಳು ಜೆಡಿಎಸ್‌ಗೆ ದೊರೆತಿರಲಿಲ್ಲ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಅಲ್ಪಸಂಖ್ಯಾತರ ಮತಗಳು ಜೆಡಿಎಸ್‌ಗೆ ದೊರೆಯದ ಹಿನ್ನೆಲೆಯಲ್ಲಿ ಗೆಲ್ಲಬಹುದಾದ 21 ಕ್ಷೇತ್ರಗಳಲ್ಲಿ ಸೋಲನ್ನು ಅನುಭವಿಸುವಂತಾಗಿತ್ತು. ಮಾಜಿ ಸಿಎಂ ಕುಮಾರಸ್ವಾಮಿ ಪ್ರತಿನಿಧಿಸಿದ್ದ ರಾಮನಗರ ಕ್ಷೇತ್ರದಲ್ಲಿ ಸುಮಾರು 40 ಸಾವಿರದಷ್ಟು ಮುಸ್ಲಿಂ ಮತಗಳಿದ್ದರೂ ಜೆಡಿಎಸ್‌ಗೆ ಬಂದಿದ್ದ ಮುಸ್ಲಿಂ ಮತಗಳ ಸಂಖ್ಯೆ ಸಾವಿರ ದಾಟಿರಲಿಲ್ಲ. ಈ ಹಿನ್ನೆಲೆಯಲ್ಲಿ ಅಲ್ಪಸಂಖ್ಯಾತರ ಮತಗಳ ಮೇಲೆ ಕಣ್ಣಿಟ್ಟಿರುವ ಕುಮಾರಸ್ವಾಮಿ ನಿರಂತರವಾಗಿ ಅಲ್ಪಸಂಖ್ಯಾತರ ಧಾರ್ಮಿಕ ಮುಖಂಡರನ್ನು ಸಂಪರ್ಕಿಸಿ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡುತ್ತಿದ್ದಾರೆ. ಕಳೆದ ಚುನಾವಣೆಯಲ್ಲಾದಂತೆ ಮುಂದಿನ ಚುನಾವಣೆಯಲ್ಲಿ ಗೆಲ್ಲಲು ಅವಕಾಶವಿರುವ ಕಡೆಗಳಲ್ಲಿ ಜೆಡಿಎಸ್ ಬೆಂಬಲಿಸುವಂತೆ ಕೋರುತ್ತಿದ್ದಾರೆ. ಉಳಿದೆಡೆಗಳಲ್ಲಿ ನಿಮ್ಮ ನಿರ್ಧಾರ ತೆಗೆದುಕೊಳ್ಳಬಹುದು.

ಕಳೆದ ಬಾರಿಯಂತೆ ಜೆಡಿಎಸ್‌ನಿಂದ ದೂರ ಸರಿದರೆ, ಬಿಜೆಪಿಗೆ ಅನುಕೂಲವಾಗಲಿದೆ ಎಂಬುದನ್ನು ಮನವರಿಕೆ ಮಾಡಿಕೊಡುತ್ತಿದ್ದಾರೆ. ಹಳೇ ಮೈಸೂರು ಭಾಗದಲ್ಲಿ ಜೆಡಿಎಸ್‌ಗೆ ಕಾಂಗ್ರೆಸ್ ಪ್ರತಿಸ್ಪರ್ಧಿಯಾಗಿರುವುದರಿಂದ ಮುಂದಿನ ಚುನಾವಣೆಯಲ್ಲಿ ಕೈ ಹಿಡಿಯುವಂತೆ ಕೋರುತ್ತಿದ್ದಾರೆ. ಒಟ್ಟಿನಲ್ಲಿ ಅಲ್ಪಸಂಖ್ಯಾತ ಮತಗಳು ಜೆಡಿಎಸ್‌ನಿಂದ ದೂರ ಸರಿಯದಂತೆ ಹಾಗೂ ಕಾಂಗ್ರೆಸ್ ಕಟ್ಟಿಹಾಕುವ ಚುನಾವಣಾ ರಣತಂತ್ರವನ್ನು ಈ ನಾಲ್ಕುಪಕ್ಷಗಳು ಸಂಘಟನಾತ್ಮಕವಾಗಿ ರೂಪಿಸಿವೆ.

ರಘುನಾಥ್‌ರಾವ್ ಮಲ್ಕಾಪುರೆ ಹಂಗಾಮಿ ಸಭಾಪತಿ



ಬೆಂಗಳೂರು ಮೇ 17 (ಕೆಎಂಶಿ)–ಬಿಜೆಪಿ ಹಿರಿಯ ಸದಸ್ಯ ರಘುನಾಥ್‌ರಾವ್ ಮಲ್ಕಾಪುರೆ ಅವರನ್ನು ಹಂಗಾಮಿ ಸಭಾಪತಿಯಾಗಿ ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ನೇಮಿಸಿದ್ದಾರೆ. ವಿಧಾನಪರಿಷತ್ತಿನ ಸಭಾಪತಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಹೊರಟ್ಟಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ಸಭಾಪತಿ ಸ್ಥಾನ ಖಾಲಿ ಇತ್ತು. ಪರಿಷತ್ತಿನ ಕಾರ್ಯದರ್ಶಿಯವರು ಪರಿಷತ್ತಿನ ಸ್ಥಿತಿಗತಿಗಳ ಬಗ್ಗೆ ರಾಜ್ಯಪಾಲರಿಗೆ ನೀಡಿದ ವರದಿ ಆಧಾರದ ಮೇಲೆ ತಮ್ಮ ಅಧಿಕಾರ ಬಳಸಿ ಸಭಾಪತಿ ನೇಮಿಸಿದ್ದಾರೆ.

ಮೈಸೂರಲ್ಲಿ ಭಾರೀ ಮಳೆಗೆ ಕೊಚ್ಚಿ ಹೋದ ಸೇತುವೆ

ಒಂದನೇ ಪುಟದಿಂದ

ಕೆಲ ತಗ್ಗು ಪ್ರದೇಶ ಜಲಾವೃತಗೊಂಡು, ನಿವಾಸಿಗಳು ಪರದಾಡುವಂತಾಗಿದೆ. 25 ವರ್ಷಗಳ ನಂತರ ಕಳೆದ 6 ತಿಂಗಳ ಹಿಂದೆ ಬೋಗಾದಿ ಕೆರೆ ತುಂಬಿ ಕೋಡಿ ಬಿದ್ದಿದೆ. ಈ ನೀರು ಬೋಗಾದಿ ರಸ್ತೆ, ರಿಂಗ್ ರಸ್ತೆ ಜಂಕ್ಷನ್‌ನಲ್ಲಿ ಸಾಗರೋಪಾದಿಯಲ್ಲಿ ಹರಿದು ವಾಹನ ಸಂಚಾರಕ್ಕೆ ಅಡ್ಡಿಯುಂಟಾಗಿತ್ತು. ಇದೀಗ ಈ ಭಾರೀ ಮಳೆಗೆ ಪ್ರಸಕ್ತ ವರ್ಷವೇ ಎರಡನೇ ಬಾರಿ ಕೆರೆ ತುಂಬಿ ಕೊಡಿ ಬಿದ್ದು ಭಾರೀ ಅವಾಂತರವಾಗಿದೆ.

ಕೆರೆ ಭರ್ತಿಯಾದಾಗ ಹೆಚ್ಚುವರಿ ನೀರು ಲಿಂಗಾಂಬುದಿ ಕೆರೆಗೆ ಹರಿದು ಹೋಗಲು ಇರುವ 6 ಅಡಿ ಅಗಲದ ರಾಜಕಾಲುವೆ ಅಲ್ಲಲ್ಲಿ ಒತ್ತುವರಿಯಾಗಿರುವುದರಿಂದ ನೀರು ಸರಾಗವಾಗಿ ಹರಿಯಲು ಸಾಧ್ಯವಾಗದ ಕಾರಣ ನಾಗಲಿಂಗೇಶ್ವರ ಸ್ವಾಮಿ ದೇವಸ್ಥಾನದ ಪಕ್ಕದಲ್ಲಿರುವ ಸೇತುವೆ ಕೊಚ್ಚಿಹೋಗಿದ್ದು, ಸಂಪರ್ಕ ಕಡಿತವಾಗಿದೆ. ರಾಜಕಾಲುವೆ (ಸ್ಟಾರ್ಮ್ ವಾಟರ್ ಡ್ರೇನ್)ಯಲ್ಲಿ ಗಿಡ ಬೆಳೆದು ಹೂಳು ತುಂಬಿರುವುದು ನೀರು ಮುಂದೆ ಹರಿದು ಹೋಗಲಾರದೆ ಈ ಅವಾಂತರ ಸೃಷ್ಟಿಯಾಗಿದ್ದಲ್ಲದೇ ಕೆಲವರು ಒತ್ತುವರಿ ಮಾಡಿ ನಿರ್ಮಾಣ ಮಾಡಿರುವುದು ಹಾನಿಗೆ ಪ್ರಮುಖ ಕಾರಣ ಎಂದು ಸ್ಥಳೀಯ ನಿವಾಸಿಗಳು ಆರೋಪಿಸುತ್ತಿದ್ದಾರೆ.

ಕೆರೆಯಿಂದ ಹೆಚ್ಚುವರಿ ನೀರು ರಭಸದಿಂದ ಹರಿಯುತ್ತಿರುವುದನ್ನು ನೋಡಲು ಸುತ್ತಲಿನ ಸಾವಿರಾರು ಮಂದಿ ಜಮಾಯಿಸಿದ್ದರು. ಸ್ಥಳಕ್ಕಾಗಮಿಸಿದ ಪಾಲಿಕೆ ವಲಯಾಧಿಕಾರಿ ಸತ್ಯಮೂರ್ತಿ ಹಾಗೂ ಅಭಯ ತಂಡದ ಸಿಬ್ಬಂದಿ, ಬೋಗಾದಿ ಕೆರೆಯಿಂದ ಹೊರಬರುತ್ತಿದ್ದ ಹೆಚ್ಚುವರಿ ನೀರಿನ ರಭಸ ನಿಯಂತ್ರಿಸಿ, ರಾಜ ಕಾಲುವೆಯ ಕಿರಿದಾದ ಸ್ಥಳವನ್ನು ತೆರವು ಗೊಳಿಸಿ ನೀರು ಸರಾಗವಾಗಿ ಮುಂದೆ ಹರಿದು ಹೋಗುವಂತೆ ವ್ಯವಸ್ಥೆ ಮಾಡಿದರು.

ಸಂಪರ್ಕ ಕಡಿತಗೊಂಡಿರುವ ರಸ್ತೆಗೆ ಪರ್ಯಾಯವಾಗಿ ಪಕ್ಕದಲ್ಲಿ ಮತ್ತೊಂದು ರಸ್ತೆ ಇರುವುದರಿಂದ ಸಂಚಾರಕ್ಕೆ ಅಡ್ಡಿಯಾಗಲಿಲ್ಲ. ಆದರೆ, ತಗ್ಗು ಪ್ರದೇಶದಲ್ಲಿರುವ ಸಿಎಫ್‌ಟಿಆರ್‌ಐ, ಆನಂದನಗರ, ಆಶ್ರಯ ಬಡಾವಣೆಗಳಿಗೆ ನೀರು ನುಗ್ಗಿ ಭಾರೀ ಹಾನಿಯಾಯಿತು. ನಗರಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್, ಎಕ್ಸಿಕ್ಯುಟಿವ್ ಇಂಜಿನಿಯರ್ ಮಧುಸೂದನ ಸ್ಥಳಕ್ಕೆ ತೆರಳಿ ಪರಿಶೀಲಿಸಿ ನೀರು ಸರಾಗವಾಗಿ ಹರಿದು ಹೋಗುವಂತೆ ಜೆಸಿಬಿಗಳ ಮೂಲಕ ರಾಜಕಾಲುವೆಯಲ್ಲಿ ಅಡ್ಡಿಯಾಗಿದ್ದ ಅಡೆತಡೆಗಳನ್ನು ತೆರವುಗೊಳಿಸಿದರು.

ಇದರಿಂದಾಗಿ ಮಧ್ಯಾಹ್ನದ ವೇಳೆಗೆ ಬಡಾವಣೆಗಳಿಗೆ ನುಗ್ಗುತ್ತಿದ್ದ ನೀರು ಕಡಿಮೆಯಾಯಿತು. ಆದರೆ ಅದಾಗಲೇ ಮಳೆ ನೀರನ್ನು ಹೊರ ಹಾಕಲು ಬಡಾವಣೆಗಳ ನಿವಾಸಿಗಳು ಹರಸಾಹಸ ಪಡುತ್ತಿದ್ದರು.

ಅಲ್ಲಲ್ಲಿ ಅವಾಂತರ: ಸೋಮವಾರ ರಾತ್ರಿ ಸುರಿದ ಧಾರಾಕಾರ ಮಳೆಯಿಂದಾಗಿ ತಗ್ಗು ಪ್ರದೇಶಗಳು ಜಲಾವೃತಗೊಂಡು ಅಲ್ಲಲ್ಲಿ ಮರ, ವಿದ್ಯುತ್‌ಕಂಬ, ಟ್ರಾನ್ಸ್‌ಫಾರ್ಮರ್‌ಗಳು ಉರುಳಿಬಿದ್ದು, ಭಾರೀ ಅವಾಂತರವೇ ಸೃಷ್ಟಿಯಾಗಿತ್ತು. ಕುವೆಂಪುನಗರದ ಆರ್‌ಎಂಪಿ ಕ್ವಾರ್ಟರ್ಸ್ ಬಳಿ ಕೆಹೆಚ್‌ಬಿ ಕಾಲೋನಿಯಲ್ಲಿ ಟ್ರಾನ್ಸ್‌ಫಾರ್ಮರ್‌ವೊಂದು ನೆಲಕ್ಕುರುಳಿದೆ.

ವಿದ್ಯಾರಣ್ಯಪುರಂ 8ನೇ ಅಡ್ಡ ರಸ್ತೆಯಲ್ಲಿ ಮನೆ ಮುಂದೆ ನಿಂತಿದ್ದ ಕಾರಿನ ಮೇಲೆ ಮರದ ರೆಂಬೆ ಮುರಿದು ಬಿದ್ದು ಭಾರೀ ನಷ್ಟವಾಗಿದ್ದರೆ, ನಜರ್‌ಬಾದಿನ ಎಸ್ಪಿ ಕಚೇರಿ ಹಿಂಭಾಗ ಮರವೊಂದು ಬುಡ ಸಮೇತ ರಸ್ತೆಗೆ ಅಡ್ಡಲಾಗಿ ಉರುಳಿಬಿದ್ದಿದೆ. ಡಾ.ರಾಜ್‌ಕುಮಾರ್ ರಸ್ತೆಯ ತ್ರಿವೇಣಿ ಸರ್ಕಲ್ ಬಳಿಯೂ ಭಾರೀ ಗಾತ್ರದ ಮರದ ರೆಂಬೆ ಉರುಳಿ ಬಿದ್ದಿದೆ. ಅದೇ ರೀತಿ ನಾಯ್ಡುನಗರ, ಬನ್ನೂರು ರಸ್ತೆಯ ಹಾಲು ಒಕ್ಕೂಟದ ಹೊಸ ಕಟ್ಟಡದ ಸಮೀಪ ಮನೆಗಳಿಗೆ ನೀರು ನುಗ್ಗಿ ನಿವಾಸಿಗಳು ರಾತ್ರಿಯಿಡೀ ಪರದಾಡುವಂತಾಯಿತು. ಭಾರತ್ ನಗರದ ಗುಡಿಸಲು ನಿವಾಸಿಗಳು ಕಾಮನ ಕೆರೆಹುಂಡಿ ಬಳಿಯ ಅಮೃತ ಬಡಾವಣೆ ನೆಲಮಹಡಿ ಮನೆಗಳಲ್ಲಿ ವಾಸಿಸುವವರು ಮಳೆಯಿಂದ ತೊಂದರೆ ಅನುಭವಿಸುತ್ತಿದ್ದಾರೆ.





ಶಾಶ್ವತ ಪರಿಹಾರ

ಹೂಳು ತುಂಬಿದೆ. ಇಂದಿನ ಪರಿಸ್ಥಿತಿಗನುಗುಣವಾಗಿ ಚರಂಡಿಯನ್ನು ಅಗಲೀಕರಿಸಬೇಕಾಗಿದೆ. ಅದಕ್ಕೆ ಸುಮಾರು ಐದಾರು ಕೋಟಿ ರೂ. ಅನುದಾನ ಬೇಕಾಗುತ್ತದೆ. ಯೋಜನೆ ಸಿದ್ಧಪಡಿಸಿ ಕಾಮಗಾರಿ ಮಾಡುತ್ತೇವೆ ಎಂದು ಲಕ್ಷ್ಮೀಕಾಂತರೆಡ್ಡಿ ತಿಳಿಸಿದರು.

ಚರಂಡಿ ಅಗಲಗೊಳಿಸಿದಲ್ಲಿ ಬೋಗಾದಿ ಕೆರೆ ನೀರು ದಟ್ಟಗಳ್ಳಿ ಮೂಲಕ ಚರಂಡಿಯಲ್ಲಿ ಸರಾಗವಾಗಿ ಹರಿದು ಲಿಂಗಾಂಬುದಿ ಕೆರೆ ಸೇರಲಿದ್ದು, ಹಾನಿ ತಪ್ಪುತ್ತದೆ. ಭಾರೀ ಮಳೆ ಸುರಿದಾಗಲೆಲ್ಲಾ ಬೋಗಾದಿ ಬಳಿ ಈ ಅವಾಂತರ ಉಂಟಾಗುತ್ತಿದೆ. ಈ ಸಮಸ್ಯೆ ಪುನರಾವರ್ತನೆಂಯಾಗುತ್ತಿದ್ದರೂ ಪಾಲಿಕೆಯಾಗಲೀ, ಜಿಲ್ಲಾಡಳಿತವಾಗಲೀ ಕ್ರಮ ತೆಗೆದುಕೊಳ್ಳುತ್ತಿಲ್ಲ, ರಾಜಕಾಲುವೆ ಒತ್ತುವರಿ ತೆರವುಗೊಳಿಸದಿರುವುದು ಈ ಅವಾಂತರಕ್ಕೆ ಕಾರಣವಾಗಿದ್ದು, ಜನಪ್ರತಿನಿಧಿಗಳೂ ಸಹ ಶಾಶ್ವತ ಪರಿಹಾರಕ್ಕೆ ಗಮನ ಹರಿಸುತ್ತಿಲ್ಲ ಎಂದು ಸ್ಥಳೀಯ ನಿವಾಸಿಗಳು ಆರೋಪಿಸಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ಶೇ.53ರಷ್ಟು ಮಕ್ಕಳು ಶಾಲೆಗೆ ಹಾಜರು



ಮೈಸೂರು, ಮೇ 17(ಆರ್‌ಕೆ)– ಕಳೆದ ಮೂರು ದಿನಗಳಿಂದ ಧಾರಾಕಾರ ಮಳೆ ಸುರಿಯುತ್ತಿರುವುದರಿಂದ ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಕಡಿಮೆಯಾಗಿದೆ.

ಎರಡು ದಿನದ ಹಿಂದೆ, ಮೇ 16ರಿಂದ ಶಾಲೆಗಳು ಆರಂಭವಾಗಿದ್ದು, ಮಳೆ ನಡುವೆಯೂ ಮೊದಲ ದಿನ ಶೇ.60ರಷ್ಟು ಮಕ್ಕಳು ಉತ್ಸಾಹದಿಂದ ಹಾಜರಾಗಿದ್ದರು. ಆದರೆ ನಿರಂತರ ಮಳೆ ಮುಂದುವರೆದ ಕಾರಣ ಎರಡನೇ ದಿನವಾದ ಇಂದು ಪೋಷಕರು ಮಕ್ಕಳನ್ನು ಶಾಲೆಗೆ ಕಳಹಿಸಲು ಹಿಂದೇಟು ಹಾಕುತ್ತಿದ್ದಾರೆ.

1ರಿಂದ 5ನೇ ತರಗತಿವರೆಗೆ ಶೇ. 52 ಮತ್ತು 6ರಿಂದ 10ನೇ ತರಗತಿವರೆಗೆ ಶೇ. 54ರಷ್ಟು ಮಕ್ಕಳು ಮಾತ್ರ ಶಾಲೆಗೆ ಹಾಜರಾಗಿದ್ದರು. ಜಿಲ್ಲೆಯಾದ್ಯಂತ 1ನೇ ತರಗತಿಗೆ ಇಂದು 12,126 ಮಕ್ಕಳು ದಾಖಲಾಗಿದ್ದಾರೆ (New Admission) ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್ ತಿಳಿಸಿದ್ದಾರೆ.

ಮೋಡ ಕವಿದ ವಾತಾವರಣ ಹಾಗೂ ಧಾರಾಕಾರ ಮಳೆ ಸುರಿಯುತ್ತಿರುವುದರಿಂದ ಬಹುತೇಕ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂದೇಟು ಹಾಕುತ್ತಿದ್ದಾರೆ. ಅಲ್ಲದೇ ಮಳೆ ನಿಲ್ಲುವವರೆಗೆ ಶಾಲೆಗೆ ರಜೆ ನೀಡುವುದು ಒಳಿತು ಎಂದು ಅಭಿಪ್ರಾಯಪಡುತ್ತಿದ್ದಾರೆ. ಹವಾಮಾನದ ಹಿನ್ನೆಲೆಯಲ್ಲಿ ಇಂದು ಹಾಜರಾತಿಯಲ್ಲಿ ಕುಸಿತವಾಗಿರಬಹುದೆಂದು ತಿಳಿಸಿದರು. ಸ್ಥಳೀಯ ಹವಾಮಾನ ಮಾಪನ ಸಂಸ್ಥೆಯಿಂದ ಮಳೆ ಮುನ್ಸೂಚನೆ ಬಗ್ಗೆ ಮಾಹಿತಿ ತರಿಸಿಕೊಂಡು ಒಂದು ವೇಳೆ ಮಳೆ ಮುಂದುವರಿಯುತ್ತದೆ ಎಂದು ತಿಳಿದಲ್ಲಿ ನಾವು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಸಿಇಓ ಅವರಿಗೆ ಪತ್ರ ಬರೆದು ಪ್ರಸ್ತಾವನೆ ಸಲ್ಲಿಸುತ್ತೇವೆ. ಶಾಲೆಗಳಿಗೆ ರಜೆ ನೀಡುವ ಬಗ್ಗೆ ಅಂತಿಮವಾಗಿ ಅವರು ನಿರ್ಧರಿಸುವರು ಎಂದು ರಾಮಚಂದ್ರರಾಜೇ ಅರಸ್ ತಿಳಿಸಿದರು.

Tech Bee ಯೋಜನೆಗೆ ಅಭ್ಯರ್ಥಿಗಳ ಆಯ್ಕೆಗಾಗಿ ಕಾರ್ಯಾಗಾರ

ಮೈಸೂರು,ಮೇ 17(ಎಂಕೆ)–ಕರ್ನಾಟಕ ಕೌಶಲಾಭಿವೃದ್ಧಿ ನಿಗಮ ಹಾಗೂ ಹೆಚ್‌ಸಿಎಲ್ ಟೆಕ್ನಾಲಜೀಸ್ ಸಂಸ್ಥೆ ಸಂಯುಕ್ತಾಶ್ರದಲ್ಲಿ ನಡೆಯುವ Tech Bee ಯೋಜನೆಗೆ ಅರ್ಹ ಅಭ್ಯರ್ಥಿಗಳ ಆಯ್ಕೆ ಹಿನ್ನೆಲೆಯಲ್ಲಿ 2020–21ನೇ ಸಾಲಿನ ದ್ವಿತೀಯ ಪಿಯುಸಿಯಲ್ಲಿ ಗಣಿತ ಅಥವಾ ವ್ಯವಹಾರ ಗಣಿತ ಅಧ್ಯಯನ ನಡೆಸಿರುವ ಹಾಗೂ 2021–22ನೇ ಸಾಲಿನಲ್ಲಿ ವಾರ್ಷಿಕ ಪರೀಕ್ಷೆಗೆ ಹಾಜರಾಗಿರುವ ವಿದ್ಯಾರ್ಥಿಗಳಿಗೆ ಮೇ 21ರಂದು ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಅಂದು ಬೆಳಗ್ಗೆ 9ರಿಂದ ಸಂಜೆ 5ರವರೆಗೆ ಕಾರ್ಯಾಗಾರ ನಡೆಯಲಿದೆ. ಕಾರ್ಯಾಗಾರದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿ, ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳಿಗೆ 12 ತಿಂಗಳ ತರಬೇತಿ ನಂತರ ಹೆಚ್‌ಸಿಎಲ್ ಟೆಕ್ನಾಲಜೀಸ್‌ನಲ್ಲಿ ಕೆಲಸ ಹಾಗೂ ಪ್ರತಿಷ್ಠಿತ ವಿವಿಗಳಲ್ಲಿ ಉನ್ನತ ಶಿಕ್ಷಣ ಪಡೆಯುವ ಅವಕಾಶ ನೀಡಲಾಗುತ್ತದೆ. ದ್ವಿತೀಯ ಪಿಯುಸಿಯಲ್ಲಿ ಶೇ.60ರಷ್ಟು ಹಾಗೂ ಗಣಿತ ವಿಷಯದಲ್ಲಿ ಶೇ.50ರಷ್ಟು ಅಂಕ ಪಡೆದಿರುವ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು. 2021–22ನೇ ಸಾಲಿನ ವಾರ್ಷಿಕ ಪರೀಕ್ಷೆಗೆ ಹಾಜರಾಗಿರುವ ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಯಲ್ಲಿ ಶೇ.60 ರಷ್ಟು ಹಾಗೂ ಗಣಿತ/ವ್ಯವಹಾರ ಗಣಿತದಲ್ಲಿ ಕನಿಷ್ಟ ಶೇ.50ರಷ್ಟು ಅಂಕ ಪಡೆದಿರಬೇಕು. ಆಸಕ್ತರು 10ನೇ ತರಗತಿ ಅಂಕಪಟ್ಟಿ, ಆಧಾರ ಕಾರ್ಡ್, ಪ್ರಥಮ ಅಥವಾ ದ್ವಿತೀಯ ಪಿಯುಸಿ ಅಂಕಪಟ್ಟಿಯ ನಕಲು ಪ್ರತಿಗಳೊಂದಿಗೆ https://bit.ly/hcltechbeeworkshop ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು. ಮಾಹಿತಿಗೆ ಮೊ.ನಂ. 7019307267, 7619292747, 9845454471 ಸಂಪರ್ಕಿಸಬಹುದು ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಸಿ.ಜಗನ್ನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಟ್ಟು ಬಿಡದೇ ಕಾಡುತ್ತಿದೆ ಮಳೆ!

ಜನರು ಹೈರಾಣ



ಚಾಮರಾಜನಗರ, ಮೇ 17– ಜಿಲ್ಲೆಯಲ್ಲಿ ಕಳೆದ ನಾಲ್ಕೈದು ದಿನಗಳಿಂದ ಮಳೆಯಾಗುತ್ತಿದ್ದು, ಮಂಗಳವಾರ ಮಧ್ಯಾಹ್ನದಿಂದ ರಾತ್ರಿಯವರೆಗೂ ಬಿಟ್ಟು ಬಿಡದೇ ಸುರಿಯುತ್ತಿರುವ ಮಳೆಯಿಂದ ಜಿಲ್ಲೆಯ ನಾಗರಿಕರು ಹೈರಾಣರಾಗಿದ್ದಾರೆ.

ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಹನೂರು ಹಾಗೂ ಗುಂಡ್ಲುಪೇಟೆ ತಾಲೂಕು ಕೇಂದ್ರಗಳು ಸೇರಿದಂತೆ ಜಿಲ್ಲಾದ್ಯಂತ ನಿರಂತರ ಮಳೆಯಾಗುತ್ತಿದೆ. ಸೋಮವಾರ ರಾತ್ರಿಯಿಂದ ಬೆಳಗ್ಗಿನ ಜಾವದವರೆಗೆ ಸುರಿದ ಮಳೆ, ಮಂಗಳವಾರ ಬೆಳಗ್ಗೆ ಸ್ವಲ್ಪ ಬಿಡುವು ನೀಡಿತ್ತಾದರೂ, ಮಧ್ಯಾಹ್ನದ ವೇಳೆ ಮೋಡ ಕವಿದ ವಾತಾವರಣ ನಿರ್ಮಾಣವಾಗಿ ತುಂತುರು ಮಳೆ ಆರಂಭವಾಯಿತು. ಸಂಜೆ ವೇಳೆಗೆ ಧಾರಾಕಾರವಾಗಿ ಸುರಿಯಿತು.

ಶಾಲೆ ಮಕ್ಕಳ ಪರದಾಟ: ಸೋಮವಾರ(ಮೇ 16)ದಿಂದ ಜಿಲ್ಲಾದ್ಯಂತ ಶಾಲೆಗಳು ಪ್ರಾರಂಭವಾಗಿದ್ದು, ಶಾಲೆ ಬಿಡುವ ವೇಳೆಗೆ ಮಳೆ ಬೀಳುತ್ತಿದ್ದ ಕಾರಣ ವಿದ್ಯಾರ್ಥಿಗಳು ಸಹ ಮನೆಗೆ ತೆರಳಲು ಸಾಕಷ್ಟು ಪರದಾಡಬೇಕಾಯಿತು. ಪ್ರಮುಖ ರಸ್ತೆಗಳನ್ನು ಹೊರತುಪಡಿಸಿ, ಉಳಿದ ಸಣ್ಣ, ಪುಟ್ಟ ರಸ್ತೆಗಳು ಕೆಸರುಮಯವಾದ್ದರಿಂದ ಕಾಲ್ನಡಿಗೆಯಲ್ಲಿ ಹೋಗುವವರು, ವಾಹನಗಳಲ್ಲಿ ತೆರಳುವವರು ಸಾಕಷ್ಟು ಕಿರಿಕಿರಿ ಅನುಭವಿಸಬೇಕಾಯಿತು.

ವ್ಯಾಪಾರಸ್ಥರಿಗೂ ತೊಂದರೆ: ಜಿಟಿಜಿಟಿ ಮಳೆ ವ್ಯಾಪಾರಸ್ಥರ ವಹಿವಾಟಿನ ಮೇಲೂ ಪರಿಣಾಮ ಬೀರಿದೆ. ಅದರಲ್ಲೂ ಬೀದಿ ಬದಿ ವ್ಯಾಪಾರಿಗಳಿಗೆ ಮೂರ್ನಾಲ್ಕು ದಿನದಿಂದ ಸಾಕಷ್ಟು ನಷ್ಟವಾಗಿದೆ. ಜನ ಸಂಚಾರ ಹೆಚ್ಚು ಇಲ್ಲದಿರುವುದು ಒಂದು ರೀತಿಯಲ್ಲಿ ವ್ಯಾಪಾರದ ಮೇಲೆ ಪರಿಣಾಮ ಬೀರಿದರೆ, ರಸ್ತೆ ಬದಿಯಲ್ಲಿ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸುತ್ತಿದ್ದವರು ತೊಂದರೆಗೆ ಸಿಲುಕಿದ್ದಾರೆ. ಅದೇ ರೀತಿ ಕಾರ್ಮಿಕರಿಗೂ ಇದೊಂದು ರೀತಿಯಲ್ಲಿ ಹೊಡೆತ ನೀಡಿದೆ.

ಬೈಕ್‌ಗೆ ಕಾರು ಡಿಕ್ಕಿ: ಓರ್ವ ಸಾವು



ಬೇಗೂರು, ಮೇ 17(ಕಿರಣ್)– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲೇ ಸಾವನ್ನಪ್ಪಿದ್ದು, ಹಿಂಬದಿಯ ಸವಾರನ ಕಾಲು ಮುರಿದಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ರಾಘವಾಪುರ ಸಮೀಪ ಮಂಗಳವಾರ ನಡೆದಿದೆ.

ಚಾಮರಾಜನಗರ ತಾಲೂಕಿನ ಬೆಂಡರವಾಡಿ ಗ್ರಾಮದ ಮಹೇಶ್ ಪುತ್ರ ಮನು(23) ಸಾವನ್ನಪ್ಪಿದ ಯುವಕ. ಹಿಂಬದಿ ಸವಾರ ಗುಂಡ್ಲುಪೇಟೆ ನಿವಾಸಿ ನಾಗರಾಜುಗೆ ಕಾಲುಗಳು ಮುರಿದಿದ್ದು, ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಮನು ಹಾಗೂ ನಾಗರಾಜು ಸಂಬಂಧಿಗಳಾಗಿದ್ದು, ಗುಂಡ್ಲುಪೇಟೆಯಿಂದ ಮೈಸೂರಿಗೆ ಬೈಕ್‌ನಲ್ಲಿ ಹೋಗುತ್ತಿದ್ದಾಗ ರಾಘವಾಪುರದ ಬಳಿ ಎದುರಿನಿಂದ ಬಂದ ಕೇರಳ ಮೂಲದ ಕಾರು ಡಿಕ್ಕಿ ಹೊಡೆದಿದೆ. ಪರಿಣಾಮ ಮನು ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾನೆ. ಸ್ಥಳಕ್ಕೆ ಸರ್ಕಲ್ ಇನ್ಸ್‌ಪೆಕ್ಟರ್ ಕಿರಣ್‌ಕುಮಾರ್, ಸಬ್ ಇನ್ಸ್‌ಪೆಕ್ಟರ್ ಜಗದೀಶ್ ಧೂಳಶೆಟ್ಟಿ, ಚಾಲಕ ನಾಗೇಂದ್ರ ಭೇಟಿ ನೀಡಿ ಪರಿಶೀಲಿಸಿದರು. ಈ ಸಂಬಂಧ ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೇ 21, 22 ರಂದು ಚಾ.ನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠದಲ್ಲಿ

ಅನುಭವ ಮಂಟಪ ಉದ್ಘಾಟನೆ



- 2 ದಿನ ಮಠದ ಆವರಣದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮ
- ಸುತ್ತೂರು ಶ್ರೀ, ಸಿದ್ದಗಂಗಾ ಶ್ರೀ ಅವರಿಂದ ಅನುಭವ ಮಂಟಪ ಉದ್ಘಾಟನೆ



ಚಾಮರಾಜನಗರ, ಮೇ 17– ನಗರದ ಸಿದ್ಧಮಲ್ಲೇಶ್ವರ ವಿರಕ್ತ ಮಠದ ಆವರಣದಲ್ಲಿ ಮೇ 21 ಮತ್ತು 22ರಂದು ಬಸವರಾಜ ಮಹಾಸ್ವಾಮೀಜಿ ಜನ್ಮ ಶತಮಾನೋತ್ಸವ, ಸಿದ್ಧಬಸವರಾಜ ಸ್ವಾಮೀಜಿ ಅವರ ಸಂಸ್ಮರಣೋತ್ಸವ ಹಾಗೂ ಬಸವರಾಜ ಸ್ವಾಮೀಜಿ ಅವರ ಅನುಭವ ಮಂಟಪ ಉದ್ಘಾಟನೆ, ಬಸವೇಶ್ವರ ಪುತ್ಥಳಿ ಅನಾವರಣ, ಬಸವ ಜಯಂತ್ಯುತ್ಸವ ಕಾರ್ಯಕ್ರಮ ನಡೆಯಲಿದೆ ಎಂದು ಸಿದ್ಧಮಲ್ಲೇಶ್ವರ ವಿರಕ್ತ ಮಠದ ಚನ್ನಬಸವ ಸ್ವಾಮೀಜಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 21ರಂದು ಬೆಳಗ್ಗೆ ಪೂಜ್ಯರ ಗದ್ದುಗೆಗೆ ಬಿಲ್ವಾರ್ಚನೆ, ಮಹಾಮಂಗಳಾರತಿ, ಷಟಸ್ಥಳ ಧ್ವಜಾರೋಹಣ, ಧರ್ಮ ಸಂದೇಶ, ಅನುಭವ ಮಂಟಪಕ್ಕೆ ಕಳಸಾರೋಹಣ ವಿವಿಧ ಮಠಾಧೀಶರುಗಳಿಂದ ನಡೆಯಲಿದೆ ಎಂದು ವಿವರಿಸಿದರು.

ಮಧ್ಯಾಹ್ನ 2 ಗಂಟೆಗೆ ಗ್ರಾಮಾಂತರ ಬಸವ ಜಯಂತ್ಯುತ್ಸವದ ಉದ್ಘಾಟನೆ ನಡೆಯಲಿದ್ದು, ವಿಶ್ವಗುರು ಬಸವಣ್ಣ ಮತ್ತು ಶ್ರೀಮಠದ ಪೂಜ್ಯರುಗಳ ಭಾವಚಿತ್ರ ಮೆರವಣಿಗೆ ವಿವಿಧ ಜಾನಪದ ಕಲಾತಂಡಗಳೊಂದಿಗೆ, ನಗರದ ಪ್ರಮುಖ ಬೀದಿಗಳಲ್ಲಿ ನಡೆಯಲಿದೆ. ಸಂಜೆ ಹಾಸ್ಯೋತ್ಸವ ಮತ್ತು ಭಕ್ತಿಗೀತೆ ಹಾಗೂ ಹರಿಕಥೆ ಕಾರ್ಯಕ್ರಮ ನಡೆಯಲಿದೆ ಎಂದರು.

ಮೇ 22ರಂದು ಬೆಳಗ್ಗೆ ಪೂಜ್ಯರ ಗದ್ದುಗೆಗೆ ಬಿಲ್ವಾರ್ಚನೆ, ಮಹಾಮಂಗಳಾರತಿ, ಷಟಸ್ಥಳ ಧ್ವಜಾರೋಹಣ, ಗುರುಗಳ ಪಾದಪೂಜೆ ನಂತರ ಊಟಿ ಭಕ್ತವೃಂದದಿಂದ ವಚನ ಗಾಯನ ನಡೆಯಲಿದೆ. ಬೆಳಗ್ಗೆ 10 ಗಂಟೆಗೆ ಬಸವರಾಜ ಸ್ವಾಮೀಜಿ ಅವರ ಅನುಭವ ಮಂಟಪವನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಗಂಗಾ ಮಠದ ಸಿದ್ದಲಿಂಗ ಮಹಾಸ್ವಾಮೀಜಿ ಉದ್ಘಾಟನೆ ಮಾಡಲಿದ್ದಾರೆ ಎಂದರು.



ಅಮೃತ ಶಿಲೆಯಿಂದ ನಿರ್ಮಿಸಿರುವ ಬಸವೇಶ್ವರರ ಪುತ್ಥಳಿಯನ್ನು ಬೆಟ್ಟದಪುರ ಮಠದ ಚನ್ನಬಸವದೇಶಿಕೇಂದ್ರ ಸ್ವಾಮೀಜಿ, ಪಡಗೂರು ಅಡವಿ ಮಠದ ಶಿವಲಿಂಗೇಂದ್ರ ಸ್ವಾಮೀಜಿ ಅನಾವರಣಗೊಳಿಸಲಿದ್ದಾರೆ ಎಂದರು. ಆ ನಂತರ ಧಾರ್ಮಿಕ ಸಭೆ ನಡೆಯಲಿದ್ದು, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ, ಕನಕಪುರ ದೇಗುಲ ಮಠದ ಮುಮ್ಮಡಿ ನಿರ್ವಾಣ ಸ್ವಾಮೀಜಿ, ದೇವನೂರು ಮಠದ ಮಹಾಂತ ಸ್ವಾಮೀಜಿ, ಮೈಸೂರು ಕುಂದೂರು ಮಠದ ಶರತ್ ಚಂದ್ರ ಸ್ವಾಮೀಜಿ, ಸೋಮಹಳ್ಳಿ ಮಠದ ಸಿದ್ದಮಲ್ಲ ಸ್ವಾಮೀಜಿ, ಸಾಲೂರು ಮಠದ ಗುರು ಸ್ವಾಮೀಜಿ, ವಾಟಾಳು ಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಮರಿಯಾಲ ಮಠದ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ, ಹರವೆ ವಿರಕ್ತ ಮಠದ ಸರ್ಪಭೂಷಣ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದು, 200ಕ್ಕೂ ಹೆಚ್ಚು ಮಠದ ಹರಗುರು ಚರಮೂರ್ತಿ ಭಾಗವಹಿಸಲಿದ್ದಾರೆ ಎಂದರು.

ರಾತ್ರಿ 9 ಗಂಟೆಗೆ ಸಿದ್ದಮಲ್ಲೇಶ್ವರ ಕಲಾ ಬಳಗದ ವತಿಯಿಂದ ಸುತ್ತೂರು ಗುರುಶಾಂತಪ್ಪನವರ ವಿರಚಿತ ಶರಣ ತತ್ವ ಸಾರುವ ಪ್ರಭುಲಿಂಗಲೀಲೆ ನಾಟಕ ನಡೆಯಲಿದೆ ಎಂದರು. ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ. ಎಲ್ಲರ ಸಹಕಾರದಿಂದ ಈ ಕಾರ್ಯಕ್ರಮ ನಡೆಯಲಿದ್ದು, ಸುಮಾರು 20 ಸಾವಿರಕ್ಕೂ ಹೆಚ್ಚು ಭಕ್ತರು ಭಾಗವಹಿಸಲಿದ್ದಾರೆ. 2 ದಿನಗಳ ನಿರಂತರ ದಾಸೋಹದ ವ್ಯವಸ್ಥೆ ಮಾಡಲಾಗಿದೆ ಎಂದರು.

ಮೇ 20, ಗ್ರಾಪಂ ಉಪಚುನಾವಣೆ: ಸಂತೆ, ಜಾತ್ರೆ ನಿಷೇಧ

ಚಾಮರಾಜನಗರ, ಮೇ 17– ಜಿಲ್ಲೆಯಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ ಹಾಗೂ ಖಾಲಿ ಇರುವ ಗ್ರಾಮ ಪಂಚಾಯಿತಿ ಸದಸ್ಯ ಸ್ಥಾನಗಳಿಗೆ ಮೇ 20ರಂದು ಉಪ ಚುನಾವಣೆ ನಡೆಯಲಿದ್ದು, ಶಾಂತಿ ಹಾಗೂ ಸುವ್ಯವಸ್ಥೆ ಕಾಪಾಡಲು ಮತದಾರರು ಮತ ಚಲಾಯಿಸಲು ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಚುನಾವಣೆ ನಡೆಯುವ ಚಾಮರಾಜನಗರ ತಾಲೂಕಿನ ದೇಮಹಳ್ಳಿ ಹಾಗೂ ಮಸಣಾಪುರ ಮತ್ತು ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಪಂ ವ್ಯಾಪ್ತಿಯಲ್ಲಿ ಉಪ ಚುನಾವಣೆ ನಡೆಯಲಿದ್ದು, ಅಂದು ಬೆಳಗ್ಗೆ 5ರಿಂದ ಸಂಜೆ 6 ಗಂಟೆಯವರೆಗೆ ಯಾವುದೇ ಸಂತೆ ಮತ್ತು ಎಲ್ಲಾ ತರಹದ ಜಾತ್ರೆಗಳನ್ನು ನಿಷೇಧಿಸಿದೆ ಎಂದು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಆದೇಶದಲ್ಲಿ ತಿಳಿಸಿದ್ದಾರೆ.



ಗುಂಡ್ಲುಪೇಟೆ ತಾಲೂಕಿನ ತೊಂಡವಾಡಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಹೂ, ಸಿಹಿ ವಿತರಿಸುವುದರ ಮೂಲಕ ಸಂಭ್ರಮದಿಂದ ಶಿಕ್ಷಕರು ಹಾಗೂ ಗ್ರಾಮಸ್ಥರು ಸ್ವಾಗತಿಸಿದರು.

ಸಮಾಜ ಸೇವೆಯಿಂದ ಮನಸ್ಸಿಗೆ ತೃಪ್ತಿ: ಡಿವೈಎಸ್‌ಪಿ

ಚಾಮರಾಜನಗರ, ಮೇ 17– ಪ್ರತಿಯೊಬ್ಬ ನಾಗರಿಕರು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡರೆ ಅವರ ಮನಸ್ಸಿಗೆ ತೃಪ್ತಿ ಸಿಗಲಿದೆ ಎಂದು ಚಾಮರಾಜನಗರ ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೇಕೊಪ್ಪ ಅಭಿಪ್ರಾಯಪಟ್ಟರು.

ರಾಮಸಮುದ್ರದ ಸಮೀಪ ಹರಳುಕೋಟೆ ಜನಾರ್ಧನಸ್ವಾಮಿ ದೇವಸ್ಥಾನದ ಮುಂಭಾಗ ಶ್ರೀವರಮಹಾಲಕ್ಷ್ಮೀ ಸಾಂಸ್ಕೃತಿಕ ಕ್ರೀಡಾ ಸೇವಾ ಸಂಸ್ಥೆಯಿಂದ ನಡೆದ ಲಕ್ಷ್ಮೀ ನರಸಿಂಹಸ್ವಾಮಿ ಜಯಂತಿ ಹಾಗೂ ಬಡಜನರಿಗೆ ಉಚಿತ ಬೆಡ್‌ಶೀಟ್ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇತಿಹಾಸ ಪುರಾತನ ದೇವಸ್ಥಾನದ ಸನ್ನಿಧಿಯಲ್ಲಿ ಇಂಥ ಕಾರ್ಯಕ್ರಮ ಇಟ್ಟುಕೊಂಡಿರುವುದು ಮೆಚ್ಚುಗೆ ವಿಷಯ. ಸಂಸ್ಥೆ ಈಗಾಗಲೇ ಹಲವಾರು ಜನಪರ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ನಗರಸಭೆ ಸದಸ್ಯೆ ಮಮತಾ ಬಾಲಸುಬ್ರಮಣ್ಯಂ ಅವರು ವೇದಿಕೆಯ ಬೆಡ್‌ಶೀಟ್‌ಗಳನ್ನು ಬಡ ಜನರಿಗೆ ವಿತರಿಸಿದರು. ಈ ವೇಳೆ ಸಮಾಜ ಸೇವಕ ಪರಮೇಶ್ವರಪ್ಪ, ವೇದಿಕೆ ಅಧ್ಯಕ್ಷ ಜಿ.ಬಂಗಾರು, ಅರ್ಚಕ ಅನಂತಪ್ರಸಾದ, ಸಂಸ್ಥೆಯ ಉಪಾಧ್ಯಕ್ಷೆ ಡಾ.ಅಕ್ಷಾ ಎಸ್‌ಜೈನ್, ಉಪನ್ಯಾಸಕಿ ಮೇಘಶ್ರೀ, ಶಿಕ್ಷಕಿ ಜ್ಯೋತಿ, ನಿರ್ದೇಶಕರಾದ ನಂದಿನಿ, ಬಸವರಾಜೇಶ್ವರಿ, ಗೀತಾಂಜಲಿ, ಸಿಂಧು, ದ್ರಾಕ್ಷಾಯಿಣಿ, ಸದಸ್ಯರಾದ ಸುಚಿತ್ರಾ, ಸ್ನೇಹ, ಅಂಜಲಿ, ಚಂದನ, ಅಶ್ವಿನಿ, ಮುಖಂಡರಾದ ಮಹೇಶ್, ಬಸವರಾಜು, ಶಶಾಂಕ್ ನಾಯಕ್, ರಮೇಶ್, ಮಣಿ, ಮಹದೇವಸ್ವಾಮಿ ಇತರರು ಹಾಜರಿದ್ದರು. ಮೊದಲಿಗೆ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ. ಭಕ್ತರಿಗೆ ಪ್ರಸಾದ ವಿತರಿಸಲಾಯಿತು.

ಕುಲಗಾಣದಲ್ಲಿ ಇಷ್ಟಾರ್ಥಸಿದ್ಧಿ ಗಣಪತಿ ಪ್ರತಿಷ್ಠಾಪನೆ

ಚಾಮರಾಜನಗರ, ಮೇ 17– ತಾಲೂಕಿನ ಕುಲಗಾಣ ಗ್ರಾಮದಲ್ಲಿ ಗ್ರಾಮಸ್ಥರು, ದಾನಿಗಳಿಂದ ನೆರವಿನಿಂದ ನಿರ್ಮಿಸಲಾದ ಇಷ್ಟಾರ್ಥಸಿದ್ಧಿ ಗಣಪತಿ ಪ್ರತಿಷ್ಠಾಪನೆ ಹಾಗೂ ದೇವಾಲಯ ಉದ್ಘಾಟನಾ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು.



ಆಲಯ ಪ್ರವೇಶ, ಪ್ರಧಾನ ಕಲಶ, ನವಗ್ರಹ, ಪಂಚಬ್ರಹ್ಮ, ಸಪ್ತಸಭಾ ದೇವತೆ ಮುಂತಾದ ಕಳಶ ಸ್ಥಾಪನೆ, ಉತ್ಸವಗಳು ನಡೆಯಿತು. ಬಳಿಕ ಕದಳಿ ಭೇದನ, ಹೋಮ ಹವನಾದಿಗಳನ್ನು ನಡೆಸಲಾಯಿತು. ಪುರೋಹಿತರಾದ ಅಶ್ವತ್ಥಪುರಿ ಮಠದ ಗಣೇಶಾರಾಧ್ಯ ಅವರ ನೇತೃತ್ವದಲ್ಲಿ ಪೂಜಾ ಕೈಂಕರ್ಯಗಳು ನಡೆಯಿತು. ಬಳಿಕ, ಭಕ್ತರಿಗೆ ಅನ್ನಸಂತರ್ಪಣೆ ನಡೆಸಲಾಯಿತು. ಈ ವೇಳೆ ಕಾಂಗ್ರೆಸ್ ಮುಖಂಡ ಹೆಚ್.ಎಂ.ಗಣೇಶ್‌ಪ್ರಸಾದ್, ಜಿಪಂ ಮಾಜಿ ಸದಸ್ಯ ಕೆರೆಹಳ್ಳಿ ನವೀನ್, ತಾಪಂ ಮಾಜಿ ಸದಸ್ಯ ಕೆಂಪರಾಜು, ಕೆ.ಎಸ್.ಮಾದಪ್ಪ, ಚಾಮುಲ್ ನಿರ್ದೇಶಕರಾದ ಸ್ವಾಮಿ, ರವಿಶಂಕರ್, ನಾಗೇಂದ್ರ ಮತ್ತು ಗ್ರಾಮಸ್ಥರು ಇದ್ದರು.

ವಿರಾಜಪೇಟೆಯಲ್ಲಿ ತಾಲೂಕು ಮಟ್ಟದ ಅಧಿಕಾರಿಗಳ ಪೂರ್ವಭಾವಿ ಸಭೆ

ಮಳೆಗಾಲದಲ್ಲಿ ಮುಂಜಾಗ್ರತ ಕ್ರಮಕ್ಕೆ ಸೂಚನೆ



ವಿರಾಜಪೇಟೆ, ಮೇ 17– ತಾಲೂಕಿನಲ್ಲಿ ಮಳೆಗಾಲದಲ್ಲಿ ಮುಂಜಾಗ್ರತ ಕ್ರಮ ಕೈಗೊಳ್ಳುವ ಬಗ್ಗೆ ತಾಲೂಕು ಕಚೇರಿ ಸಭಾಂಗಣದಲ್ಲಿ ಕರೆದಿದ್ದ ತಾಲೂಕು ಮಟ್ಟದ ಅಧಿಕಾರಿಗಳ ಪೂರ್ವಭಾವಿ ಸಭೆಯು ಶಾಸಕ ಕೆ.ಜಿ.ಬೋಪಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ಸೆಸ್ಕ್ ಇಲಾಖೆಯ ಸಹಾಯಕ ಕಾರ್ಯಪಾಲಕ ಸುರೇಶ್ ಮಾತನಾಡಿ, ಈ ವರ್ಷ ಇಲಾಖೆಯಲ್ಲಿ ಅಂದಾಜು ಐವತ್ತು ವಿದ್ಯುತ್ ಕಂಬ ದಾಸ್ತಾನು ಇಡಲಾಗಿದ್ದು, ಬಿಟ್ಟಂಗಾಲ ಗ್ರಾಮದಲ್ಲಿ ಕಂಬಗಳ ತಯಾರಿಕ ಘಟಕದಿಂದ ಅಗತ್ಯ ಕಂಬ ಪಡೆಯಲಾಗುತ್ತದೆ. ಇದಕ್ಕಾಗಿ 43 ಸಿಬ್ಬಂದಿಗಳಿದ್ದು, ಹೆಚ್ಚು ಮಳೆಬೀಳುವ ದಿನದಲ್ಲಿ ಹೆಚ್ಚಿನ ಸಿಬ್ಬಂದಿಗಳ ಆಗತ್ಯವಿರುವುದರಿಂದ ಕಳೆದ ಸಾಲಿನಲ್ಲಿ 25 ಮಂದಿ ಸಿಬ್ಬಂದಿಯನ್ನು ನೀಡಲಾಗಿತ್ತು, ಈ ಬಾರಿಯು ಸಿಬ್ಬಂದಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಮಾಹಿತಿ ನೀಡಿದರು.

ಲೋಕೋಪಯೋಗಿ ಇಲಾಖೆಯವರು ಮಳೆಗಾಲದಲ್ಲಿ ಮರಗಳು ರಸ್ತೆಗೆ ಉರುಳಿದಾಗ ಅರಣ್ಯ ಇಲಾಖೆ ಜೊತೆಗೂಡಿ ತಕ್ಷಣ ಮರಗಳನ್ನು ತೆರವುಗೊಳಿಸುವುದರೊಂದಿಗೆ ರಸ್ತೆ ಸಂಚಾರ ಮುಕ್ತವಾಗಿರುವಂತೆ ನೋಡಿಕೊಳ್ಳಬೇಕು. ಹಾಗೂ ಜಿಲ್ಲಾ ಪಂಚಾಯತ್ ತಾಂತ್ರಿಕ ವಿಭಾಗದವರು ಗ್ರಾಮೀಣ ರಸ್ತೆಗಳ ಬಗ್ಗೆ ಆಗತ್ಯ ಕ್ರಮ ಕೈಗೊಳ್ಳಬೇಕೆಂದು ಸಹಾಯಕ ಅಭಿಯಂತರ ಸಿದ್ದೇಗೌಡ ಮತ್ತು ಅಭಿಯಂತರ ಮಹಾದೇವ ಅವರಿಗೆ ಶಾಸಕ ಬೋಪಯ್ಯ ಸೂಚಿಸಿದರು.

ಪಪಂ ಮುಖ್ಯಾಧಿಕಾರಿ ಚಂದ್ರಕುಮಾರ್ ಮಾತನಾಡಿ, ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರಕೃತಿ ವಿಕೋಪ ಸಂದರ್ಭ ಆಗತ್ಯ ಕ್ರಮ ಕೈಗೊಳ್ಳಲು ಅರಣ್ಯ ಇಲಾಖೆ, ಸೆಸ್ಕ್ ಮತ್ತಿತರ ಇಲಾಖೆಗಳ ಅಧಿಕಾರಿಗಳ ಸಭೆ ಕರೆದು ಕ್ರಮ ಕೈಗೊಳ್ಳುವ ಬಗ್ಗೆ ತೀರ್ಮಾನಿಸಲಾಗುವುದು ಎಂದರು. ಈ ವೇಳೆ ಸಭೆಗೆ ಗೈರು ಹಾಜರಾದ ಅರಣ್ಯ ಇಲಾಖೆಯ ಎ.ಸಿ.ಎಫ್ ಮತ್ತು ಪೊನ್ನಂಪೇಟೆ ಸೆಸ್ಕ್ ಎ.ಇ. ಅವರಿಗೆ ನೋಟಿಸ್ ಜಾರಿ ಮಾಡುವಂತೆ ಬೋಪಯ್ಯ ಹೇಳಿದರು.

ಪೊಲೀಸ್ ಇಲಾಖೆ ಪರಿಸ್ಥಿತಿಯ ಬಗ್ಗೆ ನಿಗಾ ವಹಿಸುವ ಮೂಲಕ ತುರ್ತು ಸಂದರ್ಭದಲ್ಲಿ ತಕ್ಷಣ ಸ್ಪಂದಿಸಬೇಕು, ಅಲ್ಲದೆ ಅಗ್ನಿಶಾಮಕ ಇಲಾಖೆ ಆಗತ್ಯ ಸಿದ್ಧತೆ ಮಾಡಿಕೊಂಡಿರಬೇಕು, ವಿರಾಜಪೇಟೆಯಲ್ಲಿ ಸಹಾಯವಾಣಿ ಕೇಂದ್ರ ಸೂಕ್ತವಾಗಿ ಕಾರ್ಯನಿರ್ವಹಿಸಬೇಕು, ಶಿಕ್ಷಣಾಧಿಕಾರಿಗಳು ಶಾಲಾ ಮಕ್ಕಳಿಗೆ ಆಗತ್ಯ ಸಂದರ್ಭದಲ್ಲಿ ರಜೆ ನೀಡುವಂತಾಗಬೇಕು, ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಎಲ್ಲಾ ಕೆಲಸಗಳಿಗೂ ಸಹಕಾರ ನೀಡಬೇಕು. ಕಳೆದ ಬಾರಿ ಪ್ರಕೃತಿ ವಿಕೋಪವಾದ ಕಡೆಗಳಲ್ಲಿ ಹೆಚ್ಚಿನ ಜಾಗ್ರತೆ ವಹಿಸಬೇಕು, ಪ್ರತಿ ಗ್ರಾಮ ಪಂಚಾಯಿತಿಗಳಿಗೆ 60 ಸಾವಿರ ತುರ್ತು ನಿಧಿ ನೀಡಲಾಗುತ್ತದೆ, ಮುಂದಿನ ದಿನದಲ್ಲಿ ತಹಸೀಲ್ದಾರ್ ಮೂಲಕ ಎಲ್ಲಾ ಇಲಾಖೆಯ ಅಧಿಕಾರಿಗಳ ಸಭೆಯನ್ನು ಕರೆಯುವುದಾಗಿ ಶಾಸಕರು ತಿಳಿಸಿದರು.

ಸಭೆಯಲ್ಲಿ ಡಿವೈಎಸ್‌ಪಿ ರಂಜನ ರಾಜೇ ಅರಸ್, ಪೊನ್ನಂಪೇಟೆ ತಹಸೀಲ್ದಾರ್ ಪ್ರಶಾಂತ್, ತಾಪಂ ಕಾರ್ಯ ನಿರ್ವಹಣಾಧಿಕಾರಿ ಅಪ್ಪಣ್ಣ, ಉಪ ತಹಸೀಲ್ದಾರ್ ಪ್ರದೀಪ್ ಕುಮಾರ್ ಮತ್ತು ಪೊನ್ನು ಹಾಗೂ ಅಗ್ನಿಶಾಮಕ ದಳದ ಕಾಳಪ್ಪ, ಹಾಗೂ ಐಟಿಡಿಪಿ, ಸಮಾಜಕಲ್ಯಾಣ ಇಲಾಖೆ, ಶಿಶು ಅಭಿವೃದ್ಧಿ ಇಲಾಖೆ, ಕೃಷಿ ಇಲಾಖೆ ಮತ್ತಿತರ ಇಲಾಖೆಯ ಅಧಿಕಾರಿಗಳು ಸಿಬ್ಬಂದಿಗಳು ಉಪಸ್ಥಿತರಿದ್ದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಉಪ ಯೋಜನೆ ಅನುಷ್ಠಾನಕ್ಕೆ ಜಿಲ್ಲಾಧಿಕಾರಿ ಸೂಚನೆ



ಮಡಿಕೇರಿ ಮೇ 17– ಪ್ರಸಕ್ತ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪ ಯೋಜನೆ ಕಾರ್ಯಕ್ರಮ ಅನುಷ್ಠಾನ ಸಂಬಂಧ ಅರ್ಜಿ ಆಹ್ವಾನ, ಫಲಾನುಭವಿಗಳ ಪಟ್ಟಿ ಸೇರಿದಂತೆ ಈಗಿನಿಂದಲೇ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ನಿರ್ದೇಶನ ನೀಡಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪ ಯೋಜನೆ ಕಾರ್ಯಕ್ರಮ ಅನುಷ್ಠಾನದ ಪ್ರಗತಿ ಬಗ್ಗೆ ಮಾಹಿತಿ ಪಡೆದು ಅವರು ಮಾತನಾಡಿದರು.

ಈಗಾಗಲೇ ಮೇ ತಿಂಗಳು ಪೂರ್ಣಗೊಳ್ಳುತ್ತಿರುವುದರಿಂದ ಎಸ್ಸಿಪಿ/ಟಿಎಸ್‌ಪಿ ಕಾರ್ಯಕ್ರಮ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅರ್ಜಿ ಆಹ್ವಾನ ಮಾಡಬೇಕು. ಸೆಪ್ಟೆಂಬರ್ ಅಂತ್ಯದೊಳಗೆ ಶೇಕಡಾವಾರು ಪ್ರಗತಿಗೆ ಅಗತ್ಯ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸೂಚಿಸಿದರು.

'ಪರಿಶಿಷ್ಟರಿಗೆ ಸರ್ಕಾರದ ಸೌಲಭ್ಯ ಕಡ್ಡಾಯವಾಗಿ ತಲುಪಿಸಬೇಕು ಎಂಬುದು ಸರ್ಕಾರದ ಬಯಕೆಯಾಗಿದೆ. ಆ ನಿಟ್ಟಿನಲ್ಲಿ ಕಾರ್ಯಕ್ರಮ ಅನುಷ್ಠಾನಗೊಳಿಸಲು ತ್ವರಿತ ಕ್ರಮ ವಹಿಸಬೇಕು ಎಂದು ಅಧಿಕಾರಿಗಳಿಗೆ ಡಾ.ಬಿ.ಸಿ.ಸತೀಶ ಸೂಚಿಸಿದರು.'

ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಉಪ ವಿಭಾಗಾಧಿಕಾರಿ ಯತೀಶ್ ಉಳ್ಳಾಲ್, ಜಿ.ಪಂ. ಯೋಜನಾ ನಿರ್ದೇಶಕ ಶ್ರೀಕಂಠಮೂರ್ತಿ, ಮುಖ್ಯ ಯೋಜನಾಧಿಕಾರಿ ರಾಜ್‌ಗೋಪಾಲ್, ಕೃಷಿ ಇಲಾಖೆ ಜಂಟಿ ನಿರ್ದೇಶಕ ಶಬಾನಾ ಎಂ.ಶೇಖ್ ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಎಂಜಿನಿಯರ್ ನಾಗರಾಜು, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಶೇಖರ್, ಐಟಿಡಿಪಿ ಇಲಾಖಾ ಅಧಿಕಾರಿ ಹೊನ್ನೇಗೌಡ, ಡಿಎಚ್‌ಒ ಡಾ.ಆರ್.ವೆಂಕಟೇಶ್, ಕೈಮಗ್ಗ ಮತ್ತು ಜವಳಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಜಿ.ಎಸ್.ಗುರುಸ್ವಾಮಿ, ಪಶುಪಾಲನಾ ಇಲಾಖೆಯ ಉಪ ನಿರ್ದೇಶಕ ಸುರೇಶ್ ಭಟ್, ಮೀನುಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಕೆ.ಟಿ.ದರ್ಶನಾ, ಸೆಸ್ಕ್ ಎಇಇ ದೇವಯ್ಯ, ಜಿಲ್ಲಾ ಕಾರ್ಮಿಕ ಅಧಿಕಾರಿ ಅನಿಲ್ ಬಗಟಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸಪ್ಪ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯವಸ್ಥಾಪಕಿ ಕವಿತಾ, ಪೌರಾಯುಕ್ತ ರಾಮದಾಸ್, ಸಹಕಾರ ಇಲಾಖೆಯ ಸಹಾಯಕ ನಿಬಂಧಕ ಮೋಹನ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪೂಣಚ್ಚ ಇತರರು ಇದ್ದರು.

ಗನ್ ಹಿಡಿಯೋದು ನಮ್ಮ ಜನ್ಮಸಿದ್ಧ ಹಕ್ಕು

ವಿಪಕ್ಷ ನಾಯಕ ಸಿದ್ದರಾಮಯ್ಯ ಟೀಕೆಗೆ ಶಾಸಕ ಕೆ.ಜಿ.ಬೋಪಯ್ಯ ತಿರುಗೇಟು

ಮಡಿಕೇರಿ, ಮೇ 17– ಪೊನ್ನಂಪೇಟೆಯ ಶಾಲೆಯೊಂದರಲ್ಲಿ ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗ ದಳದ ವತಿಯಿಂದ ನಡೆದ ಪ್ರಶಿಕ್ಷಣ ವರ್ಗದಲ್ಲಿ ಭಾಗಿಯಾದ್ದಕ್ಕೆ ವಿರುದ್ಧ ವಿಪಕ್ಷ ನಾಯಕ ಸಿದ್ದರಾಮಯ್ಯ ಮಾಡಿರುವ ಟೀಕೆಗೆ ಶಾಸಕ ಕೆ.ಜಿ.ಬೋಪಯ್ಯ ತಿರುಗೇಟು ನೀಡಿದ್ದಾರೆ.



ಮಡಿಕೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕೆ.ಜಿ.ಬೋಪಯ್ಯ, ನಾನೇನು ಗನ್ ಹಿಡಿದುಕೊಂಡು ಅಭ್ಯಾಸ ಮಾಡಲು ಹೋಗಿಲ್ಲ, ಅದನ್ನು ಮೊದಲು ಸಿದ್ದರಾಮಯ್ಯ ತಿಳಿದುಕೊಳ್ಳಲಿ. ಗನ್ ಹಿಡಿಯೋದು ನಮ್ಮ ಜನ್ಮಸಿದ್ಧ ಹಕ್ಕು ಅದನ್ನು ಕೇಳೋಕೆ ಇವನ್ಯಾರು ಎಂದು ಏಕವಚನದಲ್ಲಿ ಕುಟುಕಿದರಲ್ಲದೆ, ಬರೀ ಒಂದು ವರ್ಗದ ಕ್ರಿಮಿನಲ್‌ಗಳ ಕೇಸ್ ಮುಕ್ತಗೊಳಿಸಿದ ಸಿದ್ದರಾಮಯ್ಯ, ನಮಗೆ ಪಾಠ ಮಾಡುವ ಅಗತ್ಯವಿಲ್ಲ ಎಂದು ಕೆ.ಜಿ.ಬೋಪಯ್ಯ ಆಕ್ರೋಶ ವ್ಯಕ್ತಪಡಿಸಿದರು.

ಬಜರಂಗ ದಳ ನಡೆಸಿದ ಶೌರ್ಯ ಪ್ರಶಿಕ್ಷಣ ವರ್ಗದಲ್ಲಿ ಶಾಸಕರಾದ ಅಪ್ಪಚ್ಚು ರಂಜನ್, ಕೆ.ಜಿ.ಬೋಪಯ್ಯ ಮತ್ತು ಸುಜಾ ಕುಶಾಲಪ್ಪ ಪಾಲ್ಗೊಂಡಿದ್ದು, ಇವರ ಬದ್ಧತೆ ಸಂವಿಧಾನಕ್ಕೋ ಅಥವಾ ಬಜರಂಗದಳಕ್ಕೋ ಎಂದು ಪ್ರಶ್ನಿಸಿದ ವಿಪಕ್ಷ ನಾಯಕ ಸಿದ್ದರಾಮಯ್ಯ ವಿರುದ್ಧ ಕಿಡಿಕಾರಿದ ಬೋಪಯ್ಯ, ಡಿಜೆ ಹಳ್ಳಿ, ಕೆಜಿ ಹಳ್ಳಿಯಲ್ಲಿ ದಲಿತ ಮುಖಂಡರ ಮನೆಗೆ ಮಾರಕಾಸ್ತ್ರಗಳೊಂದಿಗೆ ನುಗ್ಗಿ ಬೆಂಕಿ ಹಚ್ಚಿ ದಾಂಧಲೆ ಮಾಡಿದಾಗ ಇವರ ಬದ್ಧತೆಗೆ ಏನಾಗಿತ್ತು ಎಂದು ಪ್ರಶ್ನಿಸಿದರು.

ಎಸ್‌ಡಿಪಿಐ ಆರೋಪದ ಬಗ್ಗೆ ಮಾತನಾಡಿದ ಬೋಪಯ್ಯ, ಬೀದಿಯಲ್ಲಿ ಹೋಗುವವರಿಗೆಲ್ಲಾ ಪ್ರತಿಕ್ರಿಯಿಸುವ ಅಗತ್ಯವಿಲ್ಲ. ಎಸ್‌ಡಿಪಿಐ ದೇಶಕ್ಕೆ ಮಾರಕವಾಗಿದೆ, ಇದನ್ನು ಬ್ಯಾನ್ ಮಾಡಬೇಕು ಎಂಬ ಕೂಗಿದೆ ಎಂದರು. ಅವರು ದೂರು ನೀಡಿದರೆ ಅದನ್ನು ಎದುರಿಸುವ ಶಕ್ತಿ ನನಗಿದೆ. ಇಂತಹ ಅದೆಷ್ಟೋ ಕೇಸ್‌ಗಳನ್ನು ನಾನು ಎದುರಿಸಿದ್ದೇನೆ ಎಂದು ಹೇಳಿದರು.

ಏರ್‌ಗನ್ ಹೊಂದಲು ಯಾವುದೇ ಪರವಾನಗಿ ಪಡೆಯಬೇಕೆಂದಿಲ್ಲ. ಅದರಲ್ಲಿ ಅಭ್ಯಾಸ ಮಾಡುವುದೂ ತಪ್ಪು ಎಂದು ಕಾನೂನಿನಲ್ಲಿ ಉಲ್ಲೇಖವಾಗಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ಹಿಂದೂ ಸಮಾಜದ ಪರ ಹೋರಾಟ ಮಾಡುತ್ತಿರುವ ಕಾರ್ಯಕರ್ತರಿಗೆ ಆತ್ಮರಕ್ಷಣೆಯ ಅಗತ್ಯತೆಯಿದೆ. ಇಂತಹ ತರಬೇತಿಗಳು ಪಡೆಯಬೇಕಾದ ಅನಿವಾರ್ಯತೆ ಈಗ ನಿರ್ಮಾಣವಾಗಿದೆ ಎಂದು ತರಬೇತಿಯನ್ನು ಸಮರ್ಥಿಸಿಕೊಂಡರು.

ಸೋ.ಪೇಟೆಯಲ್ಲಿ ಧಾರಾಕಾರ ಮಳೆ



ಸೋಮವಾರಪೇಟೆ, ಮೇ 17– ಸಂತೆ ದಿನವಾದ ಮಂಗಳವಾರ ಪಟ್ಟಣದಲ್ಲಿ ಧಾರಾಕಾರ ಮಳೆ ಸುರಿದ ಪರಿಣಾಮ ಹೈಟೆಕ್ ಮಾರುಕಟ್ಟೆ ಒಳಗೆ ನೀರು ಸಂಗ್ರಹವಾಗಿ ವ್ಯಾಪಾರಸ್ಥರು ತೊಂದರೆ ಅನುಭವಿಸಿದರು.

ಮೇಲ್ಛಾವಣಿಯಿಂದ ಸುರಿದ ಧಾರಾಕಾರ ನೀರಿನಿಂದ ಮಾರುಕಟ್ಟೆ ಆವರಣ ನೀರಿನಿಂದ ಆವೃತ್ತವಾಯಿತು. ಮಧ್ಯದಲ್ಲಿ ತರಕಾರಿ ಇಟ್ಟು ವ್ಯಾಪಾರ ಮಾಡುತ್ತಿದ್ದುದರಿಂದ ಕೊಚ್ಚೆ ನೀರಿನಲ್ಲಿ ತರಕಾರಿ ಮುಳುಗಿತು. ಕೆಲವರು ಸೋರುವ ನೀರಿಗೆ ಮೈಯೊಡ್ಡಿಕೊಂಡೆ ವ್ಯಾಪಾರ ಮುಂದುವರಿಸಿದರು. ಸಂತೆಗೆ ಬಂದವರು ಆವರಣದಲ್ಲಿ ಸಂಗ್ರಹವಾಗಿರುವ ನೀರಿನೊಳಗೆ ನಡೆದಾಡಿದರು.

ಪಟ್ಟಣ ಪಂಚಾಯಿತಿ ವತಿಯಿಂದ 1.25 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ ಹೈಟೆಕ್ ಮಾರುಕಟ್ಟೆ ಮಳೆಗಾಲದಲ್ಲಿ ಸೋರುವುದು ಮಾಮೂಲಿಯಂತಾಗಿದೆ. ಪ್ರತಿವರ್ಷ ಮಳೆಗಾಲ ಸಮೀಪಿಸುತ್ತಿದ್ದಂತೆ ಮಾರುಕಟ್ಟೆಯ ಮೇಲ್ಛಾವಣಿ ದುರಸ್ತಿ ಕಾರ್ಯ ನಡೆಯುತ್ತದೆ. ಹಿಂದೆ ದುರಸ್ತಿ ಮಾಡಿದ್ದರೂ, ಮೇಲ್ಛಾವಣಿ ಸೋರುತ್ತಿದೆ ಎಂದು ವ್ಯಾಪಾರಸ್ಥರು ಅಸಮಾಧಾನ ವ್ಯಕ್ತಪಡಿಸಿದರು. ಸುಂಕ ವಸೂಲಿ ಮಾಡುತ್ತಾರೆ ಆದರೆ, ಸೌಲಭ್ಯ ಕಲ್ಪಿಸುತ್ತಿಲ್ಲ ಎಂದು ವ್ಯಾಪಾರಸ್ಥರು ದೂರಿದರು.

ಲಕ್ಷಾಂತರ ಹಣ ಹೈಟೆಕ್ ಮಾರುಕಟ್ಟೆ ಹೆಸರಿನಲ್ಲಿ ನಿರ್ಮಾಣವಾಗಿರುವ ಮಾರುಕಟ್ಟೆಗೆ ರಿಪೇರಿ ಹೆಸರಿನಲ್ಲಿ ವರ್ಷ ವರ್ಷವೂ ಹಣ ವ್ಯಯವಾಗುತ್ತಿದೆ. ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಬೇಜವಬ್ದಾರಿಗೆ ಇದೊಂದು ನಿದರ್ಶನವಾಗಿದೆ.

ಹೈಟೆಕ್ ಹೆಸರಿನಲ್ಲಿ ಲೋ ಟೆಕ್ ಕಾಮಗಾರಿಯಿಂದ ವ್ಯಾಪಾರಸ್ಥರು ಪರದಾಡುತ್ತಿದ್ದಾರೆ. ಮಾರುಕಟ್ಟೆ ಒಳಗೆ ಬೆಳಕೂ ಇಲ್ಲ, ಮಳೆಗಾಲದಲ್ಲಿ ನೀರಿನ ಹರಿವಿನಿಂದಾಗಿ ವ್ಯಾಪಾರಸ್ಥರು ಮತ್ತು ಖರೀದಿದಾರರಿಗೆ ಯಾವುದೇ ಪ್ರಯೋಜನವಿಲ್ಲದಂತಾಗಿದೆ ಎಂದು ಆಪಾದಿಸಿದರು.


ವಿರಾಜಪೇಟೆಯಲ್ಲಿ ಬೈಕ್ ಜಾಥಾ

ವಿರಾಜಪೇಟೆ, ಮೇ 17– ವಿಶ್ವ ಹಿಂದೂ ಪರಿಷತ್, ಬಜರಂಗದಳ, ದುರ್ಗಾವಾಹಿನಿ, ಮಾತೃಶಕ್ತಿ ಹಿಂದೂ ಸಂಘಟನೆಗಳ ವತಿಯಿಂದ ಮೇ 19 ರಂದು ನಡೆಯುವ ಹಿಂದೂ ಸಮಾಜೋತ್ಸವದ ಪ್ರಯುಕ್ತ ಇಂದು (ಮಂಗಳವಾರ) ವಿರಾಜಪೇಟೆಯಲ್ಲಿ ಬೈಕ್ ಜಾಥಾವನ್ನು ಆಯೋಜಿಸಲಾಗಿತ್ತು ಹಿಂದೂಪರ ಸಂಘಟನೆಯ ಪ್ರಮುಖರಾದ ಮಾಳೇಟಿರ ಶ್ರೀನಿವಾಸ್ ಮತ್ತು ಸಿ.ಕೆ.ಬೋಪಣ್ಣ ಜಾಥಾ ಉದ್ಘಾಟಿಸಿದರು. ಛತ್ರಕೆರೆ ಬಳಿ ಇರುವ ಶ್ರೀ ವೀರಾಂಜನೇಯ ದೇವಸ್ಥಾನದಲ್ಲಿ ಪೂಜೆಸಲ್ಲಿಸಿ ಬೈಕ್ ಜಾಥಾಕ್ಕೆ ಚಾಲನೆ ನೀಡಲಾಯಿತು. ಜಾಥಾ ಚಿಕ್ಕಪೇಟೆ ಮಾರ್ಗವಾಗಿ ಶಿವಕೇರಿಯಲ್ಲಿರುವ ವಿಷ್ಣು ದೇವಸ್ಥಾನ, ಅಪ್ಪಯ್ಯಸ್ವಾಮಿ ರಸ್ತೆ, ದಖ್ಖನಿಮೊಹಲ್ಲಾ ಮಾರ್ಗವಾಗಿ ತೆಲುಗರ ಬೀದಿ ಮಾರಿಗುಡಿ, ದೊಡ್ಡಟ್ಟಿ ಚೌಕಿ, ಮೂಲಕ ಮುಖ್ಯ ರಸ್ತೆಯ ಗಣಪತಿ ದೇವಸ್ಥಾನ, ಮೀನುಪೇಟೆ ಮುತ್ತಪ್ಪ ದೇವಸ್ಥಾನ ತಲುಪಿ ನಂತರ ಖಾಸಗಿ ಬಸ್ ನಿಲ್ದಾಣ, ಸುಣ್ಣದ ಬೀದಿ, ಗೋಣಿಕೊಪ್ಪ ರಸ್ತೆ ಮಾರ್ಗವಾಗಿ ತಾಲೂಕು ಮೈದಾನದವರೆಗೆ ಬೈಕ್ ಜಾಥಾ ನಡೆಸಲಾಯಿತು.

ಬೈಕ್ ಜಾಥಾ ಜಿಲ್ಲಾ ವಿಶ್ವಹಿಂದೂ ಪರಿಷತ್ ಅಧ್ಯಕ್ಷ ಕೃಷ್ಣಮೂರ್ತಿ, ಕಾರ್ಯಾಧ್ಯಕ್ಷ ಸುರೇಶ್ ಮುತ್ತಪ್ಪ, ಕಾರ್ಯದರ್ಶಿ ಪುದಿಯೊಕ್ಕಡ ರಮೇಶ್, ವಿಶ್ವ ಹಿಂದೂ ಪರಿಷತ್ ತಾಲೂಕು ಅಧ್ಯಕ್ಷ ಬಿ.ಎಂ.ಕುಮಾರ್ ಇತರರಿದ್ದರು.



ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2,859 ಅಡಿ
ಮಂಗಳವಾರ	2821.48 ಅಡಿ
ಒಳ ಹರಿವು	250 ಕ್ಯೂಸೆಕ್
ಹೊರ ಹರಿವು	40 ಕ್ಯೂಸೆಕ್

ಮೈಸೂರು ಮಿತ್ರ ಬುಧವಾರ 18 ಮೇ 2022

ಕುಪೇಂದ್ರ ರೆಡ್ಡಿ ರಾಜ್ಯಸಭೆಗೆ ಜೆಡಿಎಸ್ ಅಭ್ಯರ್ಥಿ

ಬೆಂಗಳೂರು, ಮೇ 17 (ಕೆಎಂಶಿ)–ಪಕ್ಷದ ಹಿರಿಯ ನಾಯಕ ಹಾಗೂ ಉದ್ಯಮಿ



ಕುಪೇಂದ್ರ ರೆಡ್ಡಿ ಅವರನ್ನು ರಾಜ್ಯಸಭೆಯ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಲು ಜೆಡಿಎಸ್ ನಿರ್ಧರಿಸಿದೆ. ರಾಜ್ಯಸಭೆಗೆ ಆಯ್ಕೆಯಾಗಲು 16 ಮತಗಳ ಕೊರತೆ ಇದ್ದರೂ, ಅಭ್ಯರ್ಥಿಯನ್ನು ಕಣಕ್ಕಿಳಿಸಲು ಪಕ್ಷದ ಮುಖಂಡರು ತೀರ್ಮಾನ ಮಾಡಿದ್ದಾರೆ.

ನಾಳೆ ಸಂಜೆ ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ರೆಸಾರ್ಟ್‌ವೊಂದರಲ್ಲಿ ಜೆಡಿಎಸ್ ಶಾಸಕಾಂಗ ಸಭೆಯನ್ನು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಕರೆದಿದ್ದು, ಸಭೆಯಲ್ಲೇ ರಾಜ್ಯಸಭೆ ಮತ್ತು ವಿಧಾನಪರಿಷತ್ ಅಭ್ಯರ್ಥಿಗಳ ಆಯ್ಕೆ ಮಾಡಲಿದ್ದಾರೆ.

ವಿಧಾನಸಭೆಯ ಬಲಾಬಲದ ಅಧಾರದ ಮೇಲೆ ವಿಧಾನಪರಿಷತ್ತಿಗೆ ಒಬ್ಬ ಅಭ್ಯರ್ಥಿಯನ್ನು ಗೆಲ್ಲಿಸಬಹುದಾಗಿದೆ. ರಾಜ್ಯಸಭೆಗೆ ಉಂಟಾಗಿರುವ ಕೊರತೆಯನ್ನು ಕಣಕ್ಕಿಳಿಯುವ ಅಭ್ಯರ್ಥಿಯೇ ಬಿಜೆಪಿ ಇಲ್ಲವೆ ಕಾಂಗ್ರೆಸ್‌ನ ಹೆಚ್ಚುವರಿ ಮತ ಪಡೆದು ಜಯ ಸಾಧಿಸಬೇಕಾಗುತ್ತದೆ. ಸುಲಭವಾಗಿ ವಿಧಾನಪರಿಷತ್ತಿಗೆ ಆಯ್ಕೆಗೊಳ್ಳಬಹುದಾದ ಒಂದು ಸ್ಥಾನಕ್ಕೆ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ಸೇರಿದಂತೆ ಹಲವು ನಾಯಕರು ಆಕಾಂಕ್ಷಿಗಳಾಗಿದ್ದಾರೆ. ನಾಳಿನ ಸಭೆಯಲ್ಲೇ ಈ ಸಂಬಂಧ ಚರ್ಚೆ ಮಾಡಿ, ಅಭ್ಯರ್ಥಿ ಆಯ್ಕೆ ಮಾಡಲಿದ್ದಾರೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ನಾಳೆ ಬಿಜೆಪಿ ಕೇಂದ್ರ ಚುನಾವಣಾ ಸಮಿತಿ ಸಭೆ

ನವದೆಹಲಿ, ಮೇ 17– ಮೇ 19 ರಂದು ಗುರುವಾರ ಬಿಜೆಪಿ ಕೇಂದ್ರ ಚುನಾವಣಾ ಸಮಿತಿಯ ಮಹತ್ವದ ಸಭೆ ನವದೆಹಲಿಯಲ್ಲಿ ನಡೆಯಲಿದೆ. ಮುಂಬರುವ ವಿಧಾನ ಪರಿಷತ್ ಹಾಗೂ ರಾಜ್ಯಸಭಾ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆಗೆ ಈ ಸಭೆ ಆಯೋಜಿಸಲಾಗಿದೆ. ಪರಿಷತ್‌ನ 7 ಸ್ಥಾನಗಳ ಪೈಕಿ ಬಿಜೆಪಿ 4 ಸ್ಥಾನಗಳನ್ನು ಪಡೆಯ ಲಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ರಾಜ್ಯ ಬಿಜೆಪಿ ಕೋರ್ ಕಮಿಟಿ 30 ಸಂಭವನೀಯ ಅಭ್ಯರ್ಥಿಗಳ ಪಟ್ಟಿಯನ್ನು ಹೈಕಮಾಂಡ್‌ಗೆ ರವಾನಿಸಿದೆ.

ಮಹಿಳಾ ವಿಭಾಗ, ಎಸ್ಸಿ/ಎಸ್ಟಿ ವಿಭಾಗ, ಲಿಂಗಾಯತ–ಒಕ್ಕಲಿಗ ಸೇರಿದಂತೆ ವಿವಿಧ ವರ್ಗಗಳ ನಾಯಕರಿಗೆ ಆದ್ಯತೆ ನೀಡುವಂತೆ ಕೋರ್ ಕಮಿಟಿ ಶಿಫಾರಸು ಮಾಡಿದೆ. ಇದೇ ಮೊದಲ ಬಾರಿಗೆ ಕೇಂದ್ರ ಚುನಾವಣಾ ಸಮಿತಿ ಸಭೆಗೆ ರಾಜ್ಯ ನಾಯಕರನ್ನು ಆಹ್ವಾನಿಸಲಾಗಿದೆ. ರಾಜ್ಯ ನಾಯಕರ ಅಭಿಪ್ರಾಯವನ್ನು ಮತ್ತೊಮ್ಮೆ ಪಡೆದು ಅಭ್ಯರ್ಥಿಗಳ ಪಟ್ಟಿಯನ್ನು ವರಿಷ್ಠರು ಅಖೈರುಗೊಳಿಸಲಿದ್ದಾರೆ.

ಒಂದನೇ ಪುಟದಿಂದ

ಮತಾಂತರ ನಿಷೇಧ ಕಾಯ್ದೆ ಜಾರಿ

ಅಂಗೀಕಾರ ಪಡೆಯಲಾಗಿದೆ. ಮೇಲ್ಮನೆಯಲ್ಲಿ ಮಂಡಿತವಾಗಿರುವ ಮಸೂದೆಗೆ ಮುಂದಿನ ಅಧಿವೇಶನದಲ್ಲಿ ಒಪ್ಪಿಗೆ ಪಡೆಯಲಾಗುವುದು ಎಂದ ಸಚಿವರು, ಪ್ರಸಕ್ತ ಸರಕಾರವು ಹೊರಡಿಸಿದ ಸುಗ್ರೀವಾಜ್ಞೆಗೆ ರಾಜ್ಯಪಾಲರ ಸಮ್ಮತಿ ನಿರೀಕ್ಷಿಸಿದ್ದೇವೆ ಎಂದರು. ಸುಗ್ರೀವಾಜ್ಞೆಯನ್ನು ಬಲವಾಗಿ ಸಮರ್ಥಿಸಿದ ಸಚಿವರು, ಸಮಾಜದಲ್ಲಿ ಶಾಂತಿ ಸುರಕ್ಷತೆಯನ್ನು ಕಾಪಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದೆ ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಸಚಿವರು, ಕ್ರೈಸ್ತ ಧಾರ್ಮಿಕ ಮುಖಂಡರು, ರಾಜ್ಯಪಾಲರನ್ನು ಭೇಟಿಯಾಗಿ ಮತಾಂತರ ಮಸೂದೆ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಆದರೆ ಸಂವಿದಾನದತ್ತವಾಗಿ ಇರುವ ಧಾರ್ಮಿಕ ಹಕ್ಕುಗಳನ್ನು ಮೊಟಕುಗೊಳಿಸುವ ಯಾವುದೇ ಪ್ರಸ್ತಾವವೂ ತಿದ್ದುಪಡಿ ಮಸೂದೆಯಲ್ಲಿ ಇಲ್ಲ ಎಂದರು. ತಿದ್ದುಪಡಿ ಮಸೂದೆ ಬಗ್ಗೆ, ಸದನದಲ್ಲಿ ವಿವರವಾಗಿ ಚರ್ಚಿಸಲಾಗಿದೆ, ಶಾಸಕರೊಬ್ಬರು ಮತಾಂತರ ಹಾವಳಿ ಸೃಷ್ಟಿಸಿದ ಕುಟುಂಬಗಳ ನಡುವಿನ ಘರ್ಷಣೆಗಳ ಕುರಿತೂ ಪ್ರಸ್ತಾಪಿಸಿದ್ದನ್ನೂ ನೆನಪಿಸಿದ ಸಚಿವರು, ಸುಗ್ರೀವಾಜ್ಞೆಗೆ ಸಮ್ಮತಿ ಸಿಕ್ಕಿದ ನಂತರ, ಕಾನೂನನ್ನು ಪರಿಣಾಮ ಕಾರಿಯಾಗಿ ಜಾರಿಗೆ ತರಲಾಗುವುದು, ಎಂದರು. ಈ ಹಿಂದೆ, ಕಾಂಗ್ರೆಸ್ ಸರಕಾರ ಮತಾಂತರ ನಿಷೇಧ ಕಾಯಿದೆ ತಂದಿದ್ದನ್ನು ನೆನಪಿಸಿದ ಸಚಿವರು "ನಮ್ಮ ಸರಕಾರ ಆ ವಿಧೇಯಕವನ್ನು ಮತ್ತಷ್ಟು ಬಲಗೊಳಿಸಿದ್ದಲ್ಲದೆ ಕಟ್ಟುನಿಟ್ಟಾಗಿ ಜಾರಿಗೆ ತರಲು ಬದ್ಧವಾಗಿದೆ" ಎಂದರು.

25 ಕೋಟಿ ಬಿಡುಗಡೆ

ಮಾಡುತ್ತಿದ್ದಾರೆ. ಈ ಮಧ್ಯೆ ಪತ್ರಿಕಾ ಸಂಪಾದಕರಿಗೆ ಮಧ್ಯಾಹ್ನ ಔತಣಕೂಟ ಏರ್ಪಡಿಸಿದ್ದ ಮುಖ್ಯಮಂತ್ರಿಯವರು ಸಂಜೆ ತುರ್ತಾಗಿ ಕಾರ್ಯದರ್ಶಿಗಳ ಸಭೆ ನಡೆಸಿದರು.

ತಾವು ಮುಂಗಡ ಪತ್ರದಲ್ಲಿ ಪ್ರಕಟಿಸಿದ ಯೋಜನೆಗಳನ್ನು ತಿಂಗಳಾಂತ್ಯದೊಳಗೆ ಆದೇಶ ಹೊರಡಿಸಿ, ಅನುಷ್ಠಾನಗೊಳಿಸಬೇಕೆಂದು ಸೂಚಿಸಿದರು. ಇದೇ 22ರಿಂದ 28ರವರೆಗೆ ದಾವೋಸ್‌ನಲ್ಲಿ ನಡೆಯುವ ಆರ್ಥಿಕ ಶೃಂಗಸಭೆಯಲ್ಲಿ ಭಾಗವಹಿಸುತ್ತಿ ದ್ದಾರೆ. ಇದರ ನಡುವೆ ತರಾತುರಿಯಲ್ಲಿ ಈ ನಿರ್ಧಾರಗಳನ್ನು ಕೈಗೊಳ್ಳುತ್ತಿರುವುದು ರಾಜಕೀಯ ವಲಯದಲ್ಲಿ ಆಶ್ಚರ್ಯ ಮೂಡಿಸಿದೆ. ಆಡಳಿತ ಪಕ್ಷದ ಶಾಸಕರು ನೀಡಿರುವ ಶಿಫಾರಸ್ಸುಗಳನ್ನು ಕಾನೂನಾತ್ಮಕವಾಗಿ ತಕ್ಷಣವೇ ಮಾನ್ಯ ಮಾಡು ವಂತೆಯೂ ಅಧಿಕಾರಿಗಳಿಗೆ ಸಲಹೆ ಮಾಡಿರುವ ಸಿಎಂ, ಎಲ್ಲಾ ಸದಸ್ಯರ ಕ್ಷೇತ್ರಗಳ ಅಭಿವೃದ್ಧಿಗೆ ಆದ್ಯತೆ ನೀಡಿದ್ದಾರೆ.

ಹೀಗೆ ಶಾಸಕರ ಕ್ಷೇತ್ರಗಳಿಗೆ ತಲಾ 25 ಕೋಟಿ ರೂಪಾಯಿ ವಿವೇಚನಾ ನಿಧಿ ಒದಗಿಸುವ ಮತ್ತು ಬಜೆಟ್ ಭರವಸೆಗಳಿಗೆ ಸಂಬಂಧಿಸಿದಂತೆ ಕಾರ್ಯಾದೇಶ ಹೊರಡಿಸಿರುವುದರ ಹಿಂದೆ ಅವಧಿಪೂರ್ವ ಚುನಾವಣೆಯ ಸೂಚನೆ ಇದೆ ಎಂಬುದು ಉನ್ನತ ಮೂಲಗಳ ಅಭಿಪ್ರಾಯ. ಈ ವರ್ಷದ ನವೆಂಬರ್ ತಿಂಗಳಲ್ಲಿ ಗುಜರಾತ್ ಹಾಗೂ ಹಿಮಾಚಲ ಪ್ರದೇಶ ರಾಜ್ಯಗಳ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು ಅವುಗಳೊಂದಿಗೆ ಕರ್ನಾಟಕದ ವಿಧಾನಸಭಾ ಚುನಾವಣೆಗೆ ಹೋಗುವ ಲೆಕ್ಕಾಚಾರ ಬಿಜೆಪಿ ವರಿಷ್ಠರಿಗಿದೆ ಎಂಬುದು ಮೂಲಗಳ ಹೇಳಿಕೆ. ಮುಖ್ಯಮಂತ್ರಿಗಳ ಹೆಜ್ಜೆಯ ಹಿಂದೆ ತರಾತುರಿ ಇದೆ.ಆದರೆ ಈ ತರಾತುರಿ ಅವಧಿಪೂರ್ವ ಚುನಾವಣೆಯ ಲೆಕ್ಕಾಚಾರ ಕಾರಣವೋ ಅಥವಾ ರಾಜಕೀಯ ಪಲ್ಲಟಗಳ ಲೆಕ್ಕಾಚಾರ ಕಾರಣವೋ ಎಂಬ ಪ್ರಶ್ನೆ ರಾಜಕೀಯ ವಲಯಗಳಲ್ಲಿ ಕೇಳಿ ಬರುತ್ತಿದೆ. ಅವರ ಈ ಪ್ರಯತ್ನ ಕೂಡಾ ಅವಧಿಪೂರ್ವ ಚುನಾವಣೆಯ ಅನುಮಾನ ರಾಜಕೀಯ ವಲಯಗಳಲ್ಲಿ ದಟ್ಟವಾಗುವಂತೆ ಮಾಡುತ್ತಿದ್ದು ಸರ್ಕಾರದ ಕಾರ್ಯಸೂಚಿಗಳನ್ನು ಗಮನಿಸಿದರೆ ಇಂತಹ ಅನುಮಾನಗಳು ಹೆಚ್ಚಾಗುತ್ತಿವೆ.

ಮೇ 23ಕ್ಕೆ ವಿಚಾರಣೆ ಮುಂದೂಡಿಕೆ

ಪ್ರಶ್ನಿಸಿತು. ಆಯೋಗದ ಪರ ಹಿರಿಯ ವಕೀಲ ಕೆ.ಎನ್.ಫಣೀಂದ್ರ ವಾದ ಮಂಡಿಸಿ, ಚುನಾವಣಾ ಆಯೋಗದ ಅಧಿಕಾರವನ್ನು ಹಿಂಪಡೆದಿದೆ. ಆ ಬಗ್ಗೆ ಹೈಕೋರ್ಟ್‌ನಿಂದ ಸೂಕ್ತ ನಿರ್ದೇಶನ ಅಗತ್ಯವಿದೆ. ಎಂದರು. ಆಗ ನ್ಯಾಯಪೀಠ, ಹಾಗಿದ್ದರೆ ಸಮಗ್ರ ವಿಚಾರಣೆ ನಡೆಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟು ವಿಚಾರಣೆಯನ್ನು, ಬೇಸಿಗೆ ರಜೆ ಮುಗಿದು ಕೋರ್ಟ್ ಕಲಾಪ ಪುನಾರಂಭವಾಗುವ ದಿನ ಅಂದರೆ ಮೇ 2 ಕ್ಕೆ ಮುಂದೂಡಿತು.

ಆಯೋಗದ ಮನವಿ ಏನು: ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧ ಸುಪ್ರೀಂಕೋರ್ಟ್ ತೀರ್ಪು ನೀಡಿ, ಬಾಕಿ ಇರುವ ಎಲ್ಲ ಸಂಸ್ಥೆಗಳ ಚುನಾವಣೆಯನ್ನು ನಡೆಸಲು ನಿರ್ದೇಶನ ನೀಡಿದೆ. ಅದರಂತೆ, ರಾಜ್ಯದಲ್ಲಿ ಬಾಕಿ ಇರುವ ಜಿಲ್ಲಾ ಹಾಗೂ ತಾಲೂಕು ಪಂಚಾಯ್ತಿ ಚುನಾವಣೆ ನಡೆಸಬೇಕಾಗಿದೆ. ಈಗಾಗಲೇ ಚುನಾವಣೆ ಸಾಕಷ್ಟು ವಿಳಂಬವಾಗಿದೆ. ಈ ಕುರಿತ ಚುನಾವಣಾ ಆಯೋಗದ ಅರ್ಜಿ ವಿಚಾರಣಾ ಹಂತದಲ್ಲಿ ಬಾಕಿ ಇದೆ. ಹಾಗಾಗಿ ಸುಪ್ರೀಂಕೋರ್ಟ್ ತೀರ್ಪಿನಿಂದ ತುರ್ತು ಸ್ಥಿತಿ ಎದುರಾಗಿದೆ ಎಂದು ಚುನಾವಣಾ ಆಯೋಗ ಮೆಮೋದಲ್ಲಿ ನ್ಯಾಯಪೀಠಕ್ಕೆ ತಿಳಿಸಿದೆ.

ಸರ್ಕಾರ ಬ್ರೇಕ್: ರಾಜ್ಯ ಚುನಾವಣಾ ಆಯೋಗ ಕಳೆದ ವರ್ಷ ಏಪ್ರಿಲ್, ಮೇ ಮತ್ತು ಜೂನ್ ತಿಂಗಳಲ್ಲಿ ಅವಧಿ ಪೂರ್ಣಗೊಂಡ ರಾಜ್ಯದ ಜಿ.ಪಂ ಹಾಗೂ ತಾ.ಪಂಗಳಿಗೆ ಚುನಾವಣೆ ನಡೆಸಲು ಸಿದ್ಧತೆ ಆರಂಭಿಸಿತ್ತು. ಅದಕ್ಕಾಗಿ ಚುನಾವಣಾ ಆಯೋಗ ಕ್ಷೇತ್ರ ಪುನರ್‌ವಿಂಗಡಣೆ ಮಾಡಿ ಮತದಾರರ ಅಂತಿಮ ಪಟ್ಟಿಯನ್ನೂ ಸಹ ಪ್ರಕಟ ಮಾಡಿತ್ತು ಹಾಗೂ ಮೀಸಲು ನಿಗದಿಯ ಕರಡು ಸಹ ಪ್ರಕಟಿಸಲಾಗಿತ್ತು. ಇನ್ನೇನು ದಿನಾಂಕ ಘೋಷಣೆ ಮಾಡಬೇಕೆನ್ನುವಷ್ಟರಲ್ಲಿ ಸರ್ಕಾರ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲು ಅಧಿಕಾರವನ್ನು ಚುನಾವಣಾ ಆಯೋಗದಿಂದ ಹಿಂಪಡೆದು ಪ್ರತ್ಯೇಕವಾಗಿ ಸೀಮಾ ನಿರ್ಣಯ ಆಯೋಗ ರಚಿಸಿತ್ತು. ಅದನ್ನು ಪ್ರಶ್ನಿಸಿ ಚುನಾವಣಾ ಆಯೋಗ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ. ಆ ಅರ್ಜಿ ಇನ್ನೂ ವಿಚಾರಣಾ ಹಂತದಲ್ಲಿದೆ.

ನಾಳೆ SSLC ಫಲಿತಾಂಶ

ಫಲಿತಾಂಶದ ವಿವರ ರವಾನೆಯಾಗಲಿದೆ. ಮೇ 19ರ ಸಂಜೆ ವೇಳೆಗೆ ಫಲಿತಾಂಶದ ವಿವರಗಳು ವಿದ್ಯಾರ್ಥಿಗಳ ಮೊಬೈಲ್‌ಗಳಿಗೆ ತಲುಪಲಿದೆ. ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ಅಧಿಕೃತವಾಗಿ ಫಲಿತಾಂಶ ಪ್ರಕಟವಾದ ಕೂಡಲೇ ವೆಬ್‌ತಾಣದಲ್ಲಿ ಫಲಿತಾಂಶ ಪ್ರಕಟವಾಗಲಿದೆ. ಸರ್ಕಾರದ ಈ ಅಧಿಕೃತ ವೆಬ್ ತಾಣದಲ್ಲಿ ವಿದ್ಯಾರ್ಥಿಗಳ ಹಾಲ್ ಟಿಕೆಟ್ ನಂಬರ್ ಹಾಕಿದರೆ ಸಾಕು ವಿಷಯವಾರು ಫಲಿತಾಂಶ ಹಾಗೂ ಗಳಿಸಿದ ಒಟ್ಟು ಅಂಕದ ವಿವರ ಪ್ರಕಟವಾಗಲಿದೆ. ಒಂದೇ ಸಲ ವಿದ್ಯಾರ್ಥಿಗಳು ಫಲಿತಾಂಶದ ವಿವರ ನೋಡುವ ಕಾರಣಕ್ಕೆ ಕೆಲವೊಮ್ಮೆ ಫಲಿತಾಂಶ ತೋರಿಸದಿದ್ದರೂ, ವಿದ್ಯಾರ್ಥಿಗಳು ತಾಳ್ಮೆ ಕಳೆದುಕೊಳ್ಳಬಾರದು. ಮಿಗಿಲಾಗಿ ಮೇ 20 ರಂದೇ ಫಲಿತಾಂಶದ ವಿವರಗಳು ಆಯಾ ಶಾಲೆಗಳಿಗೆ ರವಾನೆಯಾಗಲಿದೆ. ಕೋವಿಡ್ ನಡುವೆಯೂ ಕರ್ನಾಟಕದಲ್ಲಿ ಪ್ರೌಢ ಶಿಕ್ಷಣ ಮಂಡಳಿ ನಡೆಸಿದ ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆಗೆ 8.73 ಲಕ್ಷ ವಿದ್ಯಾರ್ಥಿಗಳು ಹಾಜರಾಗಿದ್ದರು. ಮಾ. 28 ರಿಂದ ಏ.11ರವರೆಗೆ ಪರೀಕ್ಷೆ ನಡೆದಿತ್ತು. ಹದಿನೈದು ಸಾವಿರ ಶಾಲೆಗಳ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಫಲಿತಾಂಶದ ನಿರೀಕ್ಷೆಯಲ್ಲಿರುವ ವಿದ್ಯಾರ್ಥಿಗಳಿಗೆ ಇನ್ನೆರಡು ದಿನದಲ್ಲಿ ಸಮಗ್ರ ವಿವರ ಲಭ್ಯವಾಗಲಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ಸಾವಿರಾರು ಶಿಕ್ಷಕರು ಗೈರು ಹಾಜರಾಗಿದ್ದರು. ಈಗಾಗಿ ಫಲಿತಾಂಶ ಪ್ರಕಟದಲ್ಲಿ ಸ್ವಲ್ಪ ವಿಳಂಬವಾಗಿದೆ. ಮೌಲ್ಯಮಾಪನ ಪೂರ್ಣ ಮುಗಿಸಿದ್ದು, ಫಲಿತಾಂಶದ ವಿವರಗಳನ್ನು ಸಹ ಅಧಿಕೃತ ವೆಬ್ ತಾಣಕ್ಕೆ ಅಪ್ಲೋಡ್ ಮಾಡಲಾಗಿದೆ. ಇನ್ನು ಶಿಕ್ಷಣ ಸಚಿವರು ಅಧಿಕೃತವಾಗಿ ಕರ್ನಾಟಕ ರಾಜ್ಯದ ಫಲಿತಾಂಶ ಪ್ರಕಟಿಸಿದ ಕೂಡಲೇ ವೆಬ್ ನಲ್ಲಿ ಫಲಿತಾಂಶ ಪ್ರಕಟವಾಗಲಿದೆ. ಫಲಿತಾಂಶದಲ್ಲಿ ಯಾವುದೇ ತಾಂತ್ರಿಕ ದೋಷ ಕಾಣದಂತೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಪರೀಕ್ಷಾ ಮಂಡಳಿ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ದಸಂಸದಿಂದ ವಿಚಾರ ಮಂಥನ ಕಾರ್ಯಕ್ರಮ

ಡಾ. ಅಂಬೇಡ್ಕರ್ ವಿದ್ಯೆ–ವಿದ್ವತ್ ಸಮುದಾಯದ ವಿಮೋಚನೆಗೆ ಬಳಸಿದರೆ, ನಮ್ಮಿಂದ ವಿಲಾಸಕ್ಕೆ ಬಳಕೆ

ಪ್ರಗತಿಪರ ಚಿಂತಕ ಡಾ.ಎಸ್.ತುಕಾರಾಮ್ ವಿಷಾದ

ಮೈಸೂರು, ಮೇ 17(ಪಿಎಂ)– ಡಾ.ಬಿ.ಆರ್. ಅಂಬೇಡ್ಕರ್ ಅವರು ವಿದ್ಯೆ–ವಿದ್ವತ್ ಅನ್ನು ಸಮುದಾಯದ ವಿಮೋಚನೆಗೆ ಬಳಸಿದರೆ, ನಾವು ನಮ್ಮ ವಿಲಾಸಿ ಜೀವನಕ್ಕೆ ಬಳಸುತ್ತಿದ್ದೇವೆ ಎಂದು ಪ್ರಗತಿ ಪರ ಚಿಂತಕ ಡಾ.ಎಸ್.ತುಕಾರಾಮ್ ವಿಷಾದಿಸಿದರು.

ಮೈಸೂರಿನ ಅಶೋಕ ವೃತ್ತದ ವಿಶ್ವಮೈತ್ರಿ ಬುದ್ಧ ವಿಹಾರದ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ(ದಸಂಸ) ಮೈಸೂರು ಜಿಲ್ಲಾ ಶಾಖೆ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಜಿಲ್ಲಾ ಶಾಖೆ ಪದಾಧಿಕಾರಿಗಳ ಸರ್ವ ಸದಸ್ಯರ ಸಭೆ, ನೂತನ ಪದಾಧಿಕಾರಿಗಳ ಆಯ್ಕೆ ಹಾಗೂ ವಿಚಾರ ಮಂಥನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ವಿದ್ಯಾವಂತರಾಗಿ, ವಿದ್ವತ್ ಗಳಿಸಿದರು. ವಿದ್ವತ್ ಅನ್ನು ಸಮುದಾಯದ ವಿಮೋಚನೆಗೆ ಬಳಸಿದರು. ಆದರೆ ನಾವು ವಿದ್ಯೆ–ವಿದ್ವತ್ ಅನ್ನು ನಮ್ಮ ವಿಲಾಸಕ್ಕೆ ಬಳಸುತ್ತಿದ್ದೇವೆ. ಇದು ಅಂಬೇಡ್ಕರ್ ಅವರ ವ್ಯಕ್ತಿತ್ವಕ್ಕೂ ನಮಗೂ ಇರುವ ವ್ಯತ್ಯಾಸ ನಾವು ಗಳಿಸಿದ ವಿದ್ವತ್ ಅನ್ನು ನಮ್ಮವರ ವಿಮೋಚನೆಗೆ ಬಳಸದೇ ಹೋದರೆ ಅದು ಪ್ರಯೋಜನವಿಲ್ಲ ಎಂದು ತಿಳಿಸಿದರು.

ವರ್ತಮಾನ ಕಾಲದಲ್ಲಿ ದಲಿತ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಔದ್ಯೋಗಿಕವಾಗಿ ಸಮುದಾಯದ ಪ್ರಗತಿಗೆ ಎದುರಾಗಿರುವ ತೊಡಕು ನಿವಾರಿಸುವ ನಿಟ್ಟಿನಲ್ಲಿ ಚಿಂತನಾ ಶಿಬಿರಗಳು ಆಗಬೇಕು. ವಿದ್ಯಾವಂತ ಹಾಗೂ ಅವಿದ್ಯಾವಂತರ ನಡುವಿನ ಅಂತರ ತೊಡೆಯಲು ಸೇತುವೆ ನಿರ್ಮಾಣ ಮಾಡಬೇಕು ಎಂದರು.



ಮೈಸೂರಿನ ಅಶೋಕ ವೃತ್ತದ ವಿಶ್ವಮೈತ್ರಿ ಬುದ್ಧ ವಿಹಾರದ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ವಿಚಾರ ಮಂಥನ ಕಾರ್ಯಕ್ರಮದಲ್ಲಿ ಪ್ರಗತಿಪರ ಚಿಂತಕ ಡಾ.ಎಸ್.ತುಕಾರಾಮ್ ಮಾತನಾಡಿದರು.

ವ್ಯಕ್ತಿತ್ವಗಳು ಆಳಬೇಕಿದ್ದ ದೇಶ ಮತ್ತು ರಾಜ್ಯವನ್ನು ಇಂದು ವ್ಯಕ್ತಿಗಳು ಆಳುತ್ತಿದ್ದು, ವ್ಯಕ್ತಿತ್ವದ ಆಳ್ವಿಕೆಗೆ ಪೂರಕ ವಾತಾವರಣ ನಿರ್ಮಾಣ ಮಾಡಬೇಕಿದೆ. ಈ ನಿಟ್ಟಿನಲ್ಲಿ ನಮ್ಮ ಚಳವಳಿ ಮುನ್ನಡೆದರೆ ಮಾತ್ರ 40 ವರ್ಷಗಳ ಹೋರಾಟಕ್ಕೆ ಅರ್ಥ ದೊರೆಯುತ್ತದೆ. ಈ ಹಿನ್ನೆಲೆಯಲ್ಲಿ ಸಂಘಟನೆಯ ನೂತನ ಪದಾಧಿಕಾರಿಗಳು ಆಲೋಚನೆ ಮಾಡಬೇಕು ಎಂದು ಸಲಹೆ ನೀಡಿದರು.

ಉದ್ಘಾಟಿಸಿದ ದಸಂಸ ರಾಜ್ಯ ಸಂಚಾಲಕ ಲಕ್ಷ್ಮಿನಾರಾಯಣ ನಾಗವಾರ ಮಾತನಾಡಿ, ಪ್ರಸ್ತುತ ದೇಶದಲ್ಲಿ ಸಾರ್ವಜನಿಕ ವಲಯಗಳನ್ನು ಖಾಸಗೀಕರಣ ಮಾಡುವ ಮೂಲಕ ದಲಿತ ಸಮುದಾಯದ ಮೀಸಲಾತಿ ಕಸಿಯುವ ಹುನ್ನಾರ ಹೆಚ್ಚಾಗಿದೆ ಹೀಗಾಗಿ ಖಾಸಗಿ ವಲಯದಲ್ಲಿ ಮೀಸಲಾತಿಗಾಗಿ ಹೋರಾಟ ಅನಿವಾರ್ಯವಾಗಿದೆ ಎಂದು ಹೇಳಿದರು.

ಆಳುವ ಸರ್ಕಾರ ಸಂವಿಧಾನದ ಆಶಯಗಳನ್ನು ನಾಶಪಡಿಸಲು ತಿದ್ದುಪಡಿಗೆ ಕೈ ಹಾಕಿದೆ. ರೈಲ್ವೆ, ಬಿಎಸ್‌ಎನ್‌ಎಲ್ ಮೊದಲಾದ ಸರ್ಕಾರಿ ಸಂಸ್ಥೆಗಳಲ್ಲಿ ದಲಿತರು ಹೆಚ್ಚು ಉದ್ಯೋಗಾವಕಾಶ ಪಡೆದಿರುವ ಹಿನ್ನೆಲೆಯಲ್ಲಿ ಈ ಸಂಸ್ಥೆಗಳನ್ನು ಖಾಸಗಿಯವರಿಗೆ ಒಪ್ಪಿಸಿ, ದಲಿತರನ್ನು ನಿರುದ್ಯೋಗಕ್ಕೆ ದೂಡುವ ಪ್ರಯತ್ನ ನಡೆಸಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರಿ ವಲಯದಲ್ಲಿ ಸಾಕಷ್ಟು ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತಿಲ್ಲ. ಇದರಿಂದ ದಲಿತ ಮತ್ತು ಹಿಂದುಳಿದ ವರ್ಗಗಳ ಪ್ರತಿಭಾವಂತರು ಉದ್ಯೋಗದಿಂದ ವಂಚಿತವಾಗುತ್ತಿದ್ದಾರೆ. ಆದ್ದರಿಂದ ಖಾಸಗಿ ವಲಯದಲ್ಲಿ ಮೀಸಲಾತಿಗಾಗಿ ಹೋರಾಟ ನಡೆಸಬೇಕಿದೆ ಎಂದರು.

ದಲಿತ ಸಂಘರ್ಷ ಸಮಿತಿಯು ಯಾರಿಗೂ ರಾಜೀಯಾಗದೆ ಹೋರಾಟ ನಡೆಸುತ್ತಿದೆ. ಆದರೆ, ಕೆಲವರ ತಪ್ಪಿಗೆ ಇಡೀ ಚಳವಳಿಯನ್ನೇ ದೂಷಿಸುವ ಪರಿಪಾಠ ಹೆಚ್ಚಾಗುತ್ತಿದೆ. ತಪ್ಪು ಮಾಡಿದವರನ್ನು ದೂಷಣೆ ಮಾಡಿಕೊಳ್ಳಲಿ. ಆದರೆ ದಲಿತ ಸಂಘರ್ಷ ಸಮಿತಿ ಬಗ್ಗೆ ಹಗುರವಾಗಿ ಮಾತನಾಡಬಾರದು. ಮೊದಲು ದಲಿತರು ಜಾತಿಯತೆಯನ್ನು ಬಿಡಬೇಕು. ಒಳ ಮೀಸಲಾತಿ ಜಾರಿಯಾಗಬೇಕು ಎಂದು ಆಗ್ರಹಿಸಿದರು.

ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್ (ಜನ್ನಿ), ಮಾಜಿ ಮೇಯರ್ ಪುರುಷೋತ್ತಮ್, ಸಂಘಟನೆಯ ವಿಭಾಗೀಯ ಸಂಚಾಲಕ ರಾಜಶೇಖರ ಕೋಟೆ, ಸಂಘಟನೆ ಮುಖಂಡ ಆರ್.ಎಸ್.ದೊಡ್ಡಣ್ಣ ಮತ್ತಿತರರು ಹಾಜರಿದ್ದರು.



ಅಂತಾರಾಷ್ಟ್ರೀಯ ಯೋಗ ದಿನದ ಪೋಸ್ಟರ್ ಅನ್ನು ಸುತ್ತೂರು ಶ್ರೀಗಳು ಮೈಸೂರಿನ ಶಾಖಾ ಮಠದಲ್ಲಿ ಮಂಗಳವಾರ ಸಂಜೆ ಬಿಡುಗಡೆಗೊಳಿಸಿದರು. ಇದೇ ವೇಳೆ ವೈಎಫ್‌ಎಂ(ಯೋಗ ಫೆಡರೇಷನ್ ಆಫ್ ಮೈಸೂರು)ನ ಶ್ರೀ ಹರಿ, ಶಶಿಕುಮಾರ್, ನಾಗಭೂಷಣ್, ಗಣೇಶ ಕುಮಾರ್, ದೇವರಾಜ್ ಹಾಗೂ ಸರಳ ಉಪಸ್ಥಿತರಿದ್ದರು.

ಎಐಡಿಎಸ್‌ಓ ಕಾರ್ಯಕರ್ತರ ಪ್ರತಿಭಟನೆ

10ನೇ ತರಗತಿ ಪಠ್ಯದಿಂದ ಸ್ವಾತಂತ್ರ್ಯ ಹೋರಾಟಗಾರ ಭಗತ್‌ಸಿಂಗ್ ಪಠ್ಯ ಕೈಬಿಟ್ಟಿರುವುದಕ್ಕೆ ಆಕ್ರೋಶ



ಮೈಸೂರು, ಮೇ 17(ಎಂಟಿವೈ)– 10ನೇ ತರಗತಿ ಕನ್ನಡ ಪಠ್ಯ ಪುಸ್ತಕದಿಂದ ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಜೀವನ ಕುರಿತ ಪಠ್ಯ ತೆಗೆದುಹಾಕಿರುವುದನ್ನು ಖಂಡಿಸಿ ಎಐಡಿಎಸ್‌ಓ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದ ಎಐಡಿಎಸ್‌ಓ ಕಾರ್ಯಕರ್ತರು ರಾಜ್ಯ ಸರ್ಕಾರ ಭಗತ್‌ಸಿಂಗ್ ಅವರ ಕುರಿತ ಪಠ್ಯವನ್ನು ತೆಗೆದು ಹಾಕುವ ಮೂಲಕ ಉದ್ಧಟತನ ತೋರುತ್ತಿದೆ. ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರಾದ ಭಗತ್ ಸಿಂಗ್ ಬ್ರಿಟಿಷರ ವಿರುದ್ಧ ಕೆಚ್ಚೆದೆಯಿಂದ ಹೋರಾಟ ಮಾಡಿ ಬೆವರಿಳಿಸಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಭಗತ್ ಸಿಂಗ್ ಅವರ ಪಾತ್ರ ಪ್ರಮುಖವಾಗಿದೆ. ಆದರೂ ಪಠ್ಯಕ್ರಮದಿಂದ ಅವರ ಜೀವನ ಕುರಿತ ಪಠ್ಯ ತೆಗೆದು ಹಾಕಿರುವುದು ರಾಜ್ಯ ಸರ್ಕಾರದ ನಿರ್ಲಕ್ಷ್ಯದ ಪರಮಾವಧಿಗೆ ಹಿಡಿದ ಕೈಗನ್ನಡಿ ಎಂದು ಕಿಡಿಕಾರಿದರು.

ಇದೇ ವೇಳೆ ಎಐಡಿಎಸ್‌ಓ ಜಿಲ್ಲಾಧ್ಯಕ್ಷ ಸುಭಾಷ್ ಮಾತನಾಡಿ, ಶಿಕ್ಷಣ ಪ್ರಜಾತಾಂತ್ರಿಕ ಧರ್ಮ ನಿರಪೇಕ್ಷ ಹಾಗೂ ವೈಜ್ಞಾನಿಕವಾಗಿರಬೇಕೆಂಬುದು ನಮ್ಮ ನವೋದಯ ಚಳವಳಿಯ ಹರಿಕಾರರು, ಸ್ವಾತಂತ್ರ್ಯ ಸಂಗ್ರಾಮದ ಹಲವು ಮಹಾನ್ ಹೋರಾಟಗಾರರ ಆಶಯವಾಗಿತ್ತು. ಆದರೆ ಇಲ್ಲಿಯವರೆಗೂ ಆಡಳಿತ ನಡೆಸಿರುವ ಎಲ್ಲಾ ಪಕ್ಷಗಳು ಈ ಆಶಯಗಳಿಗೆ ವಿರುದ್ಧವಾಗಿ ತಮ್ಮ ಅಜೆಂಡಾಗಳನ್ನು ಪುಸ್ತಕದಲ್ಲಿ ತೂರಿಸುವ ಷಡ್ಯಂತ್ರ ರೂಪಿಸುತ್ತಾ ಬಂದಿವೆ ಎಂದು ಕಿಡಿ ಕಾರಿದರು.

ರಾಜ್ಯ ಸರ್ಕಾರದಿಂದ ಹೊಸದಾಗಿ ಪ್ರಕಟಿಸಲ್ಪಡುತ್ತಿರುವ 10ನೇ ತರಗತಿಯ ಕನ್ನಡ ಪಠ್ಯದಿಂದ ಸ್ವಾತಂತ್ರ್ಯಕ್ಕಾಗಿ 23ನೇ ವಯಸ್ಸಿಗೆ ಗಲ್ಲಿಗೇರಿದ ಕ್ರಾಂತಿಕಾರಿ ಭಗತ್ ಸಿಂಗರ ಕುರಿತಾದ ಪಾಠ ಕೈಬಿಟ್ಟು ಆರ್‌ಎಸ್‌ಎಸ್ ಸ್ಥಾಪಕ ಹಾಗೂ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸದೆ ಹೋರಾಟಕ್ಕೆ ಬೆನ್ನು ತೋರಿಸಿ, ಜನತೆಯ ಐಕ್ಯತೆಗೆ ವಿರುದ್ಧವಾಗಿ ಕೋಮು ಭಾವನೆಗಳನ್ನು ಹರಡಿದ ಕೆ.ಬಿ.ಹೆಡ್ಗೇವಾರ್ ಭಾಷಣ ಸೇರಿಸಲಾಗಿದೆ ಎಂದು ದೂರಿದರು.

ಸ್ಥಾಪಿತ ಸತ್ಯವನ್ನು ತಿರುಚುವ ಸರ್ಕಾರದ ಈ ವಿತಂಡವಾದ ಖಂಡನೀಯ. ಆಡಳಿತಾರೂಢ ಬಿಜೆಪಿ ಮತ್ತು ಸಂಘ ಪರಿವಾರದವರಿಗೆ ಭಗತ್‌ಸಿಂಗ್ ಸೇರಿದಂತೆ ಈ ದೇಶದ ಸ್ವಾತಂತ್ರ್ಯ ಸಂಗ್ರಾಮದ ಮಹಾನ್ ಕ್ರಾಂತಿಕಾರಿಗಳ ಬಗ್ಗೆ ಕಿಂಚಿತ್ತೂ ಗೌರವವಿಲ್ಲದಿರುವುದನ್ನು ಇದು ಸ್ಪಷ್ಟೀಕರಿಸುತ್ತದೆ. ಜತೆಗೆ ಜನಾಂಗೀಯ ದ್ವೇಷವನ್ನು ಖಂಡಿಸುವ ಪಿ.ಲಂಕೇಶ್ ಅವರ ಮೃಗ ಮತ್ತು ಸುಂದರಿ, ಎ.ಎನ್. ಮೂರ್ತಿರಾಯರ ವ್ಯಾಘ್ರಗೀತೆ, ಸಾರಾ ಅಬೂಬಕರ್ ಅವರ ಯುದ್ಧದಂತಹ ಹಲವು ಮೌಲ್ಯಯುತ ಪಾಠಗಳನ್ನು ಕೈಬಿಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಜಿಲ್ಲಾ ಉಪಾಧ್ಯಾಕ್ಷೆ ಆಸಿಯಾ, ಕಾರ್ಯದರ್ಶಿ ಚಂದ್ರಕಲಾ, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸ್ವಾತಿ, ಚೆಲುವನ್ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಚಂದನ್, ಚಂದ್ರಿಕಾ, ಹೇಮಾ, ಹೇಮಲತಾ, ಪ್ರಶಾಂತಿ, ಶಿವ ಮೋನಿಷಾ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.



ಮೈಸೂರಿನ 23ನೇ ವಾರ್ಡಿನಲ್ಲಿರುವ ಸೋನಾರ್ ಸ್ಟ್ರೀಟ್, ಎಂ.ಎನ್. ಜೋಯಿಸ್ ರಸ್ತೆಯಲ್ಲಿ ಮುಡಾ ಸದಸ್ಯ ನವೀನ್ ಕುಮಾರ್ ಮನೆ ಮನೆಗೆ ತೆರಳಿ ದಕ್ಷಿಣ ಪದವೀಧರರ ಕ್ಷೇತ್ರದಿಂದ ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರ ಪರ ಮತ ಯಾಚಿಸಿದರು. ಈ ಸಂದರ್ಭದಲ್ಲಿ ಶ್ರೀನಿವಾಸ್, ವಿಘ್ನೇಶ್ವರ್ ಭಟ್, ಮಂಜುನಾಥ್, ಶಿವಕುಮಾರ್, ನವೀನ್ ಉಪಸ್ಥಿತರಿದ್ದರು

11ನೇ ಪಂಚೇನ್ ಲಾಮಾ ಬಿಡುಗಡೆಗೆ ಆಗ್ರಹಿಸಿ ಪ್ರತಿಭಟನೆ



ಮೈಸೂರು, ಮೇ 17(ಎಂಟಿವೈ)– ಚೀನಿಯರ ವಶದಲ್ಲಿರುವ 11ನೇ ಪಂಚೇನ್ ಲಾಮಾ ಗೆಂಡುನ್ ಚೋಯ್ಕಿ ನ್ಯೀಮಾ ಬಿಡುಗಡೆಗೆ ಒತ್ತಾಯಿಸಿ ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಟಿಬೇಟಿಯನ್ನರು ಪ್ರತಿಭಟನೆ ನಡೆಸಿದರು.

ಟಿಬೇಟಿಯನ್ನರಿಗೆ 11ನೇ ಪಂಚೇನ್ ಲಾಮಾ ಗೆಂಡುನ್ ಚೋಯ್ಕಿ ಎರಡನೇ ಅತಿ ಮುಖ್ಯವಾದ ಧಾರ್ಮಿಕ ಮುಖಂಡರಾಗಿದ್ದಾರೆ. 1989ರಲ್ಲಿ ಚೀನಿಯರ ಆಡಳಿತಾವಧಿಯಲ್ಲಿ 10ನೇ ಪಂಚೇನ್ ಲಾಮಾ ಅವರು ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದರು. ಈ ಹಿನ್ನೆಲೆಯಲ್ಲಿ 1995ರಲ್ಲಿ ಮೇ 14ರಂದು ಟಿಬೇಟಿಯನ್ನರ ಧರ್ಮಗುರು ದಲೈಲಾಮ ಅವರು ಪಂಚೇನ್ ಲಾಮಾ ಗೆಂಡುನ್ ಚೋಯ್ಕಿ ನ್ಯೀಮಾರನ್ನು 11ನೇ ಪಂಚೇನ್ ಲಾಮಾರನ್ನಾಗಿ ನಿಯೋಜಿಸಿದರು. ಆದರೆ ಪಂಚೇನ್ ಲಾಮಾರನ್ನಾಗಿ ನಿಯೋಜಿಸಿದ ನಾಲ್ಕೇ ದಿನದಲ್ಲಿ ಗೆಂಡುನ್ ಚೋಯ್ಕಿ ಅವರು ಒಳಗೊಂಡಂತೆ ಕುಟುಂಬದ ಸದಸ್ಯರನ್ನು ಚೀನಿಯರು ಅಪಹರಿಸಿದ್ದಾರೆ ಎಂದು ಪ್ರತಿಭಟನಾಕಾರರು ದೂರಿದರು.

ಅಂದಿನಿಂದ ಇಂದಿನವರೆಗೂ 11ನೇ ಪಂಚೇನ್ ಲಾಮಾ ಗೆಂಡುನ್ ಚೋಯ್ಕಿ ನ್ಯೀಮಾ ಇರುವಿಕೆ ಬಗ್ಗೆ ಮಾಹಿತಿ ಇಲ್ಲ. ಗೆಂಡುನ್ ಚೋಯ್ಕಿ ನ್ಯೀಮಾ ಅವರು ಅತಿ ಕಿರಿಯ ರಾಜಕೀಯ ಕೈದಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಕೂಡಲೇ ಪಂಚೇನ್ ಲಾಮಾ ಗೆಂಡುನ್ ಚೋಯ್ಕಿ ನ್ಯೀಮಾ ಅವರ ಬಿಡುಗಡೆಗೆ ವಿಶ್ವಸಂಸ್ಥೆ ಸಹಕರಿಸಬೇಕು ಎಂದು ಪ್ರತಿಭಟನಾನಿರತ ಟಿಬೆಟಿಯನ್ನರು ಮನವಿ ಮಾಡಿದರು.

ಚೀನಾ ಸರ್ಕಾರವು ತನ್ನ ಹಿಡಿತದಲ್ಲಿ ಅಕ್ರಮವಾಗಿಟ್ಟುಕೊಂಡಿರುವ ಪಂಚೇನ್ ಲಾಮಾ ಸೇರಿದಂತೆ ಟಿಬೆಟಿಯನ್ನರನ್ನು ಬಿಡುಗಡೆ ಮಾಡಬೇಕು. 11ನೇ ಪಂಚೇನ್ ಲಾಮಾರ ಇರುವಿಕೆ ಹಾಗೂ ಅವರ ಧಾರ್ಮಿಕ ಶಿಕ್ಷಣದ ಸ್ಥಿತಿಗತಿ ಬಗ್ಗೆ ಮಾಹಿತಿ ನೀಡಬೇಕು. ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿ, ಸ್ವತಂತ್ರವಾಗಿ ಜೀವನ ನಡೆಸಲು ಅವಕಾಶ ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧಿಕಾರಿ ಮೂಲಕ ಪ್ರಧಾನಿಗೆ ಮನವಿ ಸಲ್ಲಿಸಲಾಯಿತು. ಮುಖಂಡರಾದ ಟೆಸೆರಿಂಗ್ ಲಾಕ್ಯಾಪ್, ಚೇಮಿ ಲ್ಹಾವೋ, ಟೆಸೆರಿಂಗ್ ದೋರ್ಜೆ, ಟೆಸೆರಿಂಗ್ ಚೋದೋನ್ ಹಾಗೂ ಬೈಲುಕುಪ್ಪೆ, ಹುಣಸೂರು, ಕೊಳ್ಳೇಗಾಲದ ಟಿಬೆಟಿಯನ್ ಕಾಲೋನಿಯ ಯುವ ಮತ್ತು ಮಹಿಳಾ ಸಂಘಟನೆಗಳ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಫ್ಯಾಟ್ ಸರ್ಜರಿ ಮೂಲಕ ಸ್ಲಿಮ್ ಆಗಲು ಹೋಗಿ

ಜೀವ ಕಳೆದುಕೊಂಡ ಕಿರುತೆರೆ ನಟಿ



ಬೆಂಗಳೂರು, ಮೇ 17–ಉದಯೋನ್ಮುಖ ಕಿರು ತೆರೆ ನಟಿಯೊಬ್ಬರು ಫ್ಯಾಟ್ ಸರ್ಜರಿ ಮೂಲಕ ಸ್ಲಿಮ್ ಆಗಲು ಹೋಗಿ ಪ್ರಾಣವನ್ನೇ ಕಳೆದುಕೊಂಡಿದ್ದಾರೆ.

ಚಿತ್ರರಂಗದಲ್ಲಿ ಸ್ಟಾರ್ ನಟಿಯಾಗಿ ಮಿಂಚಬೇಕೆಂಬ ಮಹದಾಸೆ ಹೊತ್ತು ಅದಕ್ಕೆ ತಕ್ಕಂತೆ ತನ್ನ ದೇಹಾಕೃತಿ ಹಾಗೂ ಸೌಂದರ್ಯವನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡು, ಅದರ ವ್ಯತಿರಿಕ್ತ ಪರಿಣಾಮದಿಂದ ಇಹಲೋಕ ತ್ಯಜಿಸಿದ್ದಾರೆ. ಕಿರು ತೆರೆ ಯುವನಟಿ ಚೇತನಾ ರಾಜ್(21) ನಿನ್ನೆಯಷ್ಟೇ ಬೆಂಗಳೂರಿನ ನವರಂಗ ಸರ್ಕಲ್‌ನಲ್ಲಿರುವ ಡಾ. ಶೆಟ್ಟಿ ಕಾಸ್ಮೆಟಿಕ್ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಗೆ ದಾಖಲಾಗಿದ್ದಾರೆ. ಆದರೆ ಶಸ್ತ್ರ ಚಿಕಿತ್ಸೆ ಸಂದರ್ಭದಲ್ಲಿ ಶ್ವಾಸಕೋಶಕ್ಕೆ ನೀರಿನ ಅಂಶ ಅಧಿಕ ಪ್ರಮಾಣದಲ್ಲಿ ಶೇಖರಣೆ ಆಗಿ ಉಸಿರಾಟದ ತೊಂದರೆಯಿಂದ ಮೃತಪಟ್ಟಿದ್ದಾರೆ ಎನ್ನಲಾಗಿದೆ. ಈ ಮಧ್ಯೆ ಸದರಿ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಗೆ ಅಗತ್ಯವಾದ ಸಲಕರಣೆಗಳೇ ಇರಲಿಲ್ಲ ಎಂದು ಪೋಷಕರು ದೂರಿದ್ದಾರೆ.

ಬಹಳ ಹಿಂದಿನಿಂದಲೂ ಚೇತನಾ ಡಾ. ಶೆಟ್ಟಿ ಕಾಸ್ಮೆಟಿಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಳ್ಳುತ್ತಿದ್ದರು. ವೈದ್ಯರ ಸಲಹೆ ಮೇರೆಗೆ ಫ್ಯಾಟ್‌ಗೆ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಲು ನಿರ್ಧರಿಸಿ ನಿನ್ನೆ ಬೆಳಗ್ಗೆ ಆಸ್ಪತ್ರೆಗೆ ದಾಖಲಾಗಿದ್ದಾರೆ. ಆದರೆ ಮನೆಯವರಿಗೇ ಈ ವಿಷಯ ತಿಳಿದಿರಲಿಲ್ಲವೆಂದು ಹೇಳಲಾಗಿದೆ. ಶಸ್ತ್ರ ಚಿಕಿತ್ಸೆ ವೇಳೆ ತೀವ್ರ ಅಸ್ವಸ್ಥರಾದ ಚೇತನಾ ಅವರನ್ನು ಡಾ. ಸಾಹೇಬಗೌಡ ಶೆಟ್ಟಿ ಅವರು ಶಂಕರ ಮಠದ ಕಾಡೇ ಆಸ್ಪತ್ರೆಗೆ ಸ್ಥಳಾಂತರಿಸಿದ್ದಾರೆ. ಅಲ್ಲಿಯೂ 4 ಗಂಟೆಗಳ ಕಾಲ ಚಿಕಿತ್ಸೆ ನೀಡಿದರೂ ಏನೂ ಪ್ರಯೋಜನವಾಗಲಿಲ್ಲ. ಕೊನೆಗೆ ಆಸ್ಪತ್ರೆಯ ವೈದ್ಯರು ಚೇತನಾ ಅಸುನೀಗಿರುವುದಾಗಿ ಪ್ರಕಟಿಸಿದ್ದಾರೆ.

ಆದರೆ ಕಾಡೇ ಆಸ್ಪತ್ರೆಯ ವೈದ್ಯರು ಬಸವೇಶ್ವರನಗರದ ಪೊಲೀಸರಿಗೆ ನೀಡಿರುವ ದೂರಿನಲ್ಲಿ ಡಾ. ಸಾಹೇಬಗೌಡ ಶೆಟ್ಟಿ ಅವರು ತಮ್ಮ ಆಸ್ಪತ್ರೆಗೆ ಚೇತನಾ ಅವರನ್ನು ಸ್ಥಳಾಂತರಿಸಿ, ಚಿಕಿತ್ಸೆ ನೀಡುವಂತೆ ನಮ್ಮ ಸಿಬ್ಬಂದಿಯ ಮೇಲೆ ಒತ್ತಡ ತಂದಿದ್ದಾರೆ. ಆದರೆ ಚೇತನಾ ಅವರನ್ನು ನಮ್ಮ ಆಸ್ಪತ್ರೆಗೆ ಕರೆತರುವ ಮುನ್ನವೇ ಅವರು ಅಸುನೀಗಿದ್ದರು ಎಂದು ತಿಳಿಸಿದ್ದಾರೆ.

ಇತ್ತ ಪೋಷಕರೂ ಸಹ ಡಾ. ಶೆಟ್ಟಿ ಕಾಸ್ಮೆಟಿಕ್ ಆಸ್ಪತ್ರೆ ವೈದ್ಯರ ನಿರ್ಲಕ್ಷ್ಯದಿಂದಲೇ ತಮ್ಮ ಮಗಳು ಚೇತನಾ ಸಾವನ್ನಪ್ಪಿದ್ದಾರೆ. ಪೋಷಕರ ಅನುಮತಿ ಇಲ್ಲದೇ ಅವರು ಹೇಗೆ ಸರ್ಜರಿ ಮಾಡಿದರು? ಚೇತನಾ ಸಾವಿಗೆ, ಶೆಟ್ಟಿ ಆಸ್ಪತ್ರೆಯವರೇ ಕಾರಣ ಎಂದು ಮೃತ ಚೇತನಾ ರಾಜ, ದೊಡ್ಡಪ್ಪ ರಾಜಣ್ಣ ಆರೋಪಿಸಿದ್ದಾರೆ.

ಚೇತನಾ ರಾಜ್ ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿರುವ ಗೀತಾ, ದೊರೆಸಾಮಿ, ಒಲವಿನ ನಿಲ್ದಾಣ ಇನ್ನಿತರ ಧಾರಾವಾಹಿಗಳಲ್ಲಿ ನಟಿಸುತ್ತಿದ್ದರು. ಇನ್ನೂ ಬಿಡುಗಡೆಯಾಗದ ಹವಾಯಾಮಿ ಚಿತ್ರದಲ್ಲೂ ನಟಿಸಿದ್ದರು. ಇಂದು ಮಧ್ಯಾಹ್ನ ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಂತರ ಅವರ ಪಾರ್ಥಿವ ಶರೀರವನ್ನು ಬೆಂಗಳೂರು ಉತ್ತರ ತಾಲೂಕಿನ ಅಬ್ಬಿಗೆರೆಯಲ್ಲಿರುವ ಅವರ ನಿವಾಸಕ್ಕೆ ಸ್ಥಳಾಂತರಿಸಲಾಯಿತು. ಕೆಲ ಕಾಲ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಟ್ಟು, ನಂತರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಪೋಷಕರು ದೂರಿನ ಆಧಾರದ ಮೇಲೆ ಸುಬ್ರಮಣ್ಯ ನಗರ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ ಮರಣೋತ್ತರ ಪರೀಕ್ಷೆಯ ವರದಿಯನ್ನು ವೈದ್ಯಕೀಯ ಮಂಡಳಿಗೆ ಕಳುಹಿಸುತ್ತೇವೆ. ಅಲ್ಲಿಂದ ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳುವುದಾಗಿ ಪೊಲೀಸರು ತಿಳಿಸಿದ್ದಾರೆ.

ಬುಲೆಟ್ ಪ್ರಕಾಶ್ ಸಾವು: ಪ್ರಸಿದ್ಧ ಹಾಸ್ಯ ನಟ ಬುಲೆಟ್ ಪ್ರಕಾಶ್ ಸಹ ಇದೇ ರೀತಿಯ ಫ್ಯಾಟ್ ಸರ್ಜರಿಗೆ ಒಳಗಾಗಿ ನಂತರ ಆರೋಗ್ಯದಲ್ಲಿ ಉಂಟಾದ ವ್ಯತ್ಯಯದಿಂದ ಸಾವನ್ನಪ್ಪಿದ್ದನ್ನು ಇಲ್ಲಿ ಸ್ಮರಿಸಬಹುದು.

ವಿಡಿಯೋ, ಫೋಟೋಗ್ರಾಫರ್ಸ್ ವತಿಯಿಂದ 'ಮಿನಿ ಎಕ್ಸ್‌ಪೋ'



ಮೈಸೂರು, ಮೇ 17(ಎಂಕೆ)– ಮೈಸೂರಿನ ಗನ್‌ಹೌಸ್ ವೃತ್ತದ ಸಮೀಪದಲ್ಲಿರುವ ಶಂಕರಮಠದಲ್ಲಿ ಮೈಸೂರು ಜಿಲ್ಲಾ ವಿಡಿಯೋಗ್ರಾಫರ್ಸ್ ಅಂಡ್ ಫೋಟೋಗ್ರಾಫರ್ಸ್ ಅಸೋಸಿಯೇಶನ್ ವತಿಯಿಂದ ಆಯೋಜಿಸಿರುವ 'ಮಿನಿ ಎಕ್ಸ್‌ಪೋ'ಗೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಫೋಟೋಗ್ರಫಿ ಮತ್ತು ವಿಡಿಯೋಗ್ರಫಿ ಇಂದು ದೊಡ್ಡ ಉದ್ದಿಮೆಯಾಗಿ ಬೆಳೆದಿದ್ದು, ಲಕ್ಷಾಂತರ ಮಂದಿ ಜೀವನ ರೂಪಿಸಿಕೊಂಡಿದ್ದಾರೆ. ನೆನಪುಗಳನ್ನು ಸಂಗ್ರಹಿಸಿಡುವ ಫೋಟೋಗ್ರಫಿ ವೃತ್ತಿ, ಕಲೆ, ಹವ್ಯಾಸವಾಗಿದೆ ಎಂದರು. ಮೈಸೂರು ಜಿಲ್ಲಾ ವಿಡಿಯೋಗ್ರಾಫರ್ಸ್ ಅಂಡ್ ಫೋಟೋಗ್ರಾಫರ್ಸ್ ಅಸೋಸಿಯೇಶನ್ ಅಧ್ಯಕ್ಷ ದಡದಹಳ್ಳಿ ಮಹೇಶ್, ಶ್ರೀನಿವಾಸ್ ಮತ್ತಿತರರಿದ್ದರು.

ನಿವೃತ್ತ ನ್ಯಾ.ಹೆಚ್.ಎನ್.ನಾಗಮೋಹನದಾಸ್ ಆಯೋಗದ ವರದಿ ಜಾರಿಗೆ ಆಗ್ರಹಿಸಿ

ಮೇ 20ರಂದು ನರಸೀಪುರದಲ್ಲಿ ಬೃಹತ್ ಪ್ರತಿಭಟನೆ

ತಿ.ನರಸೀಪುರ, ಮೇ 17 (ಎಸ್‌ಕೆ)– ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನದಾಸ್ ಆಯೋಗದ ವರದಿ ಯಥಾವತ್ ಜಾರಿಗೆ ಆಗ್ರಹಿಸಿ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿಯವರು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಅಹೋರಾತ್ರಿ ಧರಣಿ ಬೆಂಬಲಿಸಿ ಮೇ 20 ರಂದು ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ನಾಯಕರ ಸಂಘದ ಅಧ್ಯಕ್ಷ ಚಿಕ್ಕಯ್ಯ ತಿಳಿಸಿದರು.



ಈ ಸಂಬಂಧ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರು ಪರಿಶಿಷ್ಟ ಪಂಗಡದ ಶಿಕ್ಷಣ, ಉದ್ಯೋಗಕ್ಕಾಗಿ ಸಂವಿಧಾನಬದ್ಧವಾಗಿ ಜನಗಣತಿ ಆಧಾರದ ಮೇಲೆ ಶೇ.7.5ರಷ್ಟು ಮೀಸಲಾತಿ ಹೆಚ್ಚಿಸುವಂತೆ ವರದಿ ಸಲ್ಲಿಸಿ ಒಂದು ವರ್ಷ 8 ತಿಂಗಳು ಕಳೆದಿದೆ. ಆದರೆ ಸರ್ಕಾರ ವರದಿ ಅನುಷ್ಠಾನಗೊಳಿಸಲು ಮೀನಾಮೇಷ ಎಣಿಸುವ ಮೂಲಕ ಹಿಂದುಳಿದ ಪಪಂ ವರ್ಗಗಳಿಗೆ ದ್ರೋಹ ಬಗೆಯಲು ಹೊರಟಿದೆ ಎಂದು ಆರೋಪಿಸಿದರು.

ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪನವರು ವಾಲ್ಮೀಕಿ ಗುರುಪೀಠದಲ್ಲಿ ನಡೆದ ವಾಲ್ಮೀಕಿ ಜಾತ್ರೆ ವೇಳೆ ಪ.ಜಾತಿ, ವರ್ಗಗಳ ಮೀಸಲಾತಿ ಹೆಚ್ಚಿಸುವುದಾಗಿ ಭರವಸೆ ನೀಡಿ ನಾಗಮೋಹನದಾಸ್ ವರದಿ ಬಂದ ಬಳಿಕ ಮೀಸಲಾತಿ ಹೆಚ್ಚಿಸದೇ ದ್ರೋಹ ಬಗೆದಿದ್ದಾರೆ ಎಂದರು.

ಜಿಪಂ ಮಾಜಿ ಸದಸ್ಯ ಕೆ.ಸಿ.ಲೋಕೇಶ್ ನಾಯಕ್ ಮಾತನಾಡಿ, ನಮ್ಮ ಸಮುದಾಯದ ಸ್ವಾಮೀಜಿ ಕಳೆದ ಫೆಬ್ರವರಿಯಿಂದಲೂ ಹಿಂದುಳಿದ ವರ್ಗಕ್ಕೆ ಶೇ.7.5ರಷ್ಟು ಮೀಸಲಾತಿ ನೀಡುವಂತೆ ಆಗ್ರಹಿಸಿ ಅಹೋರಾತ್ರಿ ಧರಣಿ ನಡೆಸುತ್ತಿದ್ದರೂ, ಸರ್ಕಾರ ಸ್ಪಂದಿಸದೇ ಉದಾಸೀನ ತೋರಿದೆ. ಈ ಹಿನ್ನೆಲೆಯಲ್ಲಿ ಸ್ವಾಮೀಜಿಗಳ ಧರಣಿ ಬೆಂಬಲಿಸಿ ಮೇ 20 ರಂದು ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುತ್ತಿದೆ. ಸಮುದಾಯದ ಬಂಧುಗಳು ಅಂದು ಬೆಳಗ್ಗೆ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದಿಂದ ಆರಂಭಗೊಳ್ಳುವ ಬೃಹತ್ ಪ್ರತಿಭಟನೆಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸರ್ಕಾರವನ್ನು ಎಚ್ಚರಿಸುವ ಕೆಲಸಕ್ಕೆ ಮುಂದಾಗುವಂತೆ ಕರೆ ನೀಡಿದರು.

ಅಲಗೂಡು ನಾಗರಾಜು ಮಾತನಾಡಿ, ವಾಲ್ಮೀಕಿ ಗುರುಪೀಠದ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿಗಳು ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ನಡೆಸುತ್ತಿರುವ ಧರಣಿ ಮೇ 20ಕ್ಕೆ 100 ದಿನ ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಸ್ವಾಮೀಜಿ ಆದೇಶದ ಮೇರೆಗೆ ರಾಜ್ಯಾದ್ಯಂತ ಪ್ರತಿಭಟನೆ ನಡೆಸಲಾಗುತ್ತಿದ್ದು, ತಾಲೂಕಿನ ಸಮಾಜದ ಮುಖಂಡರು ನಿರೀಕ್ಷೆಗೂ ಮೀರಿದ ಸಂಖ್ಯೆಯಲ್ಲಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವ ಮೂಲಕ ಸಹಕಾರ ನೀಡುವಂತೆ ಮನವಿ ಮಾಡಿದರು.

ತಾಲೂಕು ನಾಯಕ ಅಧ್ಯಕ್ಷ ಚಿಕ್ಕಯ್ಯ ನೇತೃತ್ವದಲ್ಲಿ ಸಂಘದ ಮುಖಂಡರು, ಪದಾಧಿಕಾರಿಗಳು ತಾಲೂಕಿನ ಹಾಲಂಗಿ, ಕುರುಬೂರು, ಹೊಸಪುರ, ಮೇದಿನಿ, ನಿಲಸೋಗೆ, ಬಣವೆ, ಕಾಳಿಯೂರು, ಕುಕ್ಕೂರು, ತಲಕಾಡು, ಹೆಮ್ಮಿಗೆ, ಮರಡೀಪುರ ಸೇರಿದಂತೆ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನೆಗೆ ಆಗಮಿಸುವಂತೆ ಸಮಾಜದ ಮುಖಂಡರಲ್ಲಿ ಮನವಿ ಮಾಡಿದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಟಿ.ಎಚ್.ಮಂಜುನಾಥ್, ಅಲಗೂಡು ನಾಗರಾಜು, ಗೋವಿಂದರಾಜು, ತಿರುಮಕೂಡಲು ವಾಸು, ಬೂದಹಳ್ಳಿ ಸಿದ್ದರಾಜು, ನಿಲಸೋಗೆ ಮಹೇಶ್, ಮೂರ್ತಿ, ಮೂಗೂರು ಕುಮಾರ, ನಿವೃತ್ತ ಮುಖ್ಯ ಲೆಕ್ಕಾಧಿಕಾರಿ ಎಂಜೆಶಿವಸ್ವಾಮಿ, ಹೊಸಪುರ ನಾಗರಾಜು, ಸೋಮಣ್ಣ ಪುಟ್ಟನಾಯಕ, ಮಾದೇಶ, ಬಸಪ್ಪ, ಸಣ್ಣ ನಾಯಕ, ಚಂದ್ರನಾಯಕ, ಬಸವರಾಜ ನಾಯಕ, ಶಿವಮಾದ ನಾಯಕ, ಮಹದೇವ, ಮಾದೇಶ್ ಇದ್ದರು.

ಹುಲ್ಲೇಮಾಳದಲ್ಲಿ ಶ್ರೀ ಬಸವೇಶ್ವರ ಜಯಂತಿ ಆಚರಣೆ



ಸರಗೂರು, ಮೇ 17(ನಾಗೇಶ್)– ತಾಲೂಕಿನ ಹುಲ್ಲೇಮಾಳ ಗ್ರಾಮದಲ್ಲಿ ವೀರಶೈವ ಲಿಂಗಾಯತ ಸಮಾಜದಿಂದ ಶ್ರೀ ಬಸವೇಶ್ವರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಇಲ್ಲಿನ ಬಸವೇಶ್ವರ ದೇವಸ್ಥಾನವನ್ನು ತಳಿರು ತೋರಣ, ರಂಗೋಲಿ ಬಿಡಿಸಿ ವಿದ್ಯುತ್ ದೀಪಗಳಿಂದ ಸಿಂಗರಿಸಲಾಗಿತ್ತು. ದೇವಾಲಯದಲ್ಲಿ ಮುಂಜಾನೆಯಿಂದಲೇ ಹೋಮ ಹವನ ನೆರವೇರಿಸಲಾಯಿತು.

ಬಳಿಕ ಶ್ರೀ ಬಸವೇಶ್ವರರ ಭಾವಚಿತ್ರವನ್ನು ವಿವಿಧ ಹೂಗಳಿಂದ ಅಲಂಕರಿಸಿ ಎತ್ತಿನಗಾಡಿಯಲ್ಲಿ ಪ್ರತಿಷ್ಠಾಪಿಸಿ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಲಾಯಿತು.

ಈ ವೇಳೆ ಗ್ರಾಮದ ಮುಖಂಡರಾದ ಮುತ್ತಪ್ಪ, ಎಸ್.ಮಹದೇವಪ್ಪ, ಕಾರ್ತಿಕ್ ಪಟೇಲ್, ಮಣಿರಾಜ್, ಹೆಚ್.ಎನ್.ಗುರುಸ್ವಾಮಿ, ಪ್ರಭುಸ್ವಾಮಿ, ಕುಮಾರ್, ಮಹೇಶ್, ಶಿವರುದ್ರಪ್ಪ, ರಘು ಹೆಚ್.ಎಸ್. ಗುರುಮಲ್ಲೇಶ್, ಪ್ರತಾಪ್, ಪ್ರದೀಪ್, ಗ್ರಾಮಸ್ಥರಿದ್ದರು.

ನೂರನೇ ದಿನಕ್ಕೆ ಕಾಲಿಟ್ಟ ಧರಣಿ: ಸರ್ಕಾರದ ನಿರ್ಲಕ್ಷ್ಯ ಖಂಡನೀಯ

ಪಿರಿಯಾಪಟ್ಟಣ, ಮೇ 17(ವೀರೇಶ್)– ವಾಲ್ಮೀಕಿ ಪೀಠದ ಪ್ರಸನ್ನಾನಂದ ಸ್ವಾಮೀಜಿಗಳು ನಾಯಕ ಸಮಾಜದ ಮೀಸಲಾತಿ ಹೆಚ್ಚಳಕ್ಕೆ ಒತ್ತಾಯಿಸಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ನೂರನೇ ದಿನಕ್ಕೆ ಕಾಲಿಡುತ್ತಿದ್ದರೂ, ಸರ್ಕಾರ ಸ್ಪಂದಿಸದಿರುವುದು ಖಂಡನೀಯ ಎಂದು ತಾಲೂಕು ನಾಯಕ ಸಮಾಜದ ಅಧ್ಯಕ್ಷ ಪುಟ್ಟಯ್ಯ ತಿಳಿಸಿದರು.



ಪಟ್ಟಣದ ವಾಲ್ಮೀಕಿ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಾಲ್ಮೀಕಿ ಸಮುದಾಯಕ್ಕೆ ಈಗಿರುವ ಶೇ.3ರಷ್ಟು ಮೀಸಲಾತಿಯನ್ನು ಶೇ.7.5ಕ್ಕೆ ಹೆಚ್ಚಿಸುವಂತೆ ಒತ್ತಾಯಿಸಿ ಜನಾಂಗದ ಗುರುಗಳಾದ ಪ್ರಸನ್ನಾನಂದಪುರಿ ಸ್ವಾಮೀಜಿ ಪ್ರತಿಭಟನೆ ನಡೆಸುತ್ತಿದ್ದರೂ, ಸರ್ಕಾರದ ಯಾವುದೇ ಪ್ರತಿನಿಧಿಗಳು ಅವರೊಂದಿಗೆ ಮಾತುಕತೆಗೆ ಮುಂದಾಗದಿರುವುದು ಜನಾಂಗದ ಬಗ್ಗೆ ಇರುವ ನಿರ್ಲಕ್ಷ್ಯ ತೋರಿಸುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು. ಮುಂದಿನ ದಿನಗಳಲ್ಲಿ ಹೋರಾಟ ತೀವ್ರಗೊಳಿಸಿದರೆ ಅದರಿಂದಾಗುವ ಪರಿಣಾಮಕ್ಕೆ ಸರ್ಕಾರವೇ ಹೊಣೆ ಎಂದು ಎಚ್ಚರಿಸಿದರು.

ದಲಿತ ಮುಖಂಡ ವಿಜಯಕುಮಾರ್ ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ನೀಡಿದ್ದ ಮೀಸಲಾತಿಯನ್ನೇ ಇಂದಿಗೂ ಮುಂದುವರಿಸಲಾಗುತ್ತಿದೆ. ಹೀಗಾಗಿ ಜನಸಂಖ್ಯೆಗನುಗುಣವಾಗಿ ಮೀಸಲಾತಿ ನೀಡಬೇಕು. ಈ ನಿಟ್ಟಿನಲ್ಲಿ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ಆಯೋಗದ ವರದಿ ಕೂಡಲೇ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಸಭೆಯಲ್ಲಿ ವಾಲ್ಮೀಕಿ ಸಮುದಾಯದ ಮುಖಂಡರಾದ ಹರೀಶ್, ರಾಮಚಂದ್ರ ಮಾತನಾಡಿದರು. ಪುರಸಭೆ ಸದಸ್ಯ ಚಾಮರಾಜು, ಮುಖಂಡರಾದ ಮಾದೇಶ್, ಗಿರೀಶ್ ರವಿ ನಾಯ್ಕ ಮತ್ತಿತರರಿದ್ದರು.

ಹಗಿನವಾಳು ಗ್ರಾಮದಲ್ಲಿ ಭಗೀರಥ ಜಯಂತಿ



ಮಲ್ಕುಂಡಿ, ಮೇ 17(ಚನ್ನಪ್ಪ)– ಧರೆಗೆ ಗಂಗೆ ಕರೆತಂದ ಮಹಾನ್ ವ್ಯಕ್ತಿ ಭಗೀರಥ ಮಹರ್ಷಿ ಎಂದು ತಾಪಂ ಮಾಜಿ ಸದಸ್ಯ ಮೂಗಶೆಟ್ಟಿ ತಿಳಿಸಿದರು.

ಸಮೀಪದ ಹಗಿನವಾಳು ಗ್ರಾಮದಲ್ಲಿ ನಡೆದ ಶ್ರೀ ಭಗೀರಥ ಜಯಂತಿಯಲ್ಲಿ ಮಾತನಾಡಿದ ಅವರು, ಸಕಲ ಜೀವರಾಶಿಗೂ ಲೇಸನ್ನೇ ಬಯಸಿದವರಲ್ಲಿ ಭಗೀರಥ ಮಹರ್ಷಿ ಒಬ್ಬರು. ಅಂತಹ ಮಹಾಪುರುಷನ ವಂಶಜರಾದ ನಾವು ಉಪ್ಪು ತಯಾರಿಸಿ ಮಾರಾಟ ಮಾಡುವ ವೃತ್ತಿ ಮಾಡುತ್ತಿದ್ದೆವು. ಬ್ರಿಟಿಷ್ ಆಡಳಿತದಲ್ಲಿ ನಮ್ಮ ವೃತ್ತಿಗೆ ಹೊಡೆತ ಬಿತ್ತು. ಅಂದಿನಿಂದ ಸಮುದಾಯದವರು ನಾನಾ ವೃತ್ತಿ ಅವಲಂಬಿಸಿ ಜೀವನ ಸಾಗಿಸುತ್ತಿದ್ದಾರೆ. ಸಮುದಾಯವನ್ನು ಆರ್ಥಿಕವಾಗಿ ಮೇಲೆತ್ತುವ ದೃಷ್ಟಿಯಿಂದ ನಮ್ಮ ಸಮುದಾಯವನ್ನು ಎಸ್ಟಿ ಎಸ್ಟಿಗೆ ಸೇರಿಸಬೇಕು. ಸಮುದಾಯದವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣದ ಜೊತೆಗೆ ಸಂಸ್ಕಾರ ಕಲಿಸಬೇಕು ಎಂದರು.

ಗ್ರಾಪಂ ಅಧ್ಯಕ್ಷ ರಂಗರಾಮು, ಮಹದೇವಶೆಟ್ಟಿ, ಮುಖಂಡರಾದ ಚಿಕ್ಕಣ್ಣ, ಶಿವಣ್ಣ, ಪುಟ್ಟಸ್ವಾಮಿಶೆಟ್ಟಿ, ಸುನೀಲ್, ಸತೀಶ್, ವಂಶಿ, ಚಿಕ್ಕಸ್ವಾಮಿ, ಮಲ್ಲ, ಸೋಮೇಶ್, ಸ್ವಾಮಿ ಸೇರಿದಂತೆ ಗ್ರಾಮಸ್ಥರಿದ್ದರು.

ಬಸವನಹಳ್ಳಿ ಪಿಎಸಿಎಸ್‌ಗೆ ಮಾದೇಗೌಡ ಅಧ್ಯಕ್ಷ



ಬನ್ನೂರು, ಮೇ 17(ಪ್ರಭು)– ಇಲ್ಲಿಗೆ ಸಮೀಪದ ಬಸವನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಅಧ್ಯಕ್ಷರಾಗಿ ಮಾದೇಗೌಡ, ಉಪಾಧ್ಯಕ್ಷರಾಗಿ ಲಿಂಗರಾಜು ಅವಿರೋಧವಾಗಿ ಆಯ್ಕೆಯಾದರು. ಸಂಘದ ಕಚೇರಿಯಲ್ಲಿ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಇವರಿಬ್ಬರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಚುನಾವಣಾಧಿಕಾರಿಯಾಗಿ ಸತೀಶ್ ಕಾರ್ಯ ನಿರ್ವಹಿಸಿದರು. ಶಾಸಕ ಎಂ.ಅಶ್ವಿನ್ ಕುಮಾರ್, ನಿರ್ದೇಶಕರಾದ ಬಿ.ಎಸ್.ಮಹೇಶ್, ಜಯರಾಮು, ಎನ್.ಎಂ.ರಾಮಚಂದ್ರ, ಕೃಷ್ಣೇಗೌಡ, ವೆಂಕಟೇಗೌಡ, ನಂದಿನಿ, ಸುನೀತಾ, ದೇವರಾಜು, ನಾಗರಾಜು ಉಪಸ್ಥಿತರಿದ್ದರು.



ಕಂಪಲಾಪುರ ಕಿರುತೆರೆ ಕಲಾವಿದ ಡಿ.ರಾಜಣ್ಣ, ಸಮಾಜ ಸೇವಕ ಶಿವಣ್ಣ, ನಂಜನಗೂಡು ತಾಲೂಕು ಹೆಮ್ಮರಗಾಲ ಡ್ರಾಮಾ ಸೀನ್ಸ್ ಮಾಲೀಕ ಮಲ್ಲಿಕಾರ್ಜುನ, ವಿಶ್ವಮೂರ್ತಿ ಅವರು ನಿವೃತ್ತ ಲೋಕಾಯುಕ್ತ ಡಾ.ಎನ್.ಸಂತೋಷ್ ಹೆಗ್ಗಡೆ ಅವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ಸನ್ಮಾನಿಸಿದರು.

ರಘು ಆರ್. ಕೌಟಿಲ್ಯಗೆ ಮೇಲ್ಮನೆಗೆ ಅವಕಾಶ ಕಲ್ಪಿಸಲು ಮನವಿ

ಹೆಬ್ಬಾಳು, (ಕೆ.ಆರ್.ನಗರ ತಾ.) ಮೇ 17(ಜಿಟಿಕ್ ಶಂಕರ್)– ಜೂನ್‌ನಲ್ಲಿ ನಡೆಯುವ ವಿಧಾನಪರಿಷತ್ ಚುನಾವಣೆಯಲ್ಲಿ ಸೂಕ್ಷ್ಮಾತೀ ಸೂಕ್ಷ್ಮ ಸಮಾಜವಾದ ಮಡಿವಾಳ ಸಮುದಾಯದ ಮುಖಂಡರು ಹಾಗೂ ಮೈಸೂರು ಜಿಲ್ಲೆ ಬಿಜೆಪಿ ಪ್ರಭಾವಿ ನಾಯಕರೂ ಆದ ರಘು ಆರ್. ಕೌಟಿಲ್ಯ ಅವರಿಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಕೆ.ಆರ್.ನಗರ ತಾಲೂಕು ಮಡಿವಾಳ ಸಮಾಜದ ಮುಖಂಡ ಮೂಲೇಪೆಟ್ಲು ಪ್ರದೀಪ್ ಕೋರಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ರಘು ಕೌಟಿಲ್ಯ ಅವರಿಗೆ ಎರಡೂ ಬಾರಿ ಗೆಲ್ಲುವ ಅವಕಾಶವಿದ್ದರೂ ರಾಜಕೀಯ ಪಿತೂರಿಯಿಂದ ಅವರು ಅಲ್ಪ ಮತಗಳಿಂದ ಪರಾಭವಗೊಂಡಿದ್ದು, ಸಾಮಾಜಿಕ ನ್ಯಾಯದಿಂದ ನಿರಂತರವಾಗಿ ವಂಚನೆಗೊಳಗಾಗುತ್ತಿರುವ ರಘು ಕೌಟಿಲ್ಯ ಅವರಿಗೆ ಮೇಲ್ಮನೆಗೆ ಹೋಗಲು ಅವಕಾಶ ಮಾಡಿಕೊಡಬೇಕು ಎಂದು ವಿನಂತಿಸಿದ್ದಾರೆ. ರಾಜ್ಯದಲ್ಲಿ 10 ಲಕ್ಷ ಜನಸಂಖ್ಯೆ ಹೊಂದಿರುವ ಮಡಿವಾಳ ಸಮಾಜ ಹಿಂದಿನಿಂದಲೂ ರಾಜಕೀಯವಾಗಿ ವಂಚನೆಗೊಳಗಾಗುತ್ತಾ ಬಂದಿದ್ದು ಸಮಾಜಕ್ಕೆ ಸ್ಥಿರವಾದ ನಾಯಕತ್ವದ ಅವಶ್ಯಕತೆ ಇರುವುದರಿಂದ ಇವರಿಗೆ ಅವಕಾಶ ಕಲ್ಪಿಸಿದರೆ ಸಮಾಜಕ್ಕೆ ಮತ್ತು ಜಿಲ್ಲೆಗೆ ಉತ್ತಮ ನಾಯಕತ್ವ ದೊರೆಯುತ್ತದೆ ಎಂದು ತಿಳಿಸಿದ್ದಾರೆ.

ಶೀಘ್ರ ಹದಗೆಟ್ಟ ರಸ್ತೆಗಳ ಅಭಿವೃದ್ಧಿ

ತಿ.ನರಸೀಪುರ, ಮೇ 17 (ಎಸ್‌ಕೆ)– ಪ್ರಕೃತಿ ವಿಕೋಪದಿಂದ ಹದಗೆಟ್ಟಿರುವ ಪಟ್ಟಣದ ಪ್ರಮುಖ ರಸ್ತೆಗಳನ್ನು ಮಳೆ ನಿಂತ ಕೂಡಲೇ ಶೀಘ್ರ ಅಭಿವೃದ್ಧಿಪಡಿಸಲಾಗುವುದು ಎಂದು ಪುರಸಭಾಧ್ಯಕ್ಷ ಎಸ್.ಮದನ್‌ರಾಜ್ ತಿಳಿಸಿದರು.



ಪುರಸಭೆಯ ತಮ್ಮ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಕೆಲ ದಿನಗಳಿಂದ ಪಟ್ಟಣದಲ್ಲಿ ಎಡೆಬಿಡದೇ ಸುರಿಯುತ್ತಿರುವ ಮಳೆಯಿಂದಾಗಿ ಪುರಸಭಾ ವ್ಯಾಪ್ತಿಯ ಕೆಲ ಪ್ರಮುಖ ರಸ್ತೆಗಳು ಹದಗೆಟ್ಟಿವೆ. ಪ್ರಕೃತಿ ವಿಕೋಪವನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಮಳೆ ನಿಂತ ಕೂಡಲೇ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುವುದು ಎಂದರು. ಈಗಾಗಲೇ ಪಟ್ಟಣದ ಅಭಿವೃದ್ಧಿಗೆ ನಗರೋತ್ಥಾನ ಇಲಾಖೆಯಿಂದ ವಿಶೇಷ ಅನುದಾನದಡಿ 8.50 ಕೋಟಿ ರೂ. ಬಿಡುಗಡೆಯಾಗಿದ್ದು, ಆ ಪೈಕಿ ಸಿವಿಲ್ ಕಾಮಗಾರಿ ಕೈಗೊಳ್ಳಲು 3.25 ಕೋಟಿ ರೂ.ಗಳಿಗೆ ಪುರಸಭೆಯಿಂದ ಅನುಮೋದನೆ ಮಾಡಿ ಸರ್ಕಾರಕ್ಕೆ ಕಳುಹಿಸಲಾಗಿದೆ. ರಸ್ತೆ ನಿರ್ಮಾಣ ಮಾಡಲು ಡಿಯುಡಿಸಿಯವರು ಸಹ ಸರ್ವೇ ಮಾಡಿ ಹೋಗಿದ್ದು, ವರ್ಕ್ ಆರ್ಡರ್ ಬಂದ ಕೂಡಲೇ ಎಲ್ಲಾ ರಸ್ತೆಗಳ ಅಭಿವೃದ್ಧಿ ಕಾಮಗಾರಿ ಆರಂಭಗೊಳ್ಳಲಿದೆ ಎಂದರು.

ಯತೀಂದ್ರರಿಂದ ಸಮಗ್ರ ಅಭಿವೃದ್ಧಿ: ಕಾಂಗ್ರೆಸ್ ಸರ್ಕಾರದ ವೇಳೆ ಶಾಸಕ ಯತೀಂದ್ರ ಸಿದ್ದರಾಮಯ್ಯನವರು 25 ಕೋಟಿ ರೂ.ಗಳಿಗೂ ಹೆಚ್ಚಿನ ಅನುದಾನ ತಂದು ಪಟ್ಟಣದ ವಿದ್ಯಾನಗರ, ಹೌಸಿಂಗ್ ಬೋರ್ಡ್, ಆಲಗೂಡು, ಭೈರಾಪುರ ಕಾಲೋನಿಗಳನ್ನು ಅಭಿವೃದ್ಧಿಪಡಿಸಿದ್ದಾರೆ. 2015–16ರಲ್ಲಿ ವಿದ್ಯಾನಗರ ಮತ್ತು ಹೌಸಿಂಗ್ ಬೋರ್ಡ್ ಪರಿಸ್ಥಿತಿಯೇ ಬೇರೆ ಇತ್ತು. ಮಳೆ ಬಂದ ವೇಳೆ ಇಡೀ ಕಾಲೋನಿ ಕೆಸರು ಗದ್ದೆಯಂತಾಗಿ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿತ್ತು. ಆ ಕಾಲೋನಿಗಳಿಗೆ ಆಟೋದವರು ಸಹ ಬಾಡಿಗೆ ಬರದ ಪರಿಸ್ಥಿತಿ ಇತ್ತು. ಅಂತಹ ಸಂದರ್ಭ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯನವರು ವರುಣಾ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಿ ಅಭಿವೃದ್ಧಿಗೆ ಒತ್ತು ನೀಡಿದ್ದರು. ಇಂದು ಹೌಸಿಂಗ್ ಬೋರ್ಡ್ ಹಾಗೂ ವಿದ್ಯಾನಗರ ನಿವಾಸಿಗಳು ನಿರ್ಭಯವಾಗಿ ಯಾವುದೇ ತೊಂದರೆ ಇಲ್ಲದೇ ಉತ್ತಮ ರಸ್ತೆಗಳಲ್ಲಿ ಓಡಾಡುತ್ತಿದ್ದಾರೆಂದರೆ ಅದಕ್ಕೆ ಶಾಸಕ ಯತೀಂದ್ರ ಕಾರಣ ಎಂದರು.

ಮುಖ್ಯಾಧಿಕಾರಿ ವರ್ಗಾವಣೆಗೆ ಒತ್ತಾಯಿಸಿ ಡಿಸಿಗೆ ಪತ್ರ

ಹೆಚ್.ಡಿ.ಕೋಟೆ, ಮೇ 17(ಮಂಜು)– ಪುರಸಭಾಧ್ಯಕ್ಷರು ಹಾಗೂ ಸದಸ್ಯರಿಗೆ ಗೌರವ ಕೊಡದೆ ಮುಖ್ಯಾಧಿಕಾರಿ ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದು, ಇದರಿಂದ ಪಟ್ಟಣದ ಅಭಿವೃದ್ಧಿ ಕುಂಠಿತವಾಗಿದೆ. ಹಾಗಾಗಿ ಅವರನ್ನು ಬೇರೆಡೆಗೆ ವರ್ಗಾವಣೆ ಮಾಡುವಂತೆ ಪುರಸಭಾ ಸದಸ್ಯರು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.



ಪಟ್ಟಣದ ಪುರಸಭೆ ಎದುರು ಮುಖ್ಯಾಧಿಕಾರಿ ಎಂ.ವಿ.ಸಾಗರ್ ಅವರನ್ನು ವರ್ಗಾವಣೆ ಮಾಡುವಂತೆ ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಬರೆದಿರುವ ಪತ್ರ ಪ್ರದರ್ಶಿಸಿ ಮಾತನಾಡಿದ ಸದಸ್ಯರು, ಎಂ.ವಿ.ಸಾಗರ್ ಅವರು ಮುಖ್ಯಾಧಿಕಾರಿಯಾಗಿ ನಿಯೋಜನೆಗೊಂಡು 3 ತಿಂಗಳು ಕಳೆದರೂ ಪಟ್ಟಣದಲ್ಲಿ ಹೇಳಿಕೊಳ್ಳುವಂತಹ ಅಭಿವೃದ್ಧಿ ಕಾರ್ಯ ಮಾಡದೆ ಕಾಲಹರಣ ಮಾಡುತ್ತಿದ್ದಾರೆ ಎಂದು ದೂರಿದರು.

ಪುರಸಭಾಧ್ಯಕ್ಷೆ ಶಿವಮ್ಮ ಮಾತನಾಡಿ, ಮುಖ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುವಲ್ಲಿ ವಿಫಲವಾಗಿರುವ ಮುಖ್ಯಾಧಿಕಾರಿ ಸಾಗರ್ ಅವರು ಪುರಸಭೆ ಕಾಯಿದೆ ಮತ್ತು ಸರ್ಕಾರದ ಸುತ್ತೋಲೆಗಳ ಬಗ್ಗೆ ಅರಿವಿಲ್ಲದೆ ಜನಪ್ರತಿನಿಧಿಗಳಾದ ಪುರಸಭಾ ಸದಸ್ಯರಿಗೆ ಗೌರವ ಕೊಡದೇ ಅಗೌರವದಿಂದ ನಡೆದುಕೊಂಡಿದ್ದಾರೆ. ಪಟ್ಟಣಕ್ಕೆ ಸಮರ್ಪಕ ಮೂಲ ಸೌಕರ್ಯ ಒದಗಿಸುವಂತೆ ಹಾಗೂ ಸಮಸ್ಯೆಗಳನ್ನು ಬಗೆಹರಿಸುವಂತೆ ಸಾಕಷ್ಟು ಬಾರಿ ಸದಸ್ಯರು ಪತ್ರ ಹಾಗೂ ಮೌಖಿಕವಾಗಿ ಹೇಳಿದರೂ ಸಮಸ್ಯೆ ಬಗೆಹರಿಸದೇ ನಿರ್ಲಕ್ಷಿಸಿದ್ದಾರೆ. ಜನಸಾಮಾನ್ಯರು ಮತ್ತು ಹಿರಿಯ ನಾಗರಿಕರ ಕಡತ ವಿಲೇವಾರಿ ಮಾಡದೇ ಪ್ರತಿದಿನ ಕಚೇರಿ ಸುತ್ತುವಂತೆ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಪುರಸಭೆ ಅಭಿವೃದ್ಧಿಗಾಗಿ ಅಧ್ಯಕ್ಷರು, ಸರ್ವ ಸದಸ್ಯರ ಸಾಮಾನ್ಯ ಸಭೆ ಕರೆಯಲು ಏ.16ರಂದು ಪತ್ರದ ಮುಖಾಂತರ ಅಧಿಕೃತವಾಗಿ ಸೂಚಿಸಿದ್ದರೂ, ಇದುವರೆಗೂ ಸಭೆ ಕರೆದಿಲ್ಲ. ಸರ್ಕಾರ ಸಾರ್ವಜನಿಕರ ಉಪಯೋಗಕ್ಕಾಗಿ ಹಲವು ಸವಲತ್ತುಗಳನ್ನು ಜಾರಿಗೊಳಿಸಿದ್ದರೂ ವಿತರಣೆ ಮಾಡುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ ಹಾಗಾಗಿ ಇವರನ್ನು ಬೇರೆಡೆಗೆ ವರ್ಗಾವಣೆ ಮಾಡಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಸದಸ್ಯರಾದ ಆಸೀಫ್ ಇಕ್ಬಾಲ್, ಲೋಕೇಶ್, ಮಿಲ್ ನಾಗರಾಜು, ವೆಂಕಟೇಶ್, ನಂಜಪ್ಪ, ಮಧುಕುಮಾರ್, ಪ್ರೇಮ್, ಅನಿತಾ, ಸುಹಾಸಿನಿ, ಶಾಂತಮ್ಮ ಇದ್ದರು.

ಶ್ರೀ ಗವಿಸಿದ್ದೇಶ್ವರ ದೇವಸ್ಥಾನ ಜೀರ್ಣೋದ್ಧಾರಕ್ಕೆ ಭೂಮಿಪೂಜೆ

ಬೆಟ್ಟದಪುರ, ಮೇ 17 (ಶಿವದೇವ)– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದತುಂಗ ಗ್ರಾಮದ ಶ್ರೀಗವಿಸಿದ್ದೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕೆ ಮಾಜಿ ಶಾಸಕ ಕೆ.ವೆಂಕಟೇಶ್ ಗುದ್ದಲಿ ಪೂಜೆ ನೆರವೇರಿಸಿದರು.



ಬಳಿಕ ಮಾತನಾಡಿದ ಅವರು, ತಾಲೂಕಿನ 150 ಕೆರೆಗಳಿಗೆ ನೀರು ತುಂಬಿಸುವ ಯೋಜನೆ, ಪಿರಿಯಾಪಟ್ಟಣ–ಹಾಸನ ರಾಜ್ಯ ಹೆದ್ದಾರಿ ಯೋಜನೆ, ಬೆಟ್ಟದಪುರ ಪ್ರಥಮ ದರ್ಜೆ ಕಾಲೇಜು, ಉಪ ನೋಂದಣಾಧಿಕಾರಿ ಕಚೇರಿ, ಪಿರಿಯಾಪಟ್ಟಣದಲ್ಲಿ ಮಿನಿ ವಿಧಾನಸೌಧ, ಅಗ್ನಿಶಾಮಕ ಠಾಣೆ, ನೂತನ ನ್ಯಾಯಾಲಯದ ಕಟ್ಟಡ, ಅರಸು ಭವನ, ಪುರಸಭೆ ಕಟ್ಟಡ, ಸಾರ್ವಜನಿಕ ಆಸ್ಪತ್ರೆ, ಪಾಲಿಟೆಕ್ನಿಕ್ ಕಾಲೇಜು, ಕೆಎಸ್‌ಆರ್‌ಟಿಸಿ ಡಿಪೋ, ಮಾಜಿ ಸಿಎಂ ಡಿ. ದೇವರಾಜ ಅರಸು ಅವರ ಸ್ವಗ್ರಾಮ ಬೆಟ್ಟದತುಂಗವನ್ನು ದತ್ತು ಪಡೆದು ಗ್ರಾಮದ ಅಭಿವೃದ್ಧಿಗೆ ಹತ್ತು ಕೋಟಿ ರೂ. ಬಿಡುಗಡೆ, ಹಲವು ಆರೋಗ್ಯ ಕೇಂದ್ರಗಳ ಸ್ಥಾಪನೆ, ಬೆಟ್ಟದಪುರ ಹಾಗೂ ಬೆಟ್ಟದತುಂಗ ಗ್ರಾಮದಲ್ಲಿ ಬೃಹತ್ ಆರೋಗ್ಯ ಕೇಂದ್ರ ಸೇರಿದಂತೆ ತಾಲೂಕಿಗೆ 500 ಕೋಟಿ ರೂ.ಗಳನ್ನು ತಂದು ಮಾಜಿ ಸಿಎಂ ಸಿದ್ದರಾಮಯ್ಯನವರ ಸಹಾಯದಿಂದ ತಾಲೂಕನ್ನು ಅಭಿವೃದ್ಧಿಪಡಿಸಿದ್ದೇನೆ. ಆದರೆ ಕೇವಲ ರಸ್ತೆ ಮತ್ತು ಚರಂಡಿ ನಿರ್ಮಿಸಿದ ವ್ಯಕ್ತಿಗಳು ತಾಲೂಕನ್ನು ಅಭಿವೃದ್ಧಿ ಪಡಿಸುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದಾರೆ ಎಂದರು.


ಗ್ರಾಮಗಳಲ್ಲಿ ಪ್ರತಿ ವರ್ಷ ರಸ್ತೆಗಳು ಹಾಳಾಗುತ್ತವೆ. ಆದರೆ ನಾವು ನಿರ್ಮಿಸಿದ ರಸ್ತೆಗಳು 5 ವರ್ಷದವರೆಗೂ ಹಾಳಾಗದೆ ಇರುವುದಿಲ್ಲ. ಇದನ್ನೇ ನೆಪ ಮಾಡಿಕೊಂಡು ಗ್ರಾಮಗಳ ಅಭಿವೃದ್ಧಿ ಆಗಿಲ್ಲ ಎಂದು ಸುಳ್ಳು ಹೇಳುವ ವ್ಯಕ್ತಿ ಬೃಹತ್ ಯೋಜನೆಗಳನ್ನು ತಂದಿದ್ದರೆ ಜನತೆ ಮುಂದೆ ಬಹಿರಂಗಪಡಿಸಲಿ, ಸವಾಲಿಗೆ ನಾನು ಬರುವುದಾಗಿ ತಿಳಿಸಿದರು. ಮುಂದಿನ ದಿನಗಳಲ್ಲಿ ಶಿಡ್ಲು ಮಲ್ಲಿಕಾರ್ಜುನಸ್ವಾಮಿ ಬೆಟ್ಟಕ್ಕೆ ರಸ್ತೆ ನಿರ್ಮಿಸಲು ಯೋಜನೆ ಹಮ್ಮಿಕೊಂಡಿದ್ದೇವೆ. ಅಲ್ಲದೆ ವೈಯಕ್ತಿಕವಾಗಿ ನಾನು ಸಹ 1 ಲಕ್ಷ ರೂ.ಗಳನ್ನು ಈ ದೇವಾಲಯಕ್ಕೆ ನೀಡುತ್ತಿರುವುದಾಗಿ ಘೋಷಿಸಿದರು.

ಐತಿಹಾಸಿಕ ಶ್ರೀಗವಿಸಿದ್ದೇಶ್ವರ ಮತ್ತು ಶ್ರೀವೀರಭದ್ರ ಸ್ವಾಮಿ ದೇವಾಲಯದ ಜೀರ್ಣೋದ್ಧಾರಕ್ಕೆ ಗ್ರಾಮಸ್ಥರು ತಮ್ಮ ಸ್ವಂತ ಖರ್ಚಿನಲ್ಲಿ ಮನಸ್ಸು ಮಾಡಿರುವುದು ಸ್ವಾಗತಾರ್ಹ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಡಿ.ಟಿ. ಸೋಮಣ್ಣ, ಬೆಟ್ಟದಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಹಮತ್ ಜಾನ್ ಬಾಬು, ತಾಪಂ ಮಾಜಿ ಸದಸ್ಯ ಟಿ.ಎಸ್.ಮಲ್ಲಿಕಾರ್ಜುನ, ನಿವೃತ್ತ ಶಿಕ್ಷಕ ಸಣ್ಣಸ್ವಾಮಿಗೌಡ, ಕಾಂಗ್ರೆಸ್ ಮುಖಂಡರಾದ ಮಲ್ಲೇಶ್, ಗ್ರಾಪಂ ಸದಸ್ಯರಾದ ಯಶೋಧರ, ಲೋಕೇಶ್, ರತ್ನಮ್ಮ, ಸಣ್ಣಪ್ಪಾಜಿಗೌಡ, ತಿಪ್ಪೇಗೌಡ, ಸಿದ್ದರಾಮಯ್ಯಗೌಡ, ಗಿರಿ ಮಲ್ಲೇಗೌಡ, ಮಹೇಶ್, ಜಯರಾಮೇಗೌಡ, ರವಿ, ಬಸವರಾಜು, ಭೀಮಣ್ಣ, ಪುಟ್ಟರಾಜು, ಅನಿತಾ, ಸರಸ್ವತಿ, ಚಿಕ್ಕೇಗೌಡ ಇನ್ನಿತರರಿದ್ದರು.

ಮುಂಬೈ ವಿರುದ್ಧ ಎಸ್‌ಆರ್‌ಹೆಚ್‌ಗೆ ರೋಚಕ ಗೆಲುವು

ಮುಂಬೈ, ಮೇ 17– ರಾಹುಲ್ ತ್ರಿಪಾಠಿ ಅವರ ಅರ್ಧಶತಕದ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ಮುಂಬೈ ಇಂಡಿಯನ್ಸ್ ವಿರುದ್ಧ 3 ರನ್‌ಗಳ ರೋಚಕ ಗೆಲುವು ಸಾಧಿಸಿದೆ.



ಇಲ್ಲಿನ ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಸನ್‌ರೈಸರ್ಸ್ ಹೈದರಾಬಾದ್ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 193 ರನ್ ಕಲೆ ಹಾಕಿತ್ತು. ಆರಂಭದಲ್ಲೇ ಅಭಿಷೇಕ್ ಶರ್ಮಾ 9 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಬಳಿಕ ಜೊತೆಯಾದ ಪ್ರಿಯಂ ಗರ್ಗ್ ಹಾಗೂ ರಾಹುಲ್ ತ್ರಿಪಾಠಿ 78 ರನ್ ಕಾಣಿಕೆ ನೀಡಿದರು. ಆದರೆ ಪ್ರಿಯಂ ಗರ್ಗ್ 42 ರನ್ ಗಳಿಸಿ ನಿರ್ಗಮಿಸಿದರು. ಬಳಿಕ ಬಂದ ನಿಕೋಲಸ್ ಪೂರನ್ ಬಿರುಸಿನ 38 ರನ್ ಗಳಿಸಿ ಔಟಾದರು. ಮತ್ತೊಂದೆಡೆ ಅಬ್ಬರಿಸಿದ ತ್ರಿಪಾಠಿ 76 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಮುಂಬೈ ಪರ ರಮಣ್‌ದೀಪ್ ಸಿಂಗ್ 3, ಜಸ್‌ಪ್ರೀತ್ ಬೂಮ್ರಾ, ಡೇನಿಯಲ್ ಸ್ಯಾಮ್ಸ್, ರಿಲೇ ಮೆರೆಡಿತ್ ತಲಾ ಒಂದೊಂದು ವಿಕೆಟ್ ಪಡೆದರು.

ನಂತರ 194 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಮುಂಬೈ ಇಂಡಿಯನ್ಸ್‌ಗೆ ನಾಯಕ ರೋಹಿತ್ ಶರ್ಮಾ ಹಾಗೂ ಇಶನ್ ಕಿಶನ್ ಮೊದಲ ವಿಕೆಟ್‌ಗೆ 95 ರನ್‌ಗಳ ಜೊತೆಯಾಟವಾಡುವ ಮೂಲಕ ಭರ್ಜರಿ ಆರಂಭ ಒದಗಿಸಿದರು. ಈ ವೇಳೆ 4 ಸಿಕ್ಸರ್, 2 ಬೌಂಡರಿ ಒಳಗೊಂಡ 48 ರನ್ ಗಳಿಸಿದ್ದ ರೋಹಿತ್ ಶರ್ಮಾ ವಿಕೆಟ್ ಒಪ್ಪಿಸಿದರು. ಇವರ ಹಿಂದೆಯೇ ಇಶನ್ ಕಿಶನ್ ಕೂಡ 43 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ಡೇನಿಯಲ್ ಸ್ಯಾಮ್ಸ್ 15, ಟೀಮ್ ಡೇವಿಡ್ 46, ರಮಣ್ ದೀಪ್ ಸಿಂಗ್ 14 ರನ್ ಗಳಿಸಿದರು. ಎಸ್‌ಆರ್‌ಹೆಚ್ ಪರ ಬೌಲಿಂಗ್‌ನಲ್ಲಿ ಉಮ್ರಾನ್ ಮಲ್ಲಿಕ್ 3, ಭುವನೇಶ್ವರ್ ಕುಮಾರ್, ವಾಷಿಂಗ್‌ಟನ್ ಸುಂದರ್ ತಲಾ ಒಂದೊಂದು ವಿಕೆಟ್ ಪಡೆದರು. ರಾಹುಲ್ ತ್ರಿಪಾಠಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.


ವೆಂಕಟರಮಣಸ್ವಾಮಿ ನಿಧನ



ನಂಜನಗೂಡು, ಮೇ 17– ನಗರದ ಹೌಸಿಂಗ್ ಬೋರ್ಡ್ ನಿವಾಸಿ, ಪ್ರಥಮ ದರ್ಜೆ ಗುತ್ತಿಗೆದಾರ ವೆಂಕಟರಮಣಸ್ವಾಮಿ (72) ಮಂಗಳವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ದೇವರಸನಹಳ್ಳಿಯ ತೋಟದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

2007ರಲ್ಲಿ ಪ್ರಕಟವಾದ ಖ್ಯಾತ ಸಾಹಿತಿ ಡಾ.ಎಸ್.ಎಲ್.ಭೈರಪ್ಪನವರ 'ಆವರಣ' ಕಾದಂಬರಿಯಲ್ಲಿ ಕಾಶಿ ದೇವಸ್ಥಾನದ ಶಿವಲಿಂಗ ಪ್ರಸ್ತಾಪ

ಮೈಸೂರು, ಮೇ 17– ಕಾಶಿಯ ಜ್ಞಾನವಾಪಿ ಮಸೀದಿಯಲ್ಲಿ ನಡೆದ ಸರ್ವೆ ಸಂದರ್ಭದಲ್ಲಿ ಪತ್ತೆಯಾಗಿರುವ ಶಿವ ಲಿಂಗದ ಬಗ್ಗೆ 2007ರ'ಲ್ಲಿ ಪ್ರಕಟವಾದ ನಾಡಿನ ಹೆಸರಾಂತ ಹಿರಿಯ ಸಾಹಿತಿ ಡಾ. ಎಸ್.ಎಲ್. ಭೈರಪ್ಪನವರ 'ಆವರಣ' ಕಾದಂಬರಿಯಲ್ಲಿ ಪ್ರಸ್ತಾಪವಿದೆ. ಇದರಿಂದ ನಾಡಿನ ಹಿರಿಯ ಸಾಹಿತಿ ಎಸ್.ಎಲ್.ಭೈರಪ್ಪ ಅವರು ಯಾವುದೇ ವಿಚಾರದ ಬಗ್ಗೆ ಸ್ವಯಂ ಸಂಶೋಧನೆಗಿಳಿಯದೆ ಕಾದಂಬರಿಗಳನ್ನು ಬರೆಯುವುದಿಲ್ಲ ಎನ್ನುವುದಕ್ಕೆ ಜ್ಞಾನವಾಪಿ ಮಸೀದಿಯಲ್ಲಿ ಪತ್ತೆಯಾಗಿರುವ ಶಿವ ಲಿಂಗವೇ ಜ್ವಲಂತ ಸಾಕ್ಷಿ. ಔರಂಗಜೇಬನ ಕಾಲದಲ್ಲಿ ದೇವಾಲಯಗಳ ಮೇಲೆ ಅತಿಕ್ರಮಣ ನಡೆಸಿ, ಮಸೀದಿ ಕಟ್ಟಲಾಗಿತ್ತು ಎನ್ನುವುದನ್ನು ಭೈರಪ್ಪ ತಮ್ಮ 'ಆವರಣ' ಕಾದಂಬರಿಯಲ್ಲಿ ಉಲ್ಲೇಖಿಸಿದ್ದಾರೆ.



'ಆವರಣ' ಕಾದಂಬರಿಯಲ್ಲಿ, ಕಾಶಿ ವಿಶ್ವನಾಥ ದೇವಸ್ಥಾನದ ಬಗ್ಗೆ ಪ್ರಸ್ತಾಪವಿದ್ದು, ಮಂದಿರವನ್ನು ನಾಶ ಮಾಡುವಂತೆ ಔರಂಗ ಜೇಬನ ಹುಕುಂ ಬಂದಿದೆ. ಜನ ರೊಚ್ಚಿಗೇಳುತ್ತಾರೆಂಬ ಮುನ್ನೆಚ್ಚರಿಕೆಯಿಂದ ಸುಬೇದಾರ ಗಲ್ಲಿ ಗಲ್ಲಿಗಳಿಗೂ ಮುಸ್ಲಿಂ ಸೈನಿಕರನ್ನು ನಿಯೋಜಿಸಿದ್ದಾನೆ. ಗುಡಿಯ ಪೂಜಾರಿಗಳಿಗೆ ವಾಸನೆ ಬಡಿಯಿತು. ಮಂದಿರವನ್ನು ರಕ್ಷಿಸಿಕೊಳ್ಳುವುದು ಸಾಧ್ಯವಾಗದಿರಬಹುದು. ವಿಗ್ರಹವನ್ನಾದರೂ ರಾತ್ರೋರಾತ್ರಿ ಅರ್ಚಕರುಗಳೆಲ್ಲಾ ಗರ್ಭಗುಡಿಯ ಲಿಂಗವನ್ನು ವಿಸರ್ಜಿಸಿ ಸಾಗಿಸಿ ಗುಡಿಯ ಪಕ್ಕದಲ್ಲಿದ್ದ ಜ್ಞಾನವಾಪಿ ಬಾವಿಗೆ ಇಳಿಸಿ, ಗುರುತು ಸಿಗದಂತೆ ಮಣ್ಣು ಮುಚ್ಚಿ ನೆಲವನ್ನು ಮಟ್ಟ ಮಾಡಿದರು. ಮರುದಿನ ಮಂದಿರ ಕೆಡವಿದವರಿಗೆ ಇದು ತಿಳಿಯಲಿಲ್ಲ.



ಹಾಗಾಗಿ ಮೂಲ 'ವಿಶ್ವನಾಥನ ಲಿಂಗ ಉಳಿಯಿತು ಎಂದು ನಮೂದಿಸಿದ್ದಾರೆ. ಈ ಘಟನೆ ಕೇವಲ ವಾರಣಾಸಿಯ ಆಟೋರಿಕ್ಷಾ ಚಾಲಕರಿಗೆ ಮಾತ್ರವಲ್ಲ, ಅಲ್ಲಿ ವಾಸಿಸುವ ಪ್ರತಿಯೊಬ್ಬರಿಗೂ ಗೊತ್ತಿದೆ ಎಂದು ಲೇಖಕರು ಬರೆದಿದ್ದಾರೆ.

ಸಾರ್ವಜನಿಕ ತಿಳುವಳಿಕೆ ಪತ್ರ

ನನ್ನ ಕಕ್ಷಿದಾರರು ಈ ಕೆಳಗೆ ಅನುಸೂಚಿಯಲ್ಲಿ ನಮೂದಿಸಿರುವ ಸ್ವತ್ತನ್ನು, ಅದರ ಮಾಲೀಕರಾದ ಬೆಂಗಳೂರು ಸಿಟಿ, ಬೆಂಗಳೂರು ದಕ್ಷಿಣ, ಜಯನಗರ, 9ನೇ ಬ್ಲಾಕ್, 26ನೇ 'ಬಿ' ಮೇನ್, 41ನೇ ಕ್ರಾಸ್, ಮನೆ ನಂ.1113 ರಲ್ಲಿ ವಾಸವಾಗಿರುವ ಲೇಟ್ ಮರಿಲಿಂಗೇಗೌಡ ರವರ ಮಗ ಶ್ರೀ ಸುರೇಶ್ ಬಿ.ಎಂ ಮತ್ತು ಇವರ ಪತ್ನಿಯಾದ ಶ್ರೀಮತಿ ಡಿ.ಭಾರತಿ ಹಾಗೂ ಇವರ ಮಕ್ಕಳುಗಳಾದ ಕುಸುಮಿತ.ಎಸ್, & ಆದಿತ್ಯ ಸುರೇಶ್ ರವರುಗಳಿಂದ ಖರೀದಿಸುವ ಈರಾದೆಯನ್ನು ಹೊಂದಿ ಕ್ರಯದ ಕರಾರನ್ನು ಮಾಡಿಕೊಂಡಿರುವುದು ಸರಿಯಷ್ಟೆ. ಅನುಸೂಚಿ ಸ್ವತ್ತಿನ ಸಂಬಂಧ ಯಾರಿಗಾದರು ಯಾವುದೇ ರೀತಿಯ ಹಕ್ಕು, ಆಸಕ್ತಿ, ಸ್ವಾಮ್ಯ, ಕ್ಲೈಮ್, ಆಧಾರ, ಸಾಲ ಬಾಕಿ, ಇತರೆ ತಂಟೆ ತಕರಾರು ಇದ್ದಲ್ಲಿ, ಅಧಿಕಾರ ಪತ್ರ ಹೊಂದಿದ್ದಲ್ಲಿ ಅವರು ಖುದ್ದಾಗಿ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 15 (ಹದಿನೈದು) ದಿನಗಳ ಒಳಗೆ ಕೆಳಕಂಡ ನನ್ನ ಕಛೇರಿಯಲ್ಲಿ ಸಂಪರ್ಕಿಸತಕ್ಕದ್ದು ಅಥವಾ ಲಿಖಿತವಾಗಿ ತಿಳಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ಸ್ವತ್ತಿನ ಸಂಬಂಧ ಯಾರು ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಆಸಕ್ತಿ ಸೌಮ್ಯಂಗಳಿಗೂ, ಕ್ಲೈಮ್, ಆಧಾರ, ಸಾಲಬಾಕಿ ಇರುವುದಿಲ್ಲಾ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತಿನ ಸಂಬಂಧ ಕ್ರಯಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು. ಆನಂತರದಲ್ಲಿ ಉಂಟಾಗತಕ್ಕ ಯಾವುದೇ ತಂಟೆತಕರಾರುಗಳು ನನ್ನ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ

ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಜೋಗಾದಿ, 1ನೇ ಹಂತ, ನಾಗರೀಕ ಯೋಗಕ್ಷೇಮ ಮತ್ತು ಗೃಹ ನಿರ್ಮಾಣ ಸಹಕಾರ ಸಂಘ (ನಿ) ಮೈಸೂರು ರವರು ನಿರ್ಮಿಸಿ ಅಭಿವೃದ್ಧಿ ಪಡಿಸಿರುವ ಬಡಾವಣೆಯಲ್ಲಿನ, 26ನೇ ನಂಬರ್ ನಿವೇಶನಕ್ಕೆ ಚಕ್ಕುಬಂದಿ:– ಪೂರ್ವಕ್ಕೆ : 27ನೇ ನಂಬರ್ ಸ್ವತ್ತು, ಪಶ್ಚಿಮಕ್ಕೆ : 25ನೇ ನಂಬರ್ ಸ್ವತ್ತು, ಉತ್ತರಕ್ಕೆ: 231 ಮತ್ತು 230 ನೇ ಸ್ವತ್ತು, ದಕ್ಷಿಣಕ್ಕೆ : ಕಾಂತರಾಜ ಅರಸ್ ಮುಖ್ಯ ರಸ್ತೆ.

ಈ ಮಧ್ಯೆಯಲ್ಲಿರುವ ಪೂರ್ವ ಪಶ್ಚಿಮ: 50.00 ಅಡಿಗಳು, ಉತ್ತರ ದಕ್ಷಿಣ : 80.00 ಅಡಿಗಳು, ಒಟ್ಟು 444.44 ಚದರ ಗಜಗಳುಳ್ಳ ನಿವೇಶನ.

ಸಹಿ/– **ಮೋಹನ ಪಿ.**, ಬಿ.ಎ, ಎಲ್ಎಲ್‌ಬಿ
ವಕೀಲರು, ನಂ.1164, 1ನೇ ಮಹಡಿ,
ನಂಜುಂಡೇಶ್ವರ ಕಾಂಪ್ಲೆಕ್ಸ್, ನಾರಾಯಣ ಶಾಸ್ತ್ರಿ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು–04.
ಮೊ.: 9448448407.
ದಿನಾಂಕ: 17/05/2022 ಸ್ಥಳ: ಮೈಸೂರು.

ನೈರುತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ.:
13/ಎಂಜಿನಿಯರ್/2022 ದಿನಾಂಕ: 12.05.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಈ ಕೆಳಗಿನ ಕಾಮಗಾರಿಗಳಿಗೆ ಇ–ಟೆಂಡರ್‌ಗಳಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ.

ಕಾಮಗಾರಿ ವಿವರ	ಅಂದಾಜು ವೆಚ್ಚ
1 ಉಪ ಕಾಮಗಾರಿ–I: ನಾಗವಂಗಲ: ಪ್ಲಾಟ್ ಫಾರ್ಮ್ ಸಂಖ್ಯೆ 2 ರಲ್ಲಿ ಪ್ಲಾಟ್‌ಫಾರ್ಮ್ ಶೆಲ್ಟರ್ ಅನ್ನು ಒದಗಿಸುವುದು. ಉಪ ಕಾಮಗಾರಿ–II: ಹೊಸದುರ್ಗ: ಪ್ಲಾಟ್‌ಫಾರ್ಮ್ ಸಂಖ್ಯೆ 2 ರಲ್ಲಿ ಪ್ಲಾಟ್ ಫಾರ್ಮ್ ಶೆಲ್ಟರ್ ಅನ್ನು ಒದಗಿಸುವುದು. ಉಪ ಕಾಮಗಾರಿ–III: ಹನುಮನಹಳ್ಳಿ ನಿಲುಗಡೆ: 10 ಚದರ ಮೀ ವಿಸ್ತೀರ್ಣದ ಬುಕಿಂಗ್ ಆಫೀಸ್ ಕಮ್ ವೇಟಿಂಗ್ ಹಾಲ್ ನಿರ್ಮಾಣ.	Rs.13,55,725/-
2 ಮೈಸೂರು ವಿಭಾಗ: ಬೆಂಗಳೂರು– ಆರಸೀಕೆರೆ ವಿಭಾಗ: ರಸ್ತೆ ಸಂಖ್ಯೆ 1 ಮತ್ತು 3 ... (13 ಬೂತ್‌ಗಳು)– ಒಟ್ಟು ಉದ್ದ= 10.518 ಕಿ.ಮೀ	Rs. 27,44,409/-
3 ಎಡಿಎಎಸ್‌ಎನ್‌ಹೆಚ್ ನಿಯಮಾನುಸಾರ ನೇರಳೆಕಟ್ಟೆ ನಿಲ್ದಾಣದ ಅಭಿವೃದ್ಧಿ.	Rs. 25,62,569/-
4 ಮೈಸೂರು–ಚಾಮರಾಜನಗರ ವಿಭಾಗ: ಕಡಕೋಳದಲ್ಲಿ ಎಫ್ಒಬಿ ಒದಗಿಸುವುದು.	Rs. 98,60,630/-
5 ಮೈಸೂರು ವಿಭಾಗ: ಅರಸೀಕೆರೆ– ... ಭೂಮಿಯ ಜಾರುವಿಕೆ (2022–2023ರ ವರ್ಷದಲ್ಲಿ ನಿರೀಕ್ಷಿತ ಜಾರುವಿಕೆಗೆ) ಯನ್ನು ತೆರವುಗೊಳಿಸುವುದು ಮತ್ತು ಭೂಕುಸಿತದಿಂದ ಟ್ರ್ಯಾಕ್ ಅನ್ನು ಮರುಸ್ಥಾಪಿಸುವುದು ರೀಚ್–I ಮತ್ತು ಮಳೆಗಾಲದ ರಾತ್ರಿ ಗಸ್ತುಗಾಗಿ ಕಂಪ್ಯಾನಿಯನ್‌ನ ನಿಯೋಜನೆ ಮತ್ತು ದುರ್ಬಲ ಸ್ಥಳದಲ್ಲಿ ಕಾವಲುಗಾರನ ನಿಯೋಜನೆ	Rs. 1,85,18,799/-
6 ಮೈಸೂರು ವಿಭಾಗ: ಯಡಕುಮಾರಿ– ... ಭೂಮಿಯ ಜಾರುವಿಕೆ (2022–2023ರ ವರ್ಷದಲ್ಲಿ ನಿರೀಕ್ಷಿತ ಜಾರುವಿಕೆಗೆ) ಯನ್ನು ತೆರವುಗೊಳಿಸುವುದು ಮತ್ತು ಭೂಕುಸಿತದಿಂದ ಟ್ರ್ಯಾಕ್ ಅನ್ನು ಮರುಸ್ಥಾಪಿಸುವುದು ರೀಚ್–II ಮತ್ತು ಮಳೆಗಾಲದ ರಾತ್ರಿ ಗಸ್ತುಗಾಗಿ ಕಂಪ್ಯಾನಿಯನ್‌ನ ನಿಯೋಜನೆ ಮತ್ತು ದುರ್ಬಲ ಸ್ಥಳದಲ್ಲಿ ಕಾವಲುಗಾರನ ನಿಯೋಜನೆ	Rs. 1,99,20,010/-
7 ಉಪ ಕಾಮಗಾರಿ–I: ಮೈಸೂರು– ... ಕಾಲೋನಿಯಲ್ಲಿ ಕಾಲೋನಿ ರಸ್ತೆಗಳ ಸುಧಾರಣೆ. ಉಪ ಕಾಮಗಾರಿ–II: ಶಿವಮೊಗ್ಗ ಪಟ್ಟಣ: ... ಉಪ ಕಾಮಗಾರಿ–III: ... ಉಪ ಕಾಮಗಾರಿ–IV: ... ಉಪ ಕಾಮಗಾರಿ–V: ಭದ್ರಾವತಿ: ಪ್ಲಾಟ್‌ಫಾರ್ಮ್ ನಂ.1ರಲ್ಲಿ ... ಉಪ ಕಾಮಗಾರಿ–VI: ಚಿಕ್ಕಮಗಳೂರು: ಪ್ಲಾಟ್‌ಫಾರ್ಮ್ ಸಂಖ್ಯೆ 2 ರಲ್ಲಿ ಪ್ಲಾಟ್ ಫಾರ್ಮ್ ಶೆಲ್ಟರ್ ಅನ್ನು ಒದಗಿಸುವುದು.	Rs. 3,01,82,951/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 03.06.2022 ಸಮಯ: 11:00 ಗಂಟೆಯವರೆಗೆ.
ಹೆಚ್ಚಿನ ಮಾಹಿತಿಗಾಗಿ www.ireps.gov.in ಲಾಗ್ ಇನ್ ಮಾಡಿ
ಹಿರಿಯ ವಿಭಾಗೀಯ ಇಂಜಿನಿಯರ್/ಕೋ–ಒರ್ಡಿ ಮೈಸೂರು
S.W.Railways SWRRLY SWRRLY

PUBLIC NOTICE

The public in general is hereby informed that, My client Sri. M.Subhash proposes to purchase the Schedule mentioned property from Sri. Basavaraj.J. Angadi S/o Jambanna Angadi who purchased the same from Sri. Malarameran.V. under the Regisitered Sale Deed dated 25/02/2021, registerd as No.MYE-1-10911/2020-21 at the Sub register office. Mysore East. Vendor claims that he is the absolute Owner of the Property without any Lis or encumbrances.

If any person / Banks / FIS having any claim, interest, right, title, charge over the Schedule property or any minor claim, or any other charges whatsoever may kindly intimate the undersigned with supporting documents within 10 days from the date of publication of this notice, other wise my client will constraint to purchase the property treating that there is no claim over the property and no claim will be entertained thereafter.

SCHEDULE

All that piece and pracel of property bearing Site No.8, Block No.20, PID No.111495, Ward No.35, situated at Nazarabad Mohalla, formed by Karnataka State D group Employees Housing Society, Sathagalli Extension, Shakthi Nagara, Mysore. Measuring East to West 30 ft, North to South 40 ft with building, structures standing thereon bounded on: East by: Site Number 9, West by : Site Number 7, North by: Road, South by: Site Number 21

Sd/- L.Devaraju & Associates
No.5, Silver Glade, 1st Floor,
Wellington Street, Richmond town, Bengaluru -560025,
Mobile:- 9900982666
Place: Bengaluru

ಸಾರ್ವಜನಿಕ ತಿಳುವಳಿಕೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಮೈಸೂರು ನಗರ, ಜೆ.ಪಿ. ನಗರ, 'ಎ' ಬ್ಲಾಕ್, 1ನೇ ಮುಖ್ಯ ರಸ್ತೆ, ಶ್ರೀಗಂಧ, ಮನೆ ನಂ.50ರಲ್ಲಿ ವಾಸವಾಗಿರುವ ಶ್ರೀ ಆರ್. ಎಸ್. ರಾಜಶೇಖರ ರವರ ಮಗನಾದ ಶ್ರೀ ಆರ್. ವೀರೇಶ್‌ರವರು ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನನ್ನು, ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಉದ್ಬೂರು ಗ್ರಾಮದಲ್ಲಿ ವಾಸವಾಗಿರುವ ಲೇಟ್ ಗೋದಯ್ಯನ ಮಗನಾದ ಶ್ರೀಕುಳ್ಳನಾಯ್ಕ, ಶ್ರೀಕುಳ್ಳನಾಯ್ಕರವರ ಧರ್ಮಪತ್ನಿಯಾದ ಶ್ರೀಮತಿ ತಿಮ್ಮಮ್ಮ, ಲೇಟ್ ಮರಿಚೌಡನಾಯ್ಕರವರ ಮಕ್ಕಳಾದ ಶ್ರೀಮತಿ ಶಿವದಂಡಮ್ಮ ಹಾಗೂ ಶ್ರೀಮತಿ ಚೌಡಮ್ಮ, ಲೇಟ್ ಕೃಷ್ಣರವರ ಧರ್ಮಪತ್ನಿಯಾದ ಶ್ರೀಮತಿ ದೇವಮ್ಮ, ಲೇಟ್ ಕುಳ್ಳನಾಯ್ಕರವರ ಮಕ್ಕಳಾದ ಶ್ರೀಚೌಡಯ್ಯ, ಶ್ರೀಚಿಕ್ಕತಮ್ಮಯ್ಯ, ಶ್ರೀಚಿಕ್ಕತಮ್ಮಯ್ಯರವರ ಧರ್ಮಪತ್ನಿಯಾದ ಶ್ರೀಮತಿಚಿಕ್ಕತಾಯಮ್ಮ, ಲೇಟ್ ಗೋದಯ್ಯ ರವರ ಮಗಳಾದ ಶ್ರೀಮತಿ ಮರಿದಂಡಮ್ಮ, ಲೇಟ್ ದಂಡಯ್ಯರವರ ಧರ್ಮಪತ್ನಿಯಾದ ಶ್ರೀಮತಿ ಚೌಡಮ್ಮ ಉ॥ ಮಲ್ಲಿ, ಶ್ರೀಮತಿ ಕರಿದಂಡಮ್ಮರವರುಗಳಿಂದ ಷೆಡ್ಯೂಲ್ ಸ್ವತ್ತನ್ನು, ದಿನಾಂಕ: 31–01–2009 ರಂದು ಸ್ಥಿರ ಸ್ವತ್ತಿನ ಕ್ರಯದ ಒಪ್ಪಂದದ ಕರಾರು ಪತ್ರವನ್ನು ಬರೆಸಿಕೊಂಡು ಮುಂಗಡ ಹಣವನ್ನು ಸಂದಾಯ ಮಾಡಿರುತ್ತಾರೆ.

ಹಾಗಾಗಿ ಸಾರ್ವಜನಿಕರಲ್ಲಿ ತಿಳಿಸುವುದೇನೆಂದರೆ ಷೆಡ್ಯೂಲ್ ಸ್ವತ್ತಿನ ಮೇಲೆ ನಮ್ಮ ಕಕ್ಷಿದಾರರಿಗೆ ಹಕ್ಕು ಬಾಧ್ಯತೆಗಳು ಇರುವುದರಿಂದ ಸದರಿಸ್ವತ್ತಿಗೆ ಸಂಬಂಧಿಸಿದಂತೆ ಮೇಲೆ ತಿಳಿಸಿರುವ ವ್ಯಕ್ತಿಗಳ ಹಾಗೂ ಅವರ ಕುಟುಂಬದವರ ಜೊತೆ ಯಾರೂ ಸಹ ಯಾವುದೇ ವಿಧವಾದ ಕ್ರಯ, ಕರಾರು, ಆಧಾರ, ಭೋಗ್ಯ ಇತ್ಯಾದಿ ವ್ಯವಹಾರಗಳನ್ನು ಮಾಡಬಾರದೆಂದು ತಿಳಿಯಪಡಿಸುತ್ತೇವೆ. ಒಂದು ವೇಳೆ ವ್ಯವಹರಿಸಿದಂತಹ ಪಕ್ಷದಲ್ಲಿ ಅಂತಹ ವ್ಯವಹಾರವು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ಅಲ್ಲದೆ ಅದರಿಂದ ಉಂಟಾಗುವ ನಷ್ಟಗಳಿಗೆ ನೀವುಗಳೇ ಜವಾಬ್ದಾರರಾಗಿರುತ್ತೀರಿ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ತಳೂರು ಗ್ರಾಮದ ಸರ್ವೆ ನಂಬರ್.51/1 ರಲ್ಲಿ ವಿಸ್ತೀರ್ಣ 3ಎಕರೆ 01ಗುಂಟೆ ಖುಷ್ಕಿ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ: ಸರ್ವೆ ನಂಬರ್ 53ರಜಮೀನು, ಪಶ್ಚಿಮಕ್ಕೆ: ಸರ್ವೆ ನಂಬರ್ 315 ರಜಮೀನು, ಉತ್ತರಕ್ಕೆ : ಸರ್ವೆ ನಂಬರ್ 313 ಮತ್ತು 52 ರ ಜಮೀನು, ದಕ್ಷಿಣಕ್ಕೆ: ಸರ್ವೆ ನಂಬರ್ 51/2ರ ಜಮೀನು.

ಶ್ರೀರಮೇಶ್ ಎ. ಎಂ., ಬಿ.ಎಸ್‌ಸಿ.,ಎಲ್‌ಎಲ್.ಬಿ.,
ವಕೀಲರು, ಮೊಬೈಲ್: 9945569764,
ನಂ. 218/ಕೆ–30, ಎನ್. ಎಸ್. ರಸ್ತೆ,
ಕೆ.ಆರ್. ಮೊಹಲ್ಲಾ, ಮೈಸೂರು.
ದಿನಾಂಕ: 16–05–2022

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಪ್ರಕಟಣೆಯ ಮೂಲಕ ತಿಳಿಸುವುದೇನೆಂದರೆ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಲಲಿತಾದ್ರಿಪುರ ಗ್ರಾಮ, ಬಸವೇಶ್ವರ ರಸ್ತೆ, ಮನೆ ನಂ.39 (ಹಳೆ ನಂ.37) ರಲ್ಲಿ ವಾಸವಾಗಿರುವ ಲೇಟ್ ಎಲ್.ಎಸ್. ಮಹದೇವಪ್ಪ (ಮಹದೇವ) ರವರ ಮಗನಾದ ಸುಮಾರು 32 ವರ್ಷ ವಯಸ್ಸಿನ ಶ್ರೀ ರವಿಕಿರಣ್.ಎಂ. ಮತ್ತು ಇವರ ಧರ್ಮಪತ್ನಿ ಶ್ರೀಮತಿ ವಿಂದ್ಯಾ ಎಂ.ಎಸ್. ಇವರುಗಳಿಗೆ ಷೆಡ್ಯೂಲ್ ಸ್ವತ್ತನ್ನು ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ನಿರ್ಮ್ಯತ್ವ ಕ್ವಾರ್ಟ್ರಸ್. ಕೆ.ಎ. ಟೀಚಿಂಗ್ ಕ್ವಾಟರ್, ಕೆ.ಯು.ಕ್ಯಾಂಪಸ್, 7ನೇ ವಾರ್ಡ್, ಮನೆ ನಂ. ಇ–05 ರಲ್ಲಿ ವಾಸವಿದ್ದು, ಹಾಲಿ ಹುಬ್ಬಳ್ಳಿ ಜಿಲ್ಲೆ, ವಿದ್ಯಾನಗರ, ಅಕ್ಷಯ ಕಾಲೋನಿ, ಚೇತನ ಕಾಲೇಜು ಎದುರು, ಮನೆ ನಂ. ಬಿ–002 ರಲ್ಲಿ ವಾಸವಾಗಿರುವ ಕೆ. ಪ್ರೇಮಕುಮಾರ್ ರವರ ಧರ್ಮಪತ್ನಿಯಾದ ಸುಮಾರು 55 ವರ್ಷ ವಯಸ್ಸಿನ ಶ್ರೀಮತಿ ಈ.ನಾಗರತ್ನ, ಇವರು ಮಾರಾಟ ಮಾಡಲು ಒಪ್ಪಂದ ಮಾಡಿಕೊಂಡು ದಿನಾಂಕ: 18.09.2021 ರಂದು ನೋಂದಾಯಿತ ಕ್ರಯದ ಕರಾರನ್ನು ಬರೆದುಕೊಟ್ಟು ನನ್ನ ಕಕ್ಷಿದಾರರುಗಳಿಗೆ ಮಾರಾಟ ಮಾಡಲು ಮಾತುಕತೆ ಮುಗಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ವ್ಯಕ್ತಿಗಳಿಗೆ ಯಾವುದೇ ರೀತಿಯ ಹಕ್ಕು ವಗೈರೆ ಇದ್ದಲ್ಲಿ ಅದನ್ನು ದಾಖಲೆ ಸಹಿತ ಈ ಕೆಳಗೆ ಸಹಿ ಮಾಡಿರುವ ವಕೀಲರ ಕಛೇರಿಯ ವಿಳಾಸಕ್ಕೆ ಈ ಪ್ರಕಟಣೆಯ ದಿನದಿಂದ ಏಳು (7) ದಿನಗಳ ಒಳಗಾಗಿ ಲಿಖಿತವಾಗಿ ತಿಳಿಸತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಬೇರೆ ಯಾರಿಗೂ ಯಾವುದೇ ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ ಕ್ರಯವನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಮೈಸೂರು ನಗರ, ಜಿಲ್ಲೆ ಮೊಹಲ್ಲಾ, ನಾಚನಹಳ್ಳಿ ಪಾಳ್ಯ, ಹಳೇ ಊರು ಇಲ್ಲಿಗೆ ಸೇರಿದ ಖಾತಾ ನಿವೇಶನ ನಂ.160 ವಿಭಾಗ ಮಾಡಿದ ನಂತರ ಉಪ ನಂ. 160/ಎ ಪಶ್ಚಿಮ ಭಾಗದ ಸ್ವತ್ತಿನ ವಿಸ್ತೀರ್ಣ ಪೂರ್ವ – ಪಶ್ಚಿಮ 30 ಅಡಿಗಳು ಮತ್ತು ದಕ್ಷಿಣೋತ್ತರ 80 ಅಡಿಗಳು ಒಟ್ಟು 2400 ಚದರಡಿಗಳುಳ್ಳ ಖಾಲಿ ನಿವೇಶನಕ್ಕೆ ಚೆಕ್ಕುಬಂದಿ ಪೂರ್ವಕ್ಕೆ: ಎಸ್.ನಾಗರಾಜು ಮತ್ತು ನಾಗಪುಷ್ಪಲತಾ ರವರ ನಿವೇಶನ, ಪಶ್ಚಿಮಕ್ಕೆ : ಖಾಸಗಿಯವರ ಸ್ವತ್ತು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಖಾಸಗಿಯವರ ಸ್ವತ್ತು.

ಸಹಿ/– **ಹೆಚ್.ಎಸ್.ಮಹದೇವಸ್ವಾಮಿ,**
ಬಿ.ಎ.ಎಲ್.ಎಲ್.ಬಿ, ವಕೀಲರು
ಕಛೇರಿಯ ವಿಳಾಸ: ರೂಂ. ನಂ.1, 2ನೇ ಮಹಡಿ, ಮಾರಮ್ಮ ದೇವಸ್ಥಾನದ ಬಿಲ್ಡಿಂಗ್, ಬಜ್ಜಣ್ಣ ಲೇನ್, ಚಾಮರಾಜಪುರಂ, ಮೈಸೂರು.
ಮೊಬೈಲ್ ನಂ: 99003 75433
ಸ್ಥಳ: ಮೈಸೂರು. ತಾರೀಖು: 17.05.2022

ಸಾರ್ವಜನಿಕರ ಗಮನಕ್ಕಾಗಿ

ರಾಮನಗರ ಜಿಲ್ಲೆ, ಚನ್ನಪಟ್ಟಣ ಟೌನ್, ಕೋಟೆ, ಪಾರ್ವತಿ ಟಾಕೀಸ್ ರಸ್ತೆ, ಡೋರ್ ನಂ.1004/7ಎ ರಲ್ಲಿ ವಾಸವಾಗಿರುವ ದಿವಂಗತ ತಿಮ್ಮೇಗೌಡರ ಪುತ್ರ ಶ್ರೀ ಟಿ.ಎಂ.ಲಕ್ಷ್ಮಣ, ವಕೀಲರು ಫೋನ್ ನಂ. 9448847111, ಇವರು ಈ ಕೆಳಕಂಡಂತೆ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ,

ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತು ಶ್ರೀ ಶ್ರೀಗುರು.ಎಂ.ಎಸ್. ರವರು ದಿನಾಂಕ: 07–04–2021 ರಂದು ಕ್ರಯಕ್ಕೆ ಪಡೆದ ಸ್ವತ್ತಾಗಿರುತ್ತದೆ. ಈ ಸ್ವತ್ತನ್ನು ನಾನು ಕ್ರಯಕ್ಕೆ ಪಡೆಯಬೇಕೆಂದು ತೀರ್ಮಾನಿಸಿದ್ದು, ಈ ಸ್ವತ್ತಿನ ಬಗ್ಗೆ ಯಾರಿಗಾದರೂ ಯಾವುದೇ ರೀತಿಯ ಹಕ್ಕಾಗಲೀ, ಅಧಿಕಾರವಾಗಲೀ, ಈ ಬಗ್ಗೆ ಯಾರಿಗಾದರೂ ಆಕ್ಷೇಪಣೆ ಇದ್ದಲ್ಲಿ ಸದರಿ ಆಕ್ಷೇಪಣೆಯನ್ನು ಈ ಪ್ರಕಟಣೆಯು ಪ್ರಕಟವಾದ 15 ದಿವಸದೊಳಗಾಗಿ ದಾಖಲೆಗಳ ಸಮೇತ ನನ್ನ ಮೇಲ್ಕಂಡ ವಿಳಾಸಕ್ಕೆ ನೀಡತಕ್ಕದ್ದು, ಸದರಿ ಆಕ್ಷೇಪಣೆಯು ನೈಜ ಮತ್ತು ಸರಿ ಇದ್ದ ಪಕ್ಷದಲ್ಲಿ ಅದನ್ನು ಪರಿಗಣಿಸಲಾಗುವುದು. ಒಂದು ವೇಳೆ ಮೇಲ್ಕಂಡ ಸಮಯದಲ್ಲಿ ಯಾವುದೇ ಆಕ್ಷೇಪಣೆ ಬಂದಿಲ್ಲವಾದ ಪಕ್ಷದಲ್ಲಿ ಯಾರದೂ ಆಕ್ಷೇಪಣೆ ಇಲ್ಲವೆಂದು ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ನಾನು ಕ್ರಯಕ್ಕೆ ಪಡೆಯಲಾಗುತ್ತದೆಂದು ತಿಳಿಯುವುದು.

ಷೆಡ್ಯೂಲ್: ಮೈಸೂರು ನಗರಕ್ಕೆ ಒಳಪಟ್ಟ ಶ್ರೀ ಮಹದೇಶ್ವರ ಹೌಸ್ ಬಿಲ್ಡಿಂಗ್ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್ ಮೈಸೂರು ರವರು ಶ್ರೀ ಮಹದೇಶ್ವರ ನಗರ ವ್ಯಾಪ್ತಿಯಲ್ಲಿ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹೆಬ್ಬಾಳು ಗ್ರಾಮದಲ್ಲಿ ನಿವೇಶನಗಳನ್ನಾಗಿ ಮಾಡಿರುವ ಪೈಕಿ ನಿವೇಶನದ ಸಂಖ್ಯೆ : 234/1 ವಿಸ್ತೀರ್ಣ ಪೂರ್ವ–ಪಶ್ಚಿಮ 60 ಅಡಿಗಳು, ಉತ್ತರ – ದಕ್ಷಿಣ 40 ಅಡಿಗಳು ಈ ಸ್ವತ್ತಿಗೆ ಚೆಕ್ಕುಬಂದಿ :– ಪೂರ್ವಕ್ಕೆ: ನಿವೇಶನ ಸಂಖ್ಯೆ 230, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ: ನಿವೇಶನ ಸಂಖ್ಯೆ 235, ದಕ್ಷಿಣಕ್ಕೆ: ನಿವೇಶನ ಸಂಖ್ಯೆ 234 ರ ಸ್ವತ್ತಾಗಿದ್ದು ಈ ಸ್ವತ್ತನ್ನು ಕ್ರಯಕ್ಕೆ ಪಡೆಯಲು ಇಚ್ಛಿಸಲಾಗಿರುತ್ತದೆ.

Sd/- T.M.Lakshmana, B.Sc., LL.B.,
Notary and Advocate,
TML Associates, Bank Legal Advisor,
Opp. Parvathi Talkies, Fort,
Channapatna-562160
Mobile No.: 9448847111, 8088281277
ದಿನಾಂಕ: 17–05–2022

ಒಂದನೇ ವರ್ಷದ ಸವಿನೆನಪು



ಕೆ.ಗಂಗಾಧರ್ (ಚೌಳು)
(R.T.O)
ಜನನ:15.12.1982
ಮರಣ:18.05.2021

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.
ದುಃಖತಪ್ತರು:
ತಂದೆ ತಾಯಿ ಶ್ರೀಮತಿ ಪುಟ್ಟಸಿದ್ದಮ್ಮ, ಕರಿಯಯ್ಯ , ಪತ್ನಿ: ಶ್ರೀಮತಿ ಯಶೋದ, ಮಗಳು ಗೌತಮಿ (ಜೀಟು), ಅಕ್ಕ, ಅಣ್ಣ ತಮ್ಮ ತಂಗಿ ಹಾಗೂ ಕುಟುಂಬವರ್ಗ, ಅಶೋಕಪುರಂ, ಮೈಸೂರು

11ನೇ ದಿನದ ಹಾಲು ತುಪ್ಪ



18.05.2022 ರಂದು ಸ್ವಗ್ರಾಮದಲ್ಲಿ ಹಾಲು ತುಪ್ಪ
ದುಃಖತಪ್ತರು:
ಹೆಂಡತಿ: ಚೆನ್ನಮ್ಮ,
ಮಗಳು:ರಾಣಿ, ಗೌರಿ,
ಮಗ: ಚಿಕ್ಕಣ್ಣ ,ಕೃಷ್ಣ.ಸಿ
ಹಾಗೂ ರಮ್ಮನಹಳ್ಳಿ ಗ್ರಾಮಸ್ಥರು

ಚಿಕ್ಕೇಗೌಡ
ಮಾಜಿ.ತಾ.ಪಂ. ಸದಸ್ಯರು ರಮ್ಮನಹಳ್ಳಿ, ಮೈಸೂರು. ನಿಧನ:09.05.2022

1ನೇ ವರ್ಷದ ಪುಣ್ಯಸ್ಮರಣೆ



ಕೆಂಪರಾಮು (ರಾಮಣ್ಣ)

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಕುಟುಂಬವರ್ಗ

ಮೊದಲನೇ ವರ್ಷದ ಸವಿನೆನಪು



ಲಕ್ಕಯ್ಯ (CFTRI Rtd.)
ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರು ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.
ದುಃಖತಪ್ತರು: ಸಾವಿತ್ರಮ್ಮ (ಪತ್ನಿ), ಮತ್ತು ಕುಟುಂಬವರ್ಗದವರು

1ನೇ ವರ್ಷದ ಪುಣ್ಯಸ್ಮರಣೆ



ಚೆಲುವರಾಜು.ಪಿ
ದುಃಖತಪ್ತರು:
ಕುಟುಂಬವರ್ಗದವರು ಹಾಗೂ ಸ್ನೇಹಿತರು

DOCUMENT LOST

I, Mohammed Azam Dastagir S/o Late Mohammed Dastagir R/a No.51, 1st Floor, VII Cross, Shivaji Main Road, N.R.Mohalla, Mysuru City, have lost Sale Deed between Smt. Zainabi sold property to Abdul Khadar Dt. 28-12-1945, Reg. Doc. No. 2841, Book No.1, Volume 1573, Pages 166-169, Mysore on 30-12-1945, Sale Deed between Abdul Kahadar to Sofia Begum Dt. 15-01-1959, Reg. Doc. No. 5341, Book No.1, Volume 2377, Pages 159-160, Mysore on 16-01-1959 Khata Dt. 25-02-1959 of Sofiya Begum & Khata Dt. 5-02-2007 of Mohammed Sami UR Rahman pertains to property No.3151, New No.L-3, Dawood Khan Road, Lashkar Mohalla, Mysuru. Finders Contact:
9980614200

